# ಕರ್ನಾಟಕ ಸರ್ಕಾರ
# ರೇಷ್ಮೆ ಇಲಾಖೆ

## ಮಾಹಿತಿ ಹಕ್ಕು ಅಧಿನಿಯಮ–2005
## { 4(1)(ಬಿ) ನ 2024–25 ರ ಮಾಹಿತಿಗಳು }

ದಿನಾಂಕ: 22/04/2025

## 4(1)(ಬಿ)(i)ಇಲಾಖೆಯ ಸಂಘಟನೆ, ಚಟುವಟಿಕೆಗಳು ಮತ್ತು ಕರ್ತವ್ಯಗಳ ವಿವರಗಳು.

### ರೇಷ್ಮೆ ಇಲಾಖೆ ಸಂಘಟನೆ ಮತ್ತು ಇಲಾಖೆಯ ಕಾರ್ಯಚಟುವಟಿಕೆಗಳು.

**ಸಂಘಟನೆ:-**

ರೇಷ್ಮೆ ಇಲಾಖೆಯು ರಾಜ್ಯದಲ್ಲಿ ರೇಷ್ಮೆ ಕೃಷಿ ಚಟುವಟಿಕೆಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇಲಾಖೆಯ ಆಯುಕ್ತರು ಮತ್ತು ನಿರ್ದೇಶಕರ ನೇತೃತ್ವದಲ್ಲಿ ಇಲಾಖೆಯ ವಿವಿಧ ವೃಂದದ ತಾಂತ್ರಿಕ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ರೇಷ್ಮೆ ಕೃಷಿ ಅಭಿವೃದ್ಧಿಯ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಇಲಾಖೆಯ ತಾಂತ್ರಿಕ ವಿಭಾಗ, ಆಡಳಿತ ವಿಭಾಗ ಆಯುಕ್ತರ ಮಾರ್ಗದರ್ಶನದಲ್ಲಿ ಇಲಾಖೆಯ ವಿವಿಧ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ಕ್ಷೇತ್ರಮಟ್ಟದಲ್ಲಿ ವಿವಿಧ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ವಿಸ್ತರಣಾ ಕಾರ್ಯನಿರ್ವಹಿಸುತ್ತಾರೆ.ಇಲಾಖೆಯ ಸಿಬ್ಬಂದಿ ವರ್ಗಗಳ ಸಂಘಟನೆಯ ವಿವರ ತೋರಿಸುವ ತಃಖ್ತೆಯನ್ನು ಮುಂದಿನ ಪುಟದಲ್ಲಿ ತೋರಿಸಲಾಗಿದೆ. ಇಲಾಖೆಯಲ್ಲಿ ಈಗ 4299 ಮಂಜೂರಾದ ವಿವಿಧ ವೃಂದದ ಹುದ್ದೆಗಳಿದ್ದು, 1217 ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ.

### ರೇಷ್ಮೆ ಇಲಾಖೆಯ ಕರ್ತವ್ಯಗಳು ಮತ್ತು ಕಾರ್ಯ ಚಟುವಟಿಕೆಗಳು:-

ರೇಷ್ಮೆ ಇಲಾಖೆಯು ರಾಜ್ಯದಲ್ಲಿ ರೇಷ್ಮೆ ಕೃಷಿ ಚಟುವಟಿಕೆಗಳ ಅಭಿವೃದ್ಧಿಗಾಗಿ ಕೆಳಕಂಡ ಮುಖ್ಯ ಸೇವೆಗಳನ್ನು ಒದಗಿಸುತ್ತಿದೆ.

1. ರೇಷ್ಮೆ ಕೃಷಿ ಚಟುವಟಿಕೆಗಳಾದ ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಾಣಿಕೆ, ನೂಲು ಬಿಚ್ಚಾಣಿಕೆ, ಇತ್ಯಾದಿಗಳ ಬಗ್ಗೆ ತಾಂತ್ರಿಕ ಮಾರ್ಗದರ್ಶನ ನೀಡುವುದು ಮತ್ತು ತರಬೇತಿ ಒದಗಿಸುವುದು.
2. ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುವಿನ ತಳಿಗಳನ್ನು ಅಭಿವೃದ್ಧಿ ಪಡಿಸಿ ರೈತರಿಗೆ ಒದಗಿಸುವುದು.
3. ಹಿಪ್ಪುನೇರಳೆ ಹಾಗೂ ರೇಷ್ಮೆ ಹುಳುವಿನ ಮೂಲ ಬಿತ್ತನೆ ನಿರ್ವಹಿಸುವುದು. ಮತ್ತು, ರೋಗರಹಿತ ರೇಷ್ಮೆ ಮೊಟ್ಟೆಗಳನ್ನು ರೈತರಿಗೆ ಒದಗಿಸಲು ವ್ಯವಸ್ಥೆಗಳನ್ನು ರೂಪಿಸುವುದು.
4. ರೇಷ್ಮೆ ಬೆಳೆಗಾರರಿಗೆ, ವಿಸ್ತರಣೆ, ಚಾಕಿ ಸಾಕಣೆ ಮತ್ತು ರೋಗ ನಿಯಂತ್ರಣ ಸೌಲಭ್ಯಗಳನ್ನು ಒದಗಿಸುವುದು.
5. ರೇಷ್ಮೆ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ರೈತರಿಗೆ, ಮತ್ತು ನೂಲು ಬಿಚ್ಚಾಣಿಕೆದಾರರಿಗೆ ಸಹಾಯ ಮಾಡುವುದು.
6. ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆ ಮಾರಾಟಕ್ಕೆ ಸೌಲಭ್ಯಗಳನ್ನು ಒದಗಿಸುವುದು.
7. ರೇಷ್ಮೆ ಗೂಡು ಮತ್ತು ರೇಷ್ಮೆ ನೂಲಿಗೆ ಸೂಕ್ತ ದರ ದೊರೆಯಲು ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು.
8. ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಹೊಸ ತಾಂತ್ರಿಕತೆಗಳನ್ನು ಅಳವಡಿಸಿ ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟ ಹೆಚ್ಚಿಸಿ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಪ್ರೇರೇಪಿಸುವುದು.
9. ರಾಜ್ಯದಲ್ಲಿ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವುದು.

## 4(1)(ಬಿ)(ii) ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯಗಳು.

| ಅಧಿಕಾರಿಗಳ ಮತ್ತು ಸಿಬ್ಬಂದಿಯ ಅಧಿಕಾರಗಳು ಮತ್ತು ಕರ್ತವ್ಯಗಳು | | |
|---|---|---|
| 1 | 1 | **ಅಧಿಕಾರಗಳು:** ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ 267 ಎಸ್.ಎಲ್.ಎಸ್ 79 ದಿನಾಂಕ::1-6-1981ರಲ್ಲಿ ಹೊರಡಿಸಿರುವ ಅಧಿಕಾರ ಪ್ರತ್ಯಾ ಯೋಜನೆ.ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ1ಟಿಎಫ್‌ಪಿ2001 ದಿನಾಂಕ:2-2-2001 ರ ಆರ್ಥಿಕ ಪ್ರತ್ಯಾ ಯೋಜನೆ ಮತ್ತು ಸರ್ಕಾರದ ಆದೇಶ ಸಂಖ್ಯೆ:ವಾಕೈ47ರೇಕೃಪಿ94 ದಿನಾಂಕ:17-10-2002 ರ ಆರ್ಥಿಕ ಪ್ರತ್ಯಾ ಯೋಜನೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮಗಳು 2000 ಗಳ ಪ್ರಕಾರ ಅಧಿಕಾರ ಪ್ರತ್ಯಾಯೋಜನೆ ಅನುಸರಿಸಿ ಆಯಾ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. |
| | 2 | ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಗಳು 1960 ರ ಪ್ರಕಾರ ಅಧಿಕಾರಿಗಳು ನಿರ್ವಹಿಸುವ ಕಾರ್ಯವಿವರಗಳು ಈ ಕೆಳಗಿನಂತಿವೆ. |

| II | | ಕರ್ತವ್ಯಗಳು: |
|---|---|---|

**ಆಯುಕ್ತರು ಮತ್ತು ನಿರ್ದೇಶಕರು**

ಆಯುಕ್ತರು ಹಾಗೂ ನಿರ್ದೇಶಕರು ರೇಷ್ಮೆ ಇಲಾಖೆಯ ಮುಖ್ಯಸ್ಥರಾಗಿದ್ದು ಎಲ್ಲಾ ತಾಂತ್ರಿಕ ಮತ್ತು ಆಡಳಿತಾತ್ಮಕ ಕೆಲಸ ಕಾರ್ಯಗಳು ಅವರ ನಿರ್ದೇಶನದಲ್ಲಿ ನಡೆಯುತ್ತವೆ. ಆಯುಕ್ತರು ಇಲಾಖೆಯ 'ಬಿ' 'ಸಿ' ಮತ್ತು 'ಡಿ' ದರ್ಜೆಯ ಸಿಬ್ಬಂದಿಯ ನೇಮಕಾತಿ ಪ್ರಾಧಿಕಾರಿ ಕೂಡಾ ಆಗಿರುತ್ತಾರೆ. ಹಾಗೂ.ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಹಾಗೂ ರೇಷ್ಮೆ ನೂಲು (ಉತ್ಪಾದನೆ ಮತ್ತು ಸರಬರಾಜು. ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959ರ ಕೆಳಗೆ ಅಪೀಲು ಪ್ರಾಧಿಕಾರಿಯಾಗಿರುತ್ತಾರೆ. ಹಾಗೂ.ಆಯುಕ್ತರು ರೇಷ್ಮೆಗೆ ಸಂಬಂಧಿಸಿದ ಮಂಡಳಿ/ನಿಗಮಗಳ ಸದಸ್ಯರು/ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಾರೆ.

**ಜಂಟಿ/ಅಪರ ನಿರ್ದೇಶಕರು (ಆಡಳಿತ)**

ಇಲಾಖೆಯ ಸಿಬ್ಬಂದಿ ಮತ್ತು ಆಡಳಿತ ವಿಷಯಗಳಿಗೆ ಸಂಬಂಧಿಸಿದಂತೆ ಆಯುಕ್ತರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು. ಅಧಿಕಾರಿ/ನೌಕರರ ಸೇವಾ ವಿಷಯದ ಬಗ್ಗೆ ಪರಿಶೀಲನೆ/ನಿರ್ವಹಣೆ. ನ್ಯಾಯಾಲಯ ಪ್ರಕರಣ.ಅಧಿಕಾರಿ/ನೌಕರರ ಕೆಲಸ ಕಾರ್ಯಗಳಲ್ಲಿ ಕರ್ತವ್ಯಲೋಪ, ಹಣಕಾಸಿನ ದುರುಪಯೋಗಳ ಬಗೆಗಿನ ಆರೋಪಗಳ ತನಿಖೆಯ ವಿಷಯಗಳ ನಿರ್ವಹಣೆ.ಲೇಖನ ಸಾಮಗ್ರಿ/ವಾಹನ/ದೂರವಾಣಿಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆ.ಭ್ರಷ್ಟಾಚಾರ ನಿಗ್ರಹದಳಕ್ಕೆ ಮುಖ್ಯ ಜಾಗ್ರತ ಅಧಿಕಾರಿಯಾಗಿ (Vigilance officer) ಕರ್ತವ್ಯ ನಿರ್ವಹಣೆ.

**ರೇಷ್ಮೆ ಅಪರ ನಿರ್ದೇಶಕರು (ತಾಂತ್ರಿಕ)**

ರೇಷ್ಮೆ ಅಪರ ನಿರ್ದೇಶಕರು ತಾಂತ್ರಿಕ ವರ್ಗದ ಅಧಿಕಾರಿಯಾಗಿದ್ದು, ರೇಷ್ಮೆ ಕೃಷಿ ಅಭಿವೃದ್ಧಿ ಕುರಿತು ತಾಂತ್ರಿಕ ವಿಷಯದಲ್ಲಿ ಆಯುಕ್ತರಿಗೆ ಸಲಹೆ ನೀಡುತ್ತಾರೆ.ಮತ್ತು, ಇಲಾಖೆಯ ತಾಂತ್ರಿಕ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಮಾರ್ಗದರ್ಶನ ನೀಡುತ್ತಾರೆ. ರಾಜ್ಯದಲ್ಲಿ ರೇಷ್ಮೆ ಬೆಳೆ ಅಭಿವೃದ್ಧಿ ಯೋಜನೆಗಳ ತಯಾರಿಕೆ ಹಾಗೂ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

**ರೇಷ್ಮೆ ಜಂಟಿ ನಿರ್ದೇಶಕರು**

| | | |
|---|---|---|
| 1 | ವಿಭಾಗೀಯ | ತಮ್ಮ ವ್ಯಾಪ್ತಿಯ ಜಿಲ್ಲೆಗಳಲ್ಲಿ ರೇಷ್ಮೆ ಕೃಷಿಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಅಧೀನ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮಾರ್ಗದರ್ಶನ, ಹೊಸ ತಾಂತ್ರಿಕತೆಗಳ ತಂತ್ರಜ್ಞಾನ, ಇಲಾಖೆಯಿಂದ ಲಭ್ಯವಾಗುವ ಸಹಾಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವುದು. ಲೋಪದೋಷಗಳು ಕಂಡು ಬಂದಲ್ಲಿ ಸುಧಾರಿಸುವುದು, ವ್ಯಾಪ್ತಿ ಮೀರಿದ ಪ್ರಕರಣಗಳನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು ಸುಧಾರಣಾ ಕ್ರಮ ಅನುಸರಿಸುವುದು. ವಿಭಾಗದ ಎಲ್ಲಾ ಸಂಸ್ಥೆಗಳ ಮತ್ತು ಕಛೇರಿಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿ ನಡೆಸುವುದು. |
| 2 | ಬಿತ್ತನೆ ಪ್ರದೇಶ | ಶುದ್ಧ ಮೈಸೂರು ತಳಿ ಮೂಲ ಬಿತ್ತನೆಯನ್ನು ವಿವಿಧ ಹಂತಗಳಲ್ಲಿ ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸುವುದು.ವಾರ್ಷಿಕ ಬಿತ್ತನೆ ಗೂಡುಗಳ ಬೇಡಿಕೆಯನ್ವಯ ಬಿತ್ತನೆ ಗೂಡುಗಳ ಉತ್ಪಾದನೆಗೆ ಕ್ರಿಯಾಯೋಜನೆ ರೂಪಿಸುವುದು. ರೋಗ ರಹಿತ ಮೊಟ್ಟೆಗಳ/ಬಿತ್ತನೆ ಗೂಡುಗಳ ಉತ್ಪಾದನೆ ಮತ್ತು ವಿತರಣೆಗೆ ಕ್ರಮ ಕೈಗೊಳ್ಳುವುದು. ಬಿತ್ತನೆ ಬೆಳೆಗಾರರಿಗೆ ಬೇಕಾಗಬಹುದಾದ ಸಹಾಯ ಸೌಲಭ್ಯಗಳನ್ನು ಒದಗಿಸುವುದು ರೋಗ ನಿಯಂತ್ರಣ ಕ್ರಮ ಕೈಗೊಳ್ಳುವುದು. ಬೋನಸ್ ಪ್ರೋತ್ಸಾಹಧನ ಹಾಗೂ ಬಿತ್ತನೆ ಗೂಡು ಖರೀದಿ ಬಾಬ್ತು ಪಾವತಿಗೆ ಕ್ರಮ ಕೈಗೊಳ್ಳುವುದು. |
| 3 | ರೇಷ್ಮೆ ವಿನಿಮಯ ಕೇಂದ್ರ | ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ ಮತ್ತು ನಿಯಮಗಳ ಅನ್ವಯ ರೇಷ್ಮೆ ನೂಲಿನ ಪಾರದರ್ಶಕ ಹಾಗೂ ನ್ಯಾಯಯುತ ವಹಿವಾಟಿಗೆ ವ್ಯವಸ್ಥೆ ಮಾಡುವುದು. ಬೆಲೆ ಸ್ಥಿರೀಕರಣ ನಿಧಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವುದು. ಅಧೀನ ಸಂಸ್ಥೆಗಳ ತಪಾಸಣೆ ಉಸ್ತುವಾರಿ ಮತ್ತು ಮೇಲ್ವಿಚಾರಣೆ ನಡೆಸುವುದು. |
| 4 | ಕೇಂದ್ರ ಕಛೇರಿ | ಇಲಾಖೆಯ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅವುಗಳ ಅನುಷ್ಠಾನಕ್ಕೆ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ತಿಳುವಳಿಕೆ ನೀಡುವುದು. ರೇಷ್ಮೆ ಅಪರ ನಿರ್ದೇಶಕರು.ಅಭಿವೃದ್ಧಿ ಆಯುಕ್ತರ ನಿರ್ದೇಶನದಂತೆ ಇಲಾಖೆಯ ಸಂಸ್ಥೆಗಳ ಮೇಲ್ವಿಚಾರಣೆ. ಪರಿಶೀಲನೆಗಳೊಂದಿಗೆ ಸಮನ್ವಯ ಪಡೆದು ಇಲಾಖೆಯ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಗೊಳಿಸುವುದು. ವಿಧಾನ : ಮಾಹಿತಿ ತಯಾರಿಸುವುದು. |

**ರೇಷ್ಮೆ ಉಪನಿರ್ದೇಶಕರು**

| | | |
|---|---|---|
| 1 | ಬಿತ್ತನೆ ಪ್ರದೇಶ | ತಮ್ಮ ವ್ಯಾಪ್ತಿಯ ಬಿತ್ತನೆ ಪ್ರದೇಶದ ವಾರ್ಷಿಕ ಬಿತ್ತನೆ ಗೂಡಿನ ಉತ್ಪಾದನೆಯ ಕ್ರಿಯಾ ಯೋಜನೆ |

| | | |
|---|---|---|
| | | ತಯಾರಿಸುವುದು. ಬಿತ್ತನೆ ಗೂಡಿನ ವಹಿವಾಟಿಗೆ ಕ್ರಮ ಕೈಗೊಳ್ಳುವುದು. ಬಿತ್ತನೆ ಗೂಡಿನ ದರಗಳಲ್ಲಿ ಹೆಚ್ಚಿನ ಏರುಪೇರಾಗದಂತೆ ನಿರ್ವಹಿಸುವುದು ಮತ್ತು ಹಿರಿಯ ಅಧಿಕಾರಿಗಳ ಸೂಚನೆಗಳನ್ನು ಪಾಲಿಸುವುದು. ಅಧೀನ ಸಂಸ್ಥೆಗಳ ಪರಿಶೀಲನೆ, ಪರಿವೀಕ್ಷಣೆ, ಉಸ್ತುವಾರಿ ಮತ್ತು ಮೇಲ್ವಿಚಾರಣೆ. ಲೋಪದೋಷಗಳು ಕಂಡುಬಂದಲ್ಲಿ ಸರಿಪಡಿಸುವುದು. ವ್ಯಾಪ್ತಿ ಮೀರಿದ ಪ್ರಕರಣಗಳನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು. |
| 2 | ಜಿಲ್ಲಾ ಪಂಚಾಯತ್ | ಜಿಲ್ಲೆಗೆ ಸಂಬಂಧಿಸಿದ ಕ್ರಿಯಾ ಯೋಜನೆ ರೂಪಿಸುವುದು ಮತ್ತು ಅದರ ಯಶಸ್ವಿ ಅನುಷ್ಠಾನಗೊಳಿಸಿ ನಿಗದಿಪಡಿಸಿದ ಗುರಿಗಳನ್ನು ಸಾಧಿಸುವುದು. ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದು. ಅಧೀನ ಸಂಸ್ಥೆಗಳ ಮತ್ತು ಕಾರ್ಯಕ್ರಮಗಳ ಪರಿಶೀಲನೆ, ಪರಿವೀಕ್ಷಣೆ ಮತ್ತು ಉಸ್ತುವಾರಿ ನಡೆಸುವುದು. ವ್ಯಾಪ್ತಿ ಮೀರಿದ ಲೋಪದೋಷ ಕಂಡುಬಂದಲ್ಲಿ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು. |
| 3 | ಬಿತ್ತನೆ ಕೋಠಿ | ವಾರ್ಷಿಕ ರೇಷ್ಮೆ ಮೊಟ್ಟೆ ಉತ್ಪಾದನೆಯ ಕ್ರಿಯಾ ಯೋಜನೆ ರೂಪಿಸುವುದು. ಗುಣಮಟ್ಟದ ಬಿತ್ತನೆ ಗೂಡನ್ನು ಪಡೆಯಲು ಕ್ರಮ ಕೈಗೊಳ್ಳುವುದು. ಬಿತ್ತನೆ ಕೋಠಿಯಲ್ಲಿ ರೋಗ ರಹಿತ ರೇಷ್ಮೆ ಮೊಟ್ಟೆಗಳ ಉತ್ಪಾದನೆ, ಮಾರಾಟ ಮತ್ತು ಮೊಟ್ಟೆ ಮೌಲ್ಯವನ್ನು ಸರ್ಕಾರಕ್ಕೆ ಜಮಾ ಮಾಡುವುದು. ಚಿಟ್ಟೆ ಕೊರೆದ ಗೂಡಿನ ವಿಲೇವಾರಿ. ಕಡಿಮೆ ಇಳುವರಿ ಕ್ಷಮಾಪಣೆ ಮತ್ತು ಮನ್ನಾ ಪ್ರಸ್ತಾವನೆಗಳ ಬಗ್ಗೆ ಕ್ರಮ ಕೈಗೊಳ್ಳುವುದು ಹಾಗೂ ರಾಜ್ಯ ವಲಯದ ಸಂಸ್ಥೆಗಳ ಉಸ್ತುವಾರಿ, ಮೇಲ್ವಿಚಾರಣೆ ಮತ್ತು ಪರಿಶೀಲನೆ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು. |
| 4 | ಗೂಡು ಮಾರುಕಟ್ಟೆ | ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಗಳು 1960ರ ಅನ್ವಯ ರೇಷ್ಮೆ ಗೂಡಿನ ಪಾರದರ್ಶಕ ಮತ್ತು ನ್ಯಾಯಯುತ ವಹಿವಾಟಿಗೆ ಕ್ರಮ ಕೈಗೊಳ್ಳುವುದು. ರೈತರು ಮತ್ತು ರೀಲರ್‌ಗಳಲ್ಲಿ ಸಾಮರಸ್ಯವಿರುವಂತೆ ನಿರ್ವಹಿಸುವುದು. ಸುಗಮ ವಹಿವಾಟಿನ ಹಣ ಪಾವತಿ ಮತ್ತು ಮಾರುಕಟ್ಟೆ ಶುಲ್ಕದ ವಸೂಲಿ ಕ್ರಮ ಕೈಗೊಳ್ಳುವುದು. ಗೂಡಿನ ನಂತರದ ಚಟುವಟಿಕೆ ಸಂಸ್ಥೆಗಳ ಉಸ್ತುವಾರಿ, ಮೇಲ್ವಿಚಾರಣೆ ಮತ್ತು ಪರಿಶೀಲನೆ. |
| 5 | ಕೇಂದ್ರ ಕಛೇರಿ | ತಮ್ಮ ತಮ್ಮ ವಿಭಾಗಕ್ಕೆ ಸಂಬಂಧಿಸಿದ ಚಟುವಟಿಕೆಗಳ ಹೊಣೆಗಾರಿಕೆ ಮತ್ತು ನಿರ್ವಹಣೆ. ಮಾಸಿಕ ಪ್ರಗತಿಯ ವರದಿ ತಯಾರಿಕೆ ಮತ್ತು ಲೋಪಗಳು ಕಂಡುಬಂದಲ್ಲಿ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು. ವಿಭಾಗಕ್ಕೆ ಸಂಬಂಧಿಸಿದ ಕಡತಗಳ ಕ್ರಮಬದ್ಧ ನಿರ್ವಹಣೆ. |
| 6 | ಮೇಲ್ವಿಚಾರಣಾ ದಳ | ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ನಿಯಮಗಳ 1960ರ ಉಲ್ಲಂಘನೆ ಪ್ರಕರಣಗಳ ಪರಿಶೀಲನೆ. ಹಿರಿಯ ಅಧಿಕಾರಿಗಳು ಸೂಚಿಸುವ ಪ್ರಕರಣಗಳ ಪರಿಶೀಲನೆ. ಇಲಾಖೆಯ ಸಂಸ್ಥೆಗಳ ಪರಿಶೀಲನೆ. |
| 7 | ತರಬೇತಿ ಸಂಸ್ಥೆಗಳು | ವಾರ್ಷಿಕ ತರಬೇತಿ ಕಾರ್ಯಕ್ರಮದ ಕ್ರಿಯಾ ಯೋಜನೆ ತಯಾರಿಸುವುದು. ತರಬೇತಿ ಒದಗಿಸಲು ಬೇಕಾಗುವ ಸೌಲಭ್ಯಗಳನ್ನು ಮತ್ತು ಪಠ್ಯ ಕ್ರಮಗಳನ್ನು ಸಿದ್ಧಪಡಿಸುವುದು. ಕ್ರಿಯಾ ಯೋಜನೆಯಂತೆ ರೇಷ್ಮೆ ಬೆಳೆಗಾರರು, ರೀಲರುಗಳು, ಇಲಾಖಾ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ತರಬೇತಿಗೆ ಆಹ್ವಾನಿಸುವುದು. ಪರಿಣಿತರಿಂದ ಉಪನ್ಯಾಸಗಳನ್ನು ಏರ್ಪಡಿಸುವುದು ಮತ್ತು ಹೊಸ ತಾಂತ್ರಿಕತೆಗಳ ಬಗ್ಗೆ ಪ್ರಾತ್ಯಕ್ಷತಾ ತರಬೇತಿ ಒದಗಿಸುವುದು. |

**ರೇಷ್ಮೆ ಸಹಾಯಕ ನಿರ್ದೇಶಕರು**

| | | |
|---|---|---|
| 1 | ವಿಭಾಗೀಯ | ತಮ್ಮ ವ್ಯಾಪ್ತಿಯ ಇಲಾಖೆ ಸಂಸ್ಥೆಗಳ ಮೇಲ್ವಿಚಾರಣೆ, ಉಸ್ತುವಾರಿ ಮತ್ತು ಪರಿಶೀಲನೆ. ನಿಗಧಿಪಡಿಸುವ ಗುರಿ ಸಾಧನೆಗೆ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸುವುದು. ಸಂಬಂಧಿಸಿದ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಅನುಜ್ಞಾ ಪತ್ರಗಳ ನವೀಕರಣ. |
| 2 | ಕಚೇರಿಗಳು | ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಮಾಹಿತಿ ಸಂಗ್ರಹಣೆ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದ ಕಡತಗಳ ನಿರ್ವಹಣೆ. ಪ್ರಗತಿ ಪರಿಶೀಲನಾ ವರದಿ ತಯಾರಿಕೆ. ಸಭೆಗಳ ನಡವಳಿಗಳನ್ನು ತಯಾರಿಸುವುದು ಮತ್ತು ಅನುಸರಣಾ ಕ್ರಮಗಳು. ಅಧೀನ ಅಧಿಕಾರಿ, ಸಿಬ್ಬಂದಿಯೊಡನೆ ಸಮನ್ವಯ ಸಾಧಿಸಿ ಕಡತಗಳ ಶೀಘ್ರ ವಿಲೇವಾರಿಗೆ ಕ್ರಮಕೈಗೊಳ್ಳುವುದು. |
| 3 | ಬಿತ್ತನೆ ಕೋಠಿಗಳು | ವಾರ್ಷಿಕ ರೇಷ್ಮೆ ಮೊಟ್ಟೆ ಉತ್ಪಾದನಾ ಕಾರ್ಯಕ್ರಮ ರೂಪಿಸುವುದು. ಗುಣಮಟ್ಟದ ಬಿತ್ತನೆ ಗೂಡುಗಳನ್ನು ಪಡೆದು ರೋಗರಹಿತ ರೇಷ್ಮೆ ಮೊಟ್ಟೆಗಳ ಉತ್ಪಾದನೆ ಮತ್ತು ವಿಲೇವಾರಿ. ಮೊಟ್ಟೆಗಳ ಮಾರಾಟ ಮತ್ತು ಚಿಟ್ಟೆ ಕೊರೆದ ಗೂಡಿನ ಮಾರಾಟದಿಂದ ಬರುವ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡುವುದು. ಕಡಿಮೆ ಇಳುವರಿ ಕ್ಷಮಾಪಣೆ ಮತ್ತು ಮನ್ನಾ ಪ್ರಸ್ತಾವನೆಗಳನ್ನು ಸಕಾಲದಲ್ಲಿ ಹಿರಿಯ ಅಧಿಕಾರಿಗಳಿಗೆ ಸಲ್ಲಿಸುವುದು. |
| 4 | ಗೂಡು ಮಾರುಕಟ್ಟೆ: | ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು(ಉತ್ಪಾದನೆ, ಸರಬರಾಜು, ವಿತರಣೆ |

| | | |
|---|---|---|
| | ರೇಷ್ಮೆ ವಿನಿಮಯ ಕೇಂದ್ರ | ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಗಳು 1960ರ ಅನ್ವಯ ರೇಷ್ಮೆ ಗೂಡಿನ:ರೇಷ್ಮೆಯ ಮಾರುಕಟ್ಟೆಗಳಲ್ಲಿ ವಹಿವಾಟಿಗೆ ಕ್ರಮವಹಿಸುವುದು. ವಸೂಲಾದ ಮಾರುಕಟ್ಟೆ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡುವುದು ರೈತರುಗಳು:ರೀಲರುಗಳು ಮತ್ತು ರೀಲರುಗಳು:ವರ್ತಕರೊಂದಿಗೆ ಸಾಮರಸ್ಯವಿರುವಂತೆ ಕ್ರಮಕೈಗೊಳ್ಳುವುದು. |
| 5 | ರೇಷ್ಮೆ ಪರೀಕ್ಷೆ : ಪರಿಷ್ಕರಣಾಕೇಂದ್ರ | ರೇಷ್ಮೆ ನೂಲಿನ ಪರೀಕ್ಷೆ, ವರ್ಗೀಕರಣ ಮತ್ತು ದೃಢೀಕರಿಸುವುದು ಮತ್ತು ಬರುವ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡುವುದು. |
| 6 | ತರಬೇತಿ ಶಾಲೆ | ಸಂಶೋಧನಾ ಸಂಸ್ಥೆಗಳಲ್ಲಿ ಅಭಿವೃದ್ಧಿಪಡಿಸಿದ ತಾಂತ್ರಿಕತೆಗಳು ಮತ್ತು ಪ್ರಗತಿಪರ ರೇಷ್ಮೆ ಬೆಳೆಗಾರರು ಅನುಸರಿಸುವ ತಾಂತ್ರಿಕತೆಗಳ ಬಗ್ಗೆ ಉಪನ್ಯಾಸ ನೀಡುವುದು. ಪ್ರಾತ್ಯಕ್ಷತಾ ತರಬೇತಿ ಒದಗಿಸುವುದು ಹಾಗೂ ಕರಕುಶಲ ವಸ್ತುಗಳ ತಯಾರಿಕೆ ಬಗ್ಗೆ ಪ್ರಾತ್ಯಕ್ಷತಾ ತರಬೇತಿ ಒದಗಿಸುವುದು. |
| 7 | ಗೂಡು ನಂತರದ ಚಟುವಟಿಕೆ | ರೀಲರುಗಳಿಗೆ ಹೊಸ ತಾಂತ್ರಿಕತೆಗಳ ಅಳವಡಿಕೆಯ ಮೂಲಕ ಗುಣಮಟ್ಟದ ರೇಷ್ಮೆ ಉತ್ಪಾದಿಸುವ ಬಗ್ಗೆ ತಿಳುವಳಿಕೆ ನೀಡುವುದು. ರೀಲರುಗಳ ರಹದಾರಿ ನವೀಕರಣದ ಬಗ್ಗೆ ಕ್ರಮ ಕೈಗೊಳ್ಳುವುದು ಮತ್ತು ರೀಲರುಗಳಿಗೆ ತಮ್ಮ ಘಟಕಗಳನ್ನು ಉನ್ನತೀಕರಿಸುವ ಬಗ್ಗೆ ಮಾಹಿತಿ ಹಾಗೂ ಇಲಾಖೆ ಕಾರ್ಯಕ್ರಮಗಳ ಸವಲತ್ತು ಸೌಲಭ್ಯಗಳನ್ನು ಒದಗಿಸುವುದು. |

**ರೇಷ್ಮೆ ವಿಸ್ತರಣಾಧಿಕಾರಿಗಳು**

| | | |
|---|---|---|
| 1 | ತಾಂತ್ರಿಕ ಸೇವಾ ಕೇಂದ್ರ/ ವಿಸ್ತರಣಾ ಕೇಂದ್ರ | ವ್ಯಾಪ್ತಿಯ ರೇಷ್ಮೆ ಬೆಳೆಗಾರರಿಗೆ ಇಲಾಖೆಯಲ್ಲಿ ಲಭ್ಯ ವಿರುವ ಸಹಾಯ: ಸೌಲಭ್ಯ ಮತ್ತು ಮಾಹಿತಿ ಒದಗಿಸುವುದು. ರಹದಾರಿ ನವೀಕರಣ. ಹೊಸ ತಾಂತ್ರಿಕತೆಗಳ ಪ್ರಸರಣ ಮತ್ತು ಇಲಾಖೆಯ ವಿವಿಧ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನ ಮತ್ತು ಉಸ್ತುವಾರಿ ನಿಗದಿಪಡಿಸುವ ಹಿಪ್ಪುನೇರಳೆ ವಿಸ್ತೀರ್ಣ ಹೆಚ್ಚಳ, ದ್ವಿತಳಿ ಕಾರ್ಯಕ್ರಮದ ಗುರಿ ಸಾಧನೆ. |
| 2 | ರೇಷ್ಮೆ ಕೃಷಿ ಕ್ಷೇತ್ರ | ವಾರ್ಷಿಕ ಬಿತ್ತನೆ ಗೂಡು ಉತ್ಪಾದನಾ ಕ್ರಿಯಾ ಯೋಜನೆ ತಯಾರಿಸುವುದು. ಸಾವಯವ ಗೊಬ್ಬರಗಳ ಖರೀದಿ:ತಯಾರಿಕೆ, ಮೊಟ್ಟೆಗಳನ್ನು ಪಡೆದು ಸಾಕಣೆ ಮಾಡಿ ಗುಣಮಟ್ಟದ ಬಿತ್ತನೆ ಗೂಡಿನ ಉತ್ಪಾದನೆ ಮತ್ತು ಸಂಬಂಧಿಸಿದ ಬಿತ್ತನೆ ಕೋಠಿಗೆ ಸರಬರಾಜು ಮಾಡುವುದು. ಪ್ರಾತ್ಯಕ್ಷತಾ ತರಬೇತಿ ಒದಗಿಸುವುದು, ಬಿತ್ತನೆ ಕಡ್ಡಿ ಒದಗಿಸುವುದು, ಕೃಷಿ ಕ್ಷೇತ್ರವನ್ನು ಚಾಕಿ ಸಾಕಣೆಗೆ ಆಯ್ಕೆ ಮಾಡಿದ್ದಲ್ಲಿ 2ನೇ ಹಂತದವರೆಗೆ ಚಾಕಿ ಹುಳುವನ್ನು ವೈಜ್ಞಾನಿಕವಾಗಿ ಸಾಕಣೆ ಮಾಡಿ ಫಲಾನುಭವಿ ರೈತರಿಗೆ ವಿತರಿಸುವುದು ಮತ್ತು ಬಂದ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡುವುದು. |
| 3 | ಬಿತ್ತನೆ ಕೋಠಿ | ಗುಣಮಟ್ಟದ ಬಿತ್ತನೆ ಗೂಡು ಪಡೆಯುವುದು, ಅವುಗಳ ಶೇಖರಣೆ, ಕೋಶ ಪರೀಕ್ಷೆ, ಮೊಟ್ಟೆ ಉತ್ಪಾದನೆ, ತಾಯಿ ಚಿಟ್ಟೆ ಪರೀಕ್ಷೆ, ಮೊಟ್ಟೆ ವಿಲೇವಾರಿ ಮತ್ತು ಚಿಟ್ಟೆ ಕೊರೆದ ಗೂಡಿನ ಶೇಖರಣೆ: ವಿತರಣೆ ಕ್ರಮಗಳ ಪಾಲನೆ, ಬಂದ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡುವುದು. ಕಡಿಮೆ ಇಳುವರಿ, ಕ್ಷಮಾಪಣೆ ಮತ್ತು ಮನ್ನಾ ಪ್ರಸ್ತಾವನೆಗಳನ್ನು ಹಿರಿಯ ಅಧಿಕಾರಿಗಳಿಗೆ ಸಕಾಲದಲ್ಲಿ ಸಲ್ಲಿಸುವುದು. |
| 4 | ರೇಷ್ಮೆ ವಿನಿಮಯ ಕೇಂದ್ರ/ ಗೂಡು ಮಾರುಕಟ್ಟೆ | ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು(ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಗಳು 1960ರ ಅನ್ವಯ ರೇಷ್ಮೆ ಗೂಡಿನ: ರೇಷ್ಮೆ ನೂಲಿನ ಪಾರದರ್ಶಕ ಹಾಗೂ ನ್ಯಾಯಯುತವಾದ ವಹಿವಾಟಿಗೆ ಸಹಕರಿಸುವುದು. ರೇಷ್ಮೆ ಬೆಳೆಗಾರರು: ರೀಲರುಗಳು ಮತ್ತು ರೀಲರುಗಳು: ವರ್ತಕರಲ್ಲಿ ಸಾಮರಸ್ಯ ಏರ್ಪಡಿಸುವುದು, ಮಾರುಕಟ್ಟೆ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡುವುದು. |
| 5 | ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರ | ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಕೈಗೊಳ್ಳುವುದು. ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದು ಹಾಗೂ ಸವಲತ್ತುಗಳನ್ನು ಫಲಾನುಭವಿಗಳಿಗೆ ತಲುಪಿಸುವುದು. ನೂಲು ಬಿಚ್ಚಾಣಿಕೆಯ ಎಲ್ಲಾ ಚಟುವಟಿಕೆಗಳಿಗೆ ಭಾಗೀದಾರರಿಗೆ ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯ ಒದಗಿಸಲು ನೆರವಾಗುವುದು. ತಾಂತ್ರಿಕತೆಗಳನ್ನು ಕ್ಷೇತ್ರ ಮಟ್ಟದಲ್ಲಿ ಪ್ರಚುರ ಪಡಿಸಲು ಕ್ಷೇತ್ರೋತ್ಸವ, ಗುಂಪು ಚರ್ಚೆ, ವಿಚಾರ ಸಂಕಿರಣ ಅಧ್ಯಯನ ಪ್ರವಾಸ / ತರಬೇತಿಗಳನ್ನು ಏರ್ಪಡಿಸುವುದು. ರೀಲರ್‌ಗಳಿಗೆ ಪಾಸ್ ಪುಸ್ತಕ ವಿತರಿಸುವುದು.<br>ವ್ಯಾಪ್ತಿಯ ರೀಲರುಗಳಿಗೆ ಇಲಾಖೆಯಿಂದ ದೊರೆಯುವ ಸಹಾಯ, ಸೌಲಭ್ಯ, ತಾಂತ್ರಿಕ ಮಾಹಿತಿ ಒದಗಿಸುವುದು. |
| 6 | ಕಛೇರಿಗಳು | ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದ ಕಡತಗಳ ನಿರ್ವಹಣೆ, ಮಾಹಿತಿ ಸಂಗ್ರಹಣೆ, ಪ್ರಗತಿಗೆ ಸಂಬಂಧಿಸಿದ ಅಂಕಿ ಅಂಶಗಳ ಕ್ರೋಢೀಕರಣ ಮತ್ತು ಸಂಸ್ಥೆಯ ಮುಖ್ಯಸ್ಥರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುವುದು. |

**4(1)(ಬಿ)(iii) ಉತ್ತರದಾಯಿತ್ವ ಮತ್ತು ಮೇಲ್ವಿಚಾರಕ ಸಹಿತ, ನಿರ್ಧರಣಾ ಪ್ರಕ್ರಿಯೆಯಲ್ಲಿ ಅನುಸರಿಸುವ ವಿಧಿ-ವಿಧಾನಗಳು.**

ಉಸ್ತುವಾರಿ ಮತ್ತು ಹೊಣೆಗಾರಿಕೆ ಸೇರಿದಂತೆ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲಿಸಬೇಕಾದ ವಿಧಿ-ವಿಧಾನಗಳು ರೇಷ್ಮೆ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ವಿತ್ತೀಯ ಪ್ರತ್ಯಾಧಿಕಾರ

| ಕ್ರ. ಸಂ. | ಕಾರ್ಯಕ್ರಮದ ವಿವರ | ಪ್ರತ್ಯಾಯೋಜನೆ | | | |
|---|---|---|---|---|---|
| | | ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು | ರೇಷ್ಮೆ ಜಂಟಿ ನಿರ್ದೇಶಕರು | ರೇಷ್ಮೆ ಉಪ ನಿರ್ದೇಶಕರು | ರೇಷ್ಮೆ ಸಹಾಯಕ ನಿರ್ದೇಶಕರು |
| 1. | ಫಲಾನುಭವಿ ಆಧಾರಿತ ಕಾರ್ಯಕ್ರಮ ಗಳಿಗೆ ಸಹಾಯಧನ/ ಪ್ರೋತ್ಸಾಹಧನ ಮಂಜೂರಾತಿ | ಪೂರ್ಣ ಅಧಿಕಾರ | (ಪ್ರತಿ ಪ್ರಕರಣ) ರೂ.2,00,001/- ರಿಂದ ರೂ.5,00,000/- ವರೆಗೆ(ಪ್ರತಿ ಪ್ರಕರಣಕ್ಕೆ) | (ಪ್ರತಿ ಪ್ರಕರಣ) ರೂ50,001/- ರಿಂದ ರೂ.2,00,000/- ವರೆಗೆ(ಪ್ರತಿ ಪ್ರಕರಣಕ್ಕೆ) | (ಪ್ರತಿ ಪ್ರಕರಣ) ರೂ.50,000/- ವರೆಗೆ(ಪ್ರತಿ ಪ್ರಕರಣಕ್ಕೆ) |

**4(1)(ಬಿ) (iv) ಇಲಾಖೆಯ ಕಾರ್ಯ ನಿರ್ವಹಣೆಯಲ್ಲಿ ಅನುಸರಿಸುವ ನಿಯಮಗಳು**

ಇಲಾಖೆಯ ಆಡಳಿತಾತ್ಮಕ ಕೆಲಸ ಕಾರ್ಯಗಳು ಕರ್ನಾಟಕ ನಾಗರೀಕ ಸೇವಾ ನಿಯಮಗಳಂತೆ, ಆರ್ಥಿಕ ಕೆಲಸ ಕಾರ್ಯಗಳು ಕರ್ನಾಟಕ ಆರ್ಥಿಕ ಸಂಹಿತೆ, ಖರೀದಿ ಪ್ರಕ್ರಿಯೆಗಳು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು ಮತ್ತು ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗಳನ್ವಯ ಮಾಡಲಾಗುತ್ತದೆ. ಇಲಾಖೆಯ ತಾಂತ್ರಿಕ ಕೆಲಸ ಕಾರ್ಯಗಳು ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಾವಳಿಗಳು 1960 ರಂತೆ ನಿರ್ವಹಿಸಲಾಗುತ್ತಿದೆ. ಇದಲ್ಲದೆ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಪಾಲಿಸಲಾಗುತ್ತಿದೆ.

**4(1)(ಬಿ)(v)ಕರ್ತವ್ಯ ನಿರ್ವಹಿಸುವಲ್ಲಿ ಅನುಸರಿಸಲಾಗುವ ಕಾಯಿದೆ ಮತ್ತು ನಿಯಮಗಳು**

**ಸಂಸ್ಥೆಯ ಅಧಿಕಾರಿ: ಸಿಬ್ಬಂದಿಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಅನುಸರಿಸುವ ಬಗ್ಗೆ ನಿಯಮಗಳು, ಆದೇಶ ಮತ್ತು ಅಧಿಸೂಚನೆಗಳು ಮತ್ತು ನಿರ್ವಹಿಸುವ ಬಗ್ಗೆ ದಾಖಲೆಗಳು.**

ರೇಷ್ಮೆ ಇಲಾಖೆಯ ಅಧಿಕಾರಿ: ಸಿಬ್ಬಂದಿ ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ)ಕಾಯಿದೆ 1959 ಮತ್ತು ನಿಯಮಗಳು 1960ರ ನಿಯಮಗಳನ್ವಯ ಕಾರ್ಯ ನಿರ್ವಹಿಸುತ್ತಾರೆ.

ಆರ್ಥಿಕ ಪ್ರತ್ಯಾಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ:ಸಿಐ 267 ಎಸ್‌ಎಲ್‌ಎಸ್ 79 ದಿ:1-6-81, ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ1 ಟಿಎಫ್‌ಪಿ 2001 ದಿ:2-2-2001 ಮತ್ತು ಸರ್ಕಾರದ ಆದೇಶ ಸಂಖ್ಯೆ:ವಾಕ್ಯ 47 ರೇಕೃವಿ 94 ದಿ:17-10-2002 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000ಗಳನ್ನು ಅನುಸರಿಸಿ ಕಾರ್ಯ ನಿರ್ವಹಿಸುತ್ತಾರೆ.

**4(1)(ಬಿ)(vi) ವಿವಿಧ ಕಚೇರಿಗಳಲ್ಲಿ ನಿರ್ವಹಿಸಲಾಗುವ ದಾಖಲೆ ಮತ್ತು ದಸ್ತಾವೇಜುಗಳು**

ಅ) <u>ಬಿತ್ತನೆ ಕೋಠಿ</u>

1. ರೇಷ್ಮೆ ಮೊಟ್ಟೆ ತಯಾರಿಕಾ ವಹಿ

2. ರೇಷ್ಮೆ ಮೊಟ್ಟೆ ವಿಲೇವಾರಿ ವಹಿ
3. ಬಿತ್ತನೆ ಗೂಡಿನ ದಾಸ್ತಾನು ವಹಿ
4. ಚಿಟ್ಟೆ ಕೊರೆದ ಗೂಡಿನ ದಾಸ್ತಾನು ವಹಿ
5. ಮೊಟ್ಟೆ ಹಾಳೆಗಳ ದಾಸ್ತಾನು ವಹಿ

**ಆ) ರೇಷ್ಮೆ ಕೃಷಿ ಕ್ಷೇತ್ರಗಳು**

1. ತೋಟದ ನಿರ್ವಹಣಾ ವಹಿ
2. ತೋಟದ ವಹಿ(ಜಾತಿವಾರು)
3. ಹುಳು ಸಾಕಣೆ ವಹಿ

**ಇ) ತಾಂತ್ರಿಕ ಸೇವಾ ಕೇಂದ್ರಗಳು**

1. ಕುಳವಾರು ವಹಿ

**ಈ) ರೇಷ್ಮೆ ಗೂಡಿನ ಮಾರುಕಟ್ಟೆ; ರೇಷ್ಮೆ ವಿನಿಮಯ ಕೇಂದ್ರ**

1. ದೈನಂದಿನ ವಹಿವಾಟು ವಹಿ
2. ಬಿಡ್ಡಿಂಗ್ ಸ್ಲಿಪ್‌ಗಳ ದಾಸ್ತಾನು ವಹಿ
3. ಬಿತ್ತನೆ ಗೂಡಿನ ದೃಢೀಕರಣದ ವಹಿ
4. ದಾಸ್ತಾನು ವಹಿ

**ಉ) ರಹದಾರಿ ನವೀಕರಣ ಅಧಿಕಾರಿಗಳ ವಹಿ**

1. ಅರ್ಜಿ ನೋಂದಣೆ ವಹಿ
2. ರಹದಾರಿ ನೀಡಿಕೆಯ ವಹಿ

ಇಲಾಖೆಯ ಎಲ್ಲ ಕಾರ್ಯಾಲಯಗಳಲ್ಲಿ ಕೆ.ಸಿ.ಎಸ್.ಆರ್ ಮತ್ತು ಕೆ.ಎಫ್.ಸಿ. ಪ್ರಕಾರ ಕಛೇರಿಗಳಲ್ಲಿ ಅವಶ್ಯಕವಾದ ವಹಿಗಳನ್ನು ನಿರ್ವಹಿಸಲಾಗುತ್ತಿದೆ.

**4(1)(ಬಿ)(vii) ಇಲಾಖೆಯ ಕಾರ್ಯಕ್ರಮ ರೂಪಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕರ ಸಲಹೆ ಮತ್ತು ಭಾಗವಹಿಸುವಿಕೆಗೆ ಅವಕಾಶ ಇರುವ ಬಗ್ಗೆ ವಿವರಗಳು :**

ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ಚರ್ಚಿಸಿ ಅನುಮೋದನೆಗೊಂಡ ನಂತರ ಅನುಷ್ಠಾನಗೊಳಿಸಲಾಗುತ್ತಿದೆ. ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಮಾಡಲಾಗುತ್ತಿದೆ. ಫಲಾನುಭವಿಗಳಿಗೆ ನೀಡುವ ಸಹಾಯಧನವನ್ನು ಸಭೆ/ಸಮಾರಂಭಗಳಲ್ಲಿ ಜನಪ್ರತಿನಿಧಿಗಳ ಸಮಕ್ಷಮದಲ್ಲಿ ವಿತರಿಸುವ ಕ್ರಮ ಅನುಸರಿಸಲಾಗುತ್ತಿದೆ.

ರೇಷ್ಮೆ ಗೂಡಿನ ಮಾರುಕಟ್ಟೆಗಳ ಸಮಿತಿಗೆ ನಾಮ ನಿರ್ದೇಶನ ಮಾಡುವ ರೇಷ್ಮೆ ಬೆಳೆಗಾರರು ಮತ್ತು ರೀಲರುಗಳು ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಸುಗಮ ವಹಿವಾಟಿಗೆ ಸಲಹೆ, ಸೂಚನೆಗಳನ್ನು ನೀಡುತ್ತಾರೆ. ಇದೇ ರೀತಿ ರೇಷ್ಮೆ ವಿನಿಮಯ ಕೇಂದ್ರಗಳ ಸಮಿತಿಗೆ ನಾಮ ನಿರ್ದೇಶನ ಮಾಡುವ ರೀಲರುಗಳು, ಹುರಿಕಾರರು ಮತ್ತು ವರ್ತಕರು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಸುಗಮ ವಹಿವಾಟಿಗೆ ಸಲಹೆ ಸೂಚನೆ ನೀಡುತ್ತಾರೆ.

**4(1)(ಬಿ)(viii) : ಎರಡಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವ ಪ್ರಾಧಿಕಾರ ಮತ್ತು ಸಮಿತಿಗಳ ಪಟ್ಟಿ ಹಾಗೂ ಸದರಿ ಸಮಿತಿಯ ಸಭೆಯ ನಡುವಳಿಕೆಗಳು ಸಾರ್ವಜನಿಕರಿಗೆ ಲಭ್ಯವಿರುವ ಬಗ್ಗೆ ಮಾಹಿತಿ ಮಾರುಕಟ್ಟೆ ಸಮಿತಿ:**

ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಅನುಚ್ಛೇದ 10(ಬಿ) ಅನ್ವಯ ಮಾರುಕಟ್ಟೆ ಸಮಿತಿಯು ರಚನೆಯಾಗಿರುತ್ತದೆ. ಈ ಸಮಿತಿಗೆ ಸದಸ್ಯರುಗಳನ್ನು ಸರ್ಕಾರದಿಂದ ನಾಮ ನಿರ್ದೇಶನ ಮಾಡಲಾಗುತ್ತದೆ. ಈ ಸಮಿತಿಯಲ್ಲಿ ಇಬ್ಬರು ರೇಷ್ಮೆ ಬೆಳೆಗಾರರು ಹಾಗೂ ಮೂರು ಜನ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಸದಸ್ಯರಾಗಿದ್ದು ಮಾರುಕಟ್ಟೆ ಅಧಿಕಾರಿಗಳು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಇದರ ಅವಧಿ ಮೂರು ವರ್ಷ ಆಗಿರುತ್ತದೆ.

**ಮಾರುಕಟ್ಟೆ ಅಧಿಕಾರಿಗಳ ಕರ್ತವ್ಯಗಳು ಈ ಕೆಳಗಿನಂತೆ ಇರುತ್ತವೆ.**

(1) ಮಾರುಕಟ್ಟೆಗಳಿಗೆ ವಹಿವಾಟಿಗೆ ಬರುವ ಗೂಡುಗಳಿಗೆ ಮಾರುಕಟ್ಟೆಯು ಪ್ರತಿದಿನ ತೆರೆಯುವ ಹಾಗೆ ನೋಡಿಕೊಳ್ಳುವುದು. ಮಾರುಕಟ್ಟೆಯ ವಹಿವಾಟಿನ ಸಮಯವನ್ನು ಮಾರುಕಟ್ಟೆ ಸಮಿತಿಯೊಂದಿಗೆ ಚರ್ಚಿಸಿ ನಿಗದಿಪಡಿಸುವುದು.

**4(1)(ಬಿ)(ix) ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ವಿವರಗಳು**

ರೇಷ್ಮೆ ನಿರ್ದೇಶನಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳ ವಿವರ

| ಅಧಿಕಾರಿ/ಸಿಬ್ಬಂದಿ ಹೆಸರು (ಶ್ರೀಯುತ/ಶ್ರೀಮತಿ) | ಹುದ್ದೆ |
|---|---|
| **ಇಲಾಖೆಯ ಮುಖ್ಯಸ್ಥರು** | |
| ರಾಜೇಶ್‌ಗೌಡ.ಎಂ.ಬಿ. ಭಾ.ಆ.ಸೇ | ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು<br>ಹಾಗೂ ರೇಷ್ಮೆ ನಿರ್ದೇಶಕರು |
| **ಆಯುಕ್ತರ ಆಪ್ತಶಾಖೆ** | |
| ವಿನಯ್‌ಕುಮಾರ್.ಎಂ | ಅಧೀಕ್ಷಕರು |
| ಆರ್.ವಿಶ್ವನಾಥ್ | ಹಿರಿಯ ವಾಹನ ಚಾಲಕರು |
| **ಆಡಳಿತ ವಿಭಾಗ** | |
| ಕಾತ್ಯಾಯಿನಿದೇವಿ.ಎಸ್, ಕ.ಆ.ಸೇ | ಜಂಟಿ ನಿರ್ದೇಶಕರು (ಆಡಳಿತ) |
| **ಅಪರ ನಿರ್ದೇಶಕರು (ಆಡಳಿತ) ಆಪ್ತಶಾಖೆ** | |
| – | |
| **ಸಿಬ್ಬಂದಿ ಶಾಖೆ** | |
| ಪ್ರಕಾಶ್.ಡಿ | ಆಡಳಿತಾಧಿಕಾರಿಗಳು |
| ಬಿ.ಉಮಾರಾಣಿ | ಪತ್ರಾಂಕಿತ ವ್ಯವಸ್ಥಾಪಕರು-1 |
| ಶಿವಣ್ಣ.ಹೆಚ್.ಜೆ | ಪತ್ರಾಂಕಿತ ವ್ಯವಸ್ಥಾಪಕರು-2 |
| ಎನ್.ಮಂಜುಳಾದೇವಿ | ಅಧೀಕ್ಷಕರು |
| ಎಸ್.ಜೆ.ರೂಪ | ಅಧೀಕ್ಷಕರು |
| ವಿ.ನವೀನ್‌ಕುಮಾರ್ | ಅಧೀಕ್ಷಕರು |
| ವೇಣುಗೋಪಾಲ್. ಆರ್.ವಿ | ಅಧೀಕ್ಷಕರು |
| ರಮೇಶ್ ಪಿತಾಂಬರಪ್ಪ | ಅಧೀಕ್ಷಕರು |
| ರುದ್ರಪ್ರಸಾದ್.ಹೆಚ್ | ಅಧೀಕ್ಷಕರು (ಆಕಾನಿ ಕಾರ್ಯಪಾಲಕ ಅಭಿಯಂತರರ ಕಚೇರಿ) |
| ಚೇತನ.ಆರ್ | ಅಧೀಕ್ಷಕರು |
| ಅಶ್ರಫ್ ಹುಸೇನ್ | ಪ್ರಥಮ ದರ್ಜೆ ಸಹಾಯಕರು |
| ಎ.ಸಿ.ದಿವ್ಯಶ್ರೀ | ಪ್ರಥಮ ದರ್ಜೆ ಸಹಾಯಕರು |
| ದರ್ಶನ್‌ಗೌಡ. ಎಲ್ | ಪ್ರಥಮ ದರ್ಜೆ ಸಹಾಯಕರು<br>(ಆಕಾನಿ ತೋ&ರೇ ಇಲಾಖೆ ಆಪ್ತ ಶಾಖೆಗೆ ) |
| ರಿಜ್ವಾನ್ ಅಹಮ್ಮದ್.ಡಿ.ಎಸ್ | ಪ್ರಥಮ ದರ್ಜೆ ಸಹಾಯಕರು |
| ಶರಣಮ್ಮ ಚಿತ್ತವಾಡಗಿ | ಪ್ರಥಮ ದರ್ಜೆ ಸಹಾಯಕರು |
| ಹೆಚ್.ರಾಜಮಹಮದ್ | ಪ್ರಥಮ ದರ್ಜೆ ಸಹಾಯಕರು |
| ಎಸ್.ಶಿವನಂಜಮ್ಮ | ಪ್ರಥಮ ದರ್ಜೆ ಸಹಾಯಕರು |
| ಜಿ.ಕವಿತಾ | ಪ್ರಥಮ ದರ್ಜೆ ಸಹಾಯಕರು |
| ವಿದ್ಯಾರಣ್ಯ.ಆರ್.ಹೊನ್ನ | ಪ್ರಥಮ ದರ್ಜೆ ಸಹಾಯಕರು |
| ಹರೀಶ್.ಬಿ.ಕೆ | ಪ್ರಥಮ ದರ್ಜೆ ಸಹಾಯಕರು (ಆಕಾನಿ ಕಾರ್ಯಪಾಲಕ ಅಭಿಯಂತರರ ಕಚೇರಿ) |
| ಆರ್.ಸುಮಾ | ಶೀಘ್ರಲಿಪಿಗಾರರು |
| ರಕ್ಷಿತ.ಸಿ.ಜೆ | ದ್ವಿತೀಯ ದರ್ಜೆ ಸಹಾಯಕರು |
| ಸುದೀಪ್. ಎಸ್ | ದ್ವಿತೀಯ ದರ್ಜೆ ಸಹಾಯಕರು (ಆಕಾನಿ ಮೇಲ್ವಿಚಾರಣಾ ದಳ) |
| ಕೆ.ಯುವರಾಜ್ | ದ್ವಿತೀಯ ದರ್ಜೆ ಸಹಾಯಕರು |
| ಶ್ರೇಯಾ.ಎ | ದ್ವಿತೀಯ ದರ್ಜೆ ಸಹಾಯಕರು |
| ಪೂಜಾ ಜವಳಿ | ಬೆರಳಚ್ಚುಗಾರರು |
| ಪವಿತ್ರ | ಬೆರಳಚ್ಚುಗಾರರು |

(2) ಗೂಡು ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡಿನ ವಹಿವಾಟು ಸುಗಮವಾಗಿ ಪಾರದರ್ಶಕವಾಗಿ ಮತ್ತು ನ್ಯಾಯರೀತಿಯಿಂದ ನಡೆಯುವಂತೆ ಮತ್ತು ರೈತರಿಗೆ ಶೀಘ್ರ ರೇಷ್ಮೆ ಗೂಡಿನ ಮೌಲ್ಯ ಪಾವತಿಯಾಗುವಂತೆ ನೋಡಿಕೊಳ್ಳುವುದು. ಮಾರುಕಟ್ಟೆಗೆ ಬರುವ ಎಲ್ಲ ಗೂಡುಗಳನ್ನು ತೂಕ ಮಾಡಿ ಬಹಿರಂಗ ಇ-ಹರಾಜು ಮುಖಾಂತರ ವಹಿವಾಟು ನಡೆಸುವುದು.

(3) ಹರಾಜು ಆಗದ ಗೂಡುಗಳನ್ನು ಮಾರುಕಟ್ಟೆಯಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳಲು ರೇಷ್ಮೆ ಬೆಳೆಗಾರರಿಗೆ ಅವಕಾಶ ಕಲ್ಪಿಸಿಕೊಡುವುದು

| | |
|---|---|
| ಹೆಚ್.ಕೆ.ರಾಜು | ಹಿರಿಯ ವಾಹನ ಚಾಲಕರು |
| ಸತೀಶ್‌ಚಂದ್ರ ಬಾಬು | ಹಿರಿಯ ವಾಹನ ಚಾಲಕರು<br>(ನಿಯೋಜನೆ ಆರ್ಥಿಕ ಇಲಾಖೆ, ಬೆಂಗಳೂರು) |
| **ಲೆಕ್ಕ ಶಾಖೆ** | |
| ಯಶೋಧ.ಕೆ | ಮುಖ್ಯ ಲೆಕ್ಕಾಧಿಕಾರಿಗಳು |
| ಚೇತನ್.ಹೆಚ್.ಕೆ | ಲೆಕ್ಕಾಧಿಕಾರಿಗಳು(ಸಾಮಾನ್ಯ) (ರಾಜ್ಯ ಲೆಕ್ಕ ಪರಿಶೋಧನೆ ಇಲಾಖೆಯಿಂದ ನಿಯೋಜನೆ) |
| ಸಿ.ರಶ್ಮಿ | ಪತ್ರಾಂಕಿತ ವ್ಯವಸ್ಥಾಪಕರು-2 |
| ಪವಿತ್ರ.ಕೆ.ವಿ | ಅಧೀಕ್ಷಕರು |
| ಮಮತಾ ಆನಂದರಾವ್.ಡಿ | ಅಧೀಕ್ಷಕರು |
| ಚಂದ್ರಕೀರ್ತಿ.ಜಿ | ಪ್ರಥಮ ದರ್ಜೆ ಸಹಾಯಕರು |
| ಸುಮಾ.ಎನ್ | ಪ್ರಥಮ ದರ್ಜೆ ಸಹಾಯಕರು |
| ಪಿ.ಹರೀಶ್ | ಪ್ರಥಮ ದರ್ಜೆ ಸಹಾಯಕರು |
| ಜಯಪ್ರಕಾಶ್.ಡಿ | ದ್ವಿತೀಯ ದರ್ಜೆ ಸಹಾಯಕರು |
| **ಲೆಕ್ಕ ಶಾಖೆ (ಆಡಿಟ್)(ರೇಷ್ಮೆ ಭವನ)** | |
| ಚೇತನ್.ಹೆಚ್.ಕೆ | ಲೆಕ್ಕಾಧಿಕಾರಿಗಳು (ರಾಜ್ಯ ಲೆಕ್ಕ ಪರಿಶೋಧನೆ ಇಲಾಖೆಯಿಂದ ನಿಯೋಜನೆ) |
| ನಿರ್ಮಲ ಜಿ.ಎಂ | ಪತ್ರಾಂಕಿತ ವ್ಯವಸ್ಥಾಪಕರು-1 |
| ಎಸ್.ಕೆ.ಸಿದ್ದಮ್ಮ | ಪತ್ರಾಂಕಿತ ವ್ಯವಸ್ಥಾಪಕರು-2 |
| **ಲೆಕ್ಕ ಪರೀಶೋಧನಾ ತಂಡ (ರೇಷ್ಮೆ ಭವನ)** | |
| ಮಹೇಶ | ಅಧೀಕ್ಷಕರು |
| ಅವಿನಾಶ್ | ಪ್ರಥಮ ದರ್ಜೆ ಸಹಾಯಕರು |
| ಚೇತನ್‌ಕುಮಾರ್.ಎಸ್.ಸಿ | ಪ್ರಥಮ ದರ್ಜೆ ಸಹಾಯಕರು |
| ಶರತ್.ಎಸ್.ಕೆ | ಪ್ರಥಮ ದರ್ಜೆ ಸಹಾಯಕರು |
| ಲೋಕೇಶ್.ಹೆಚ್.ವಿ | ದ್ವಿತೀಯ ದರ್ಜೆ ಸಹಾಯಕರು |

**ತಾಂತ್ರಿಕ ವರ್ಗದ ಅಧಿಕಾರಿಗಳು/ಸಿಬ್ಬಂದಿ**

| | |
|---|---|
| **ರೇಷ್ಮೆ ಅಪರ ನಿರ್ದೇಶಕರು(ತಾಂತ್ರಿಕ)** | |
| ವೈ.ಟಿ.ತಿಮ್ಮಯ್ಯ | ರೇಷ್ಮೆ ಅಪರ ನಿರ್ದೇಶಕರು(ತಾಂತ್ರಿಕ) |
| **ರೇಷ್ಮೆ ಅಪರ ನಿರ್ದೇಶಕರು(ತಾಂತ್ರಿಕ) ಆಪ್ತ ಶಾಖೆ** | |
| ಪಿ.ಮಂಜುನಾಥ್ | ವಾಹನ ಚಾಲಕರು |
| | |
| **ಯೋಜನಾ ವಿಭಾಗ** | |
| ಮಲ್ಲಿಕಾರ್ಜುನ ಸ್ವಾಮಿ | ರೇಷ್ಮೆ ಜಂಟಿ ನಿರ್ದೇಶಕರು |
| ವಿಜಯಲಕ್ಷ್ಮಿ | ರೇಷ್ಮೆ ಉಪ ನಿರ್ದೇಶಕರು |
| ಎಸ್.ಗಾಯಿತ್ರಿದೇವಿ | ರೇಷ್ಮೆ ಸಹಾಯಕ ನಿರ್ದೇಶಕರು |
| ವೆಂಕಟಚಲಪತಿ | ರೇಷ್ಮೆ ಸಹಾಯಕ ನಿರ್ದೇಶಕರು |
| ಎಂ.ಪಿ.ಪೂರ್ಣಿಮ | ಪತ್ರಾಂಕಿತ ವ್ಯವಸ್ಥಾಪಕರು-2 |
| ಲೋಕೇಶ್ ವಿ.ಎಸ್ | ರೇಷ್ಮೆ ನಿರೀಕ್ಷಕರು |
| ಡಿ.ಮಂಜುಳಾ | ರೇಷ್ಮೆ ನಿರೀಕ್ಷಕರು |
| ರವಿಕಿರಣ್.ಹೆಚ್.ಎಲ್ | ಪ್ರಥಮ ದರ್ಜೆ ಸಹಾಯಕರು |
| ಸಂತೋಷ್ ಕುಮಾರ್.ಎಸ್.ಆರ್ | ಪ್ರವರ್ತಕರು |
| ಶಂಶಾಂಕ್.ಎಸ್ | ಪ್ರವರ್ತಕರು |
| ಬಾಲಕೃಷ್ಣ | ದ್ವಿತೀಯ ದರ್ಜೆ ಸಹಾಯಕರು |
| **ರೇಷ್ಮೆ ಬೀಜೋತ್ಪಾದನೆ ಮತ್ತು ರೇಷ್ಮೆ ಕೃಷಿ ಕ್ಷೇತ್ರಗಳ ವಿಭಾಗ** | |

| | |
|---|---|
| ಹೆಚ್.ಆರ್.ವಿಜಯಕುಮಾರಿ | ರೇಷ್ಮೆ ಜಂಟಿ ನಿರ್ದೇಶಕರು |
| ನರಸಿಂಹಸ್ವಾಮಿ.ವಿ | ರೇಷ್ಮೆ ಉಪ ನಿರ್ದೇಶಕರು |
| ಕೆ.ಎಸ್.ಕೃಷ್ಣಬಾಬು | ರೇಷ್ಮೆ ಸಹಾಯಕ ನಿರ್ದೇಶಕರು |
| ಮಮತಾ.ಆರ್ | ರೇಷ್ಮೆ ವಿಸ್ತರಣಾಧಿಕಾರಿಗಳು |
| ಮಹದೇವಸ್ವಾಮಿ.ಕೆ | ರೇಷ್ಮೆ ನಿರೀಕ್ಷಕರು |
| **ತಾಂತ್ರಿಕ ಸೇವೆಗಳು ಮತ್ತು ತರಬೇತಿ ಸಂಸ್ಥೆ** | |
| ಇಂದ್ರಾಣಿ ಬಿ | ರೇಷ್ಮೆ ಜಂಟಿ ನಿರ್ದೇಶಕರು |
| ಅಮರನಾಥ್ ಎಸ್ | ರೇಷ್ಮೆ ಉಪ ನಿರ್ದೇಶಕರು |
| ಹೆಚ್.ಸಿ.ಶ್ರೀನಿವಾಸಮೂರ್ತಿ | ರೇಷ್ಮೆ ಸಹಾಯಕ ನಿರ್ದೇಶಕರು |
| ಡಿ.ಮಂಜುನಾಥ್ | ರೇಷ್ಮೆ ವಿಸ್ತರಣಾಧಿಕಾರಿಗಳು (ಅಕಾನಿ. ರೇವಿಕೇ. ಬೆಂಗಳೂರು) |
| ಮಹೇಶ್.ಸಿ | ರೇಷ್ಮೆ ನಿರೀಕ್ಷಕರು |
| ಎಲ್.ಪ್ರಶಾಂತ್ | ರೇಷ್ಮೆ ನಿರೀಕ್ಷಕರು |
| **ಗೂಡು ಮಾರುಕಟ್ಟೆ ವಿಭಾಗ** | |
| ಪುಷ್ಪಲತ. ಎಸ್ | ರೇಷ್ಮೆ ಜಂಟಿ ನಿರ್ದೇಶಕರು |
| ನರಸಿಂಹಮೂರ್ತಿ ಜಿ.ಆರ್ | ರೇಷ್ಮೆ ಉಪ ನಿರ್ದೇಶಕರು |
| ಎನ್.ಸಿ.ಭಾರತಿ | ರೇಷ್ಮೆ ಸಹಾಯಕ ನಿರ್ದೇಶಕರು |
| ರವಿಶಂಕರ್.ಬಿ.ಎ | ರೇಷ್ಮೆ ವಿಸ್ತರಣಾಧಿಕಾರಿಗಳು |
| ಎನ್.ಕೆ.ಆಶಾ | ರೇಷ್ಮೆ ನಿರೀಕ್ಷಕರು |
| ಲಲಿತಾ.ಬಿ.ಹೆಚ್ | ರೇಷ್ಮೆ ನಿರೀಕ್ಷಕರು |
| ಮೋನಿಷಾ.ಟಿ.ಪಿ | ರೇಷ್ಮೆ ಪ್ರದರ್ಶಕರು |
| ಶಶಾಂಕ್ ಎಸ್ | ರೇಷ್ಮೆ ಪ್ರವರ್ತಕರು |
| **ದೃಶ್ಯ ಮತ್ತು ಶ್ರಾವ್ಯ ವಿಭಾಗ** | |
| ಮಂಜುಳಾದೇವಿ.ಎನ್.ಟಿ | ರೇಷ್ಮೆ ಉಪ ನಿರ್ದೇಶಕರು |
| ಟಿ.ಎ.ಶೈಲಜಾ | ರೇಷ್ಮೆ ಸಹಾಯಕ ನಿರ್ದೇಶಕರು |
| ಉಮೇಶ್.ಕೆ.ಎಂ | ರೇಷ್ಮೆ ವಿಸ್ತರಣಾಧಿಕಾರಿಗಳು |
| ಎಂ.ರಘುನಾಥ್ | ರೇಷ್ಮೆ ನಿರೀಕ್ಷಕರು |
| ಮಂಜುಳಾ.ಬಿ | ರೇಷ್ಮೆ ನಿರೀಕ್ಷಕರು |
| **ರೇಷ್ಮೆ ಉದ್ಯಮ ಕೋಶ ವಿಭಾಗ** | |
| ಸೀಮಾ.ಬಿ | ರೇಷ್ಮೆ ಉಪ ನಿರ್ದೇಶಕರು |
| ನಾಗೇಶ್.ಎಸ್ | ರೇಷ್ಮೆ ಸಹಾಯಕ ನಿರ್ದೇಶಕರು |
| ರಾಮಚಂದ್ರ.ಎನ್ | ರೇಷ್ಮೆ ವಿಸ್ತರಣಾಧಿಕಾರಿಗಳು |
| ಶಿವರಾಜು.ಟಿ.ಎಲ್ | ರೇಷ್ಮೆ ವಿಸ್ತರಣಾಧಿಕಾರಿಗಳು |
| ಸಂಜಯ್.ವೈ.ಜಗತಾಪ್ | ಪತ್ರಾಂಕಿತ ವ್ಯವಸ್ಥಾಪಕರು-2 |
| ಟಿ.ಗಿರೀಶ್‌ಕಪೂರ್ | ಪತ್ರಾಂಕಿತ ವ್ಯವಸ್ಥಾಪಕರು-2 |
| ನಿವಿತಾ ಪಿ ರಾವ್ | ಪ್ರಥಮ ದರ್ಜೆ ಸಹಾಯಕರು |
| ಭೂಮಿಕಾ.ಎಂ.ಎಸ್ | ರೇಷ್ಮೆ ಪ್ರದರ್ಶಕರು |
| ಫೌಸಿಯಾ ಅಫ್ಸಾನ್.ಪಿ.ಆರ್ | ದ್ವಿತೀಯ ದರ್ಜೆ ಸಹಾಯಕರು |
| **ಸಹಕಾರ ಸಂಘಗಳ ವಿಭಾಗ** | |
| ಪೂರ್ಣಿಮಾ.ಎಸ್ | ಸಹಕಾರ ಸಂಘಗಳ ಜಂಟಿ ನಿಬಂಧಕರು |
| ವಾಣಿ.ಎಂ.ಎಸ್ | ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು |
| **ಎಂ.ಐ.ಎಸ್. ವಿಭಾಗ** | |
| ಎಂ.ಆರ್.ಪದ್ಮಜ | ಮುಖ್ಯ ಅರ್ಥಶಾಸ್ತ್ರಜ್ಞರು |

| | |
|---|---|
| ಮದನ್‌ಕುಮಾರ್ | ರೇಷ್ಮೆ ವಿಸ್ತರಣಾಧಿಕಾರಿಗಳು |
| ಸವಿತಾ | ಅಧೀಕ್ಷಕರು |
| ದೇವೇಂದ್ರಕುಮಾರ್.ಬಿ.ಎಂ | ಅಧೀಕ್ಷಕರು |
| ಸುಮಂಗಲ | ಅಧೀಕ್ಷಕರು |

**4(1)(ಬಿ)(x) ಪ್ರತಿಯೊಬ್ಬ ಅಧಿಕಾರಿ/ಸಿಬ್ಬಂದಿ ಮಾಹೆವಾರು ಪಡೆಯುತ್ತಿರುವ ವೇತನ, ಭತ್ಯೆ, ಪರಿಹಾರ ಪದ್ಧತಿ ಕುರಿತು ವಿವರಗಳು.**
**ರೇಷ್ಮೆ ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವೇತನದ ವಿವರಗಳು**

(ವೇತನ-ರೂ.ಗಳಲ್ಲಿ)

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು ಶ್ರೀ/ಶ್ರೀಮತಿ | ಪದನಾಮ | ಒಟ್ಟು ವೇತನ |
|---|---|---|---|
| 1 | ರಾಜೇಶ್‌ಗೌಡ.ಎಂ.ಬಿ | ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು | 2,05,692-00 |
| 2 | ಕಾತ್ಯಾಯಿನಿದೇವಿ. ಎಸ್ | ಜಂಟಿ ನಿರ್ದೇಶಕರು(ಆಡಳಿತ) | 2,09,054-00 |
| 3 | ಯಶೋಧ ಕೆ. | ಮುಖ್ಯಲೆಕ್ಕಾಧಿಕಾರಿಗಳು | 1,90,095-00 |
| 4 | ತಿಮ್ಮಯ್ಯ ವೈ.ಟಿ | ಅಪರ ನಿರ್ದೇಶಕರು (ತಾಂತ್ರಿಕ) | 1,90,245-00 |
| 5 | ವಿಜಯಕುಮಾರಿ.ಹೆಚ್.ಆರ್ | ರೇಷ್ಮೆ ಜಂಟಿ ನಿರ್ದೇಶಕರು | 1,85,644-00 |
| 6 | ಇಂದ್ರಾಕ್ಷಿ ಜಿ | ರೇಷ್ಮೆ ಜಂಟಿ ನಿರ್ದೇಶಕರು | - |
| 7 | ಪುಷ್ಪಲತಾ ಎಸ್ | ರೇಷ್ಮೆ ಜಂಟಿ ನಿರ್ದೇಶಕರು | 1,80,943-00 |
| 8 | ಎಂ.ಆರ್.ಪದ್ಮಜ | ಮುಖ್ಯ ಅರ್ಥಶಾಸ್ತ್ರಜ್ಞರು | 2,24,744-00 |
| 9 | ಪೂರ್ಣಿಮಾ.ಎಸ್ | ಸಹಕಾರ ಸಂಘಗಳ ಜಂಟಿ ನಿಬಂಧಕರು | 1,80,943-00 |
| 10 | ಮಂಜುಳಾದೇವಿ.ಎನ್.ಟಿ | ರೇಷ್ಮೆ ಉಪ ನಿರ್ದೇಶಕರು | 1,72,313-00 |
| 11 | ಸೀಮಾ.ಬಿ | ರೇಷ್ಮೆ ಉಪ ನಿರ್ದೇಶಕರು | 1,72,313-00 |
| 12 | ವಿಜಯಲಕ್ಷ್ಮಿ | ರೇಷ್ಮೆ ಉಪ ನಿರ್ದೇಶಕರು | 1,76,517-00 |
| 13 | ನರಸಿಂಹಸ್ವಾಮಿ.ವಿ | ರೇಷ್ಮೆ ಉಪ ನಿರ್ದೇಶಕರು | 1,72,313-00 |
| 14 | ಅಮರನಾಥ್ .ಎಸ್ | ರೇಷ್ಮೆ ಉಪ ನಿರ್ದೇಶಕರು | 1,72,463-00 |
| 15 | ನರಸಿಂಹಮೂರ್ತಿ ಜಿ.ಆರ್ | ರೇಷ್ಮೆ ಉಪ ನಿರ್ದೇಶಕರು | 1,76,492-00 |
| 16 | ವೆಂಕಟಾಚಲಪತಿ.ಕೆ.ಎನ್ | ರೇಷ್ಮೆ ಸಹಾಯಕ ನಿರ್ದೇಶಕರು | 1,68,260-00 |
| 17 | ಗಾಯತ್ರಿದೇವಿ.ಎಸ್ | ರೇಷ್ಮೆ ಸಹಾಯಕ ನಿರ್ದೇಶಕರು | 1,19,437-00 |
| 18 | ಭಾರತಿ.ಎನ್.ಸಿ | ರೇಷ್ಮೆ ಸಹಾಯಕ ನಿರ್ದೇಶಕರು | 1,18,837-00 |
| 19 | ನಾಗೇಶ್.ಎಸ್ | ರೇಷ್ಮೆ ಸಹಾಯಕ ನಿರ್ದೇಶಕರು | 1,24,851-00 |
| 20 | ಶೈಲಜಾ.ಟಿ.ಎ | ರೇಷ್ಮೆ ಸಹಾಯಕ ನಿರ್ದೇಶಕರು | 1,18,837-00 |
| 21 | ಹೆಚ್.ಸಿ.ಶ್ರೀನಿವಾಸಮೂರ್ತಿ | ರೇಷ್ಮೆ ಸಹಾಯಕ ನಿರ್ದೇಶಕರು | 1,24,851-00 |
| 22 | ಕೆ.ಎಸ್.ಕೃಷ್ಣಬಾಬು | ರೇಷ್ಮೆ ಸಹಾಯಕ ನಿರ್ದೇಶಕರು | 1,25,101-00 |
| 23 | ರಾಮಚಂದ್ರ.ಎನ್ | ರೇಷ್ಮೆ ವಿಸ್ತರಣಾಧಿಕಾರಿಗಳು | 1,10,338-00 |
| 24 | ಶಿವರಾಜು.ಟಿ.ಎಲ್ | ರೇಷ್ಮೆ ವಿಸ್ತರಣಾಧಿಕಾರಿಗಳು | 110563-00 |
| 25 | ರವಿಶಂಕರ್ ಜಿ.ಎ | ರೇಷ್ಮೆ ವಿಸ್ತರಣಾಧಿಕಾರಿಗಳು | 1,10,338-00 |
| 26 | ಮಮತಾ.ಆರ್ | ರೇಷ್ಮೆ ವಿಸ್ತರಣಾಧಿಕಾರಿಗಳು | 1,10,338-00 |
| 27 | ಉಮೇಶ್.ಕೆ.ಎಂ | ರೇಷ್ಮೆ ವಿಸ್ತರಣಾಧಿಕಾರಿಗಳು | 1,10,338-00 |
| 28 | ಡಿ.ಮಂಜುನಾಥ್ | ರೇಷ್ಮೆ ವಿಸ್ತರಣಾಧಿಕಾರಿಗಳು | 1,10,438-00 |
| 29 | ಮದನ್‌ಕುಮಾರ್ ಆರ್ | ರೇಷ್ಮೆ ವಿಸ್ತರಣಾಧಿಕಾರಿಗಳು | 92,926-00 |
| 30 | ಪ್ರಕಾಶ್.ಡಿ | ಆಡಳಿತಾಧಿಕಾರಿಗಳು | 1,68,260-00 |
| 31 | ಚೇತನ್ ಹೆಚ್ ಕೆ | ಲೆಕ್ಕಾಧಿಕಾರಿಗಳು | |

| | | | |
|---|---|---|---|
| 32 | ಉಮಾರಾಣಿ.ಬಿ | ಪತ್ರಾಂಕಿತ ವ್ಯವಸ್ಥಾಪಕರು- I | 1,05,369-00 |
| 33 | ಜಿ.ಎಂ.ನಿರ್ಮಲಾ | ಪತ್ರಾಂಕಿತ ವ್ಯವಸ್ಥಾಪಕರು- I | 1,10,338-00 |
| 34 | ಸಿದ್ದಮ್ಮ.ಎಸ್.ಕೆ | ಪತ್ರಾಂಕಿತ ವ್ಯವಸ್ಥಾಪಕರು- I | 1,12,822-00 |
| 35 | ಗಿರೀಶ್ ಕಪೂರ್.ಟಿ | ಪತ್ರಾಂಕಿತ ವ್ಯವಸ್ಥಾಪಕರು- II | 1,24,851-00 |
| 36 | ಸಂಜಯ.ವೈ.ಜಗತಾಪ್ | ಪತ್ರಾಂಕಿತ ವ್ಯವಸ್ಥಾಪಕರು- II | 1,21,969-00 |
| 37 | ಶಿವಣ್ಣ.ಹೆಚ್.ಜೆ | ಪತ್ರಾಂಕಿತ ವ್ಯವಸ್ಥಾಪಕರು- II | 1,24,976-00 |
| 38 | ರಶ್ಮಿ.ಸಿ | ಪತ್ರಾಂಕಿತ ವ್ಯವಸ್ಥಾಪಕರು- II | 1,10,338-00 |
| 39 | ಪೂರ್ಣಿಮ ಎಂ ಪಿ | ಪತ್ರಾಂಕಿತ ವ್ಯವಸ್ಥಾಪಕರು- II | 1,09,263-00 |

ಸಿಬ್ಬಂದಿಗಳ ವೇತನದ ವಿವರಗಳು

(ವೇತನ-ರೂ.ಗಳಲ್ಲಿ)

| ಕ್ರಮ ಸಂಖ್ಯೆ | ಸಿಬ್ಬಂದಿಗಳ ಹೆಸರು ಶ್ರೀ/ಶ್ರೀಮತಿ | ಪದನಾಮ | ಒಟ್ಟು ವೇತನ |
|---|---|---|---|
| 1 | ಎನ್.ಮಂಜುಳಾದೇವಿ | ಅಧೀಕ್ಷಕರು | 87,480-00 |
| 2 | ಎಸ್.ಜೆ.ರೂಪ | ಅಧೀಕ್ಷಕರು | 87,480-00 |
| 3 | ವಿ.ನವೀನ್‌ಕುಮಾರ್ | ಅಧೀಕ್ಷಕರು | 93,952-00 |
| 4 | ವೇಣುಗೋಪಾಲ್.ಆರ್.ವಿ | ಅಧೀಕ್ಷಕರು | 97,631-00 |
| 5 | ಮಮತಾ ಆನಂದನವರ್.ಡಿ | ಅಧೀಕ್ಷಕರು | 87,480-00 |
| 6 | ಪವಿತ್ರ.ಕೆ.ವಿ | ಅಧೀಕ್ಷಕರು | 87,480-00 |
| 7 | ರುದ್ರಪ್ರಸಾದ್.ಹೆಚ್ | ಅಧೀಕ್ಷಕರು | 83,361-00 |
| 8 | ವಿನಯ್‌ಕುಮಾರ್.ಎಂ | ಅಧೀಕ್ಷಕರು | 83,661-00 |
| 9 | ಚೇತನ್ ಆರ್. | ಅಧೀಕ್ಷಕರು | 87,480-00 |
| 10 | ಸುಮಂಗಲ.ಎಸ್ | ಅಧೀಕ್ಷಕರು | 96,109-00 |
| 11 | ರಮೇಶ್ ಪಿತಾಂಬರಪ್ಪ | ಅಧೀಕ್ಷಕರು | 83,361-00 |
| 12 | ಮಹೇಶ್ | ಅಧೀಕ್ಷಕರು | 87,480-00 |
| 13 | ಸವಿತಾ.ಎಸ್ | ಅಧೀಕ್ಷಕರು | 91,794-00 |
| 14 | ದೇವೇಂದ್ರಕುಮಾರ್.ಬಿ.ಎಂ | ಅಧೀಕ್ಷಕರು | 85,322-00 |
| 15 | ಅಶ್ರಫ್ ಹುಸೇನ್ | ಪ್ರಥಮ ದರ್ಜೆ ಸಹಾಯಕರು | 68,652-00 |
| 16 | ಚಂದ್ರಕೀರ್ತಿ.ಬಿ | ಪ್ರಥಮ ದರ್ಜೆ ಸಹಾಯಕರು | 67,017-00 |
| 17 | ಚೇತನ್‌ಕುಮಾರ್.ಎನ್.ಸಿ | ಪ್ರಥಮ ದರ್ಜೆ ಸಹಾಯಕರು | 79,439-00 |
| 18 | ಎ.ಸಿ.ದಿವ್ಯಶ್ರೀ | ಪ್ರಥಮ ದರ್ಜೆ ಸಹಾಯಕರು | 68,652-00 |
| 19 | ಹರೀಶ.ಪಿ | ಪ್ರಥಮ ದರ್ಜೆ ಸಹಾಯಕರು | 64,299-00 |
| 20 | ರಿಜ್ವಾನ್ ಅಹ್ಮದ್.ಡಿ.ಎಸ್ | ಪ್ರಥಮ ದರ್ಜೆ ಸಹಾಯಕರು | 79,439-00 |
| 21 | ಶರಣಮ್ಮ ಚಿತ್ತವಾಡಗಿ | ಪ್ರಥಮ ದರ್ಜೆ ಸಹಾಯಕರು | 63,749-00 |
| 22 | ಸುಮಾ.ಎನ್ | ಪ್ರಥಮ ದರ್ಜೆ ಸಹಾಯಕರು | 79439-00 |
| 23 | ಹರೀಶ್.ಬಿ.ಕೆ | ಪ್ರಥಮ ದರ್ಜೆ ಸಹಾಯಕರು | 64,399-00 |
| 24 | ರವಿಕಿರಣ್.ಹೆಚ್.ಎಲ್ | ಪ್ರಥಮ ದರ್ಜೆ ಸಹಾಯಕರು | 63749-00 |
| 25 | ಅವಿನಾಶ್ | ಪ್ರಥಮ ದರ್ಜೆ ಸಹಾಯಕರು | 67,017-00 |
| 26 | ರಾಜ್‌ಮಹಮದ್ | ಪ್ರಥಮ ದರ್ಜೆ ಸಹಾಯಕರು | 60,807-00 |
| 27 | ಎಸ್.ಶಿವನಂಜಮ್ಮ | ಪ್ರಥಮ ದರ್ಜೆ ಸಹಾಯಕರು | 72,084-00 |
| 28 | ಕವಿತಾ.ಜಿ | ಪ್ರಥಮ ದರ್ಜೆ ಸಹಾಯಕರು | 60,807-00 |
| 29 | ವಿದ್ಯಾರಣ್ಯ.ಆರ್.ಹೊನ್ನ | ಪ್ರಥಮ ದರ್ಜೆ ಸಹಾಯಕರು | 60,807-00 |
| 30 | ಶರತ್.ಎಸ್.ಕೆ | ಪ್ರಥಮ ದರ್ಜೆ ಸಹಾಯಕರು | 60,807-00 |
| 31 | ದರ್ಶನ್‌ಗೌಡ.ಎಲ್ | ಪ್ರಥಮ ದರ್ಜೆ ಸಹಾಯಕರು | 68,652-00 |
| 32 | ಸುಮಾ.ಎನ್ | ಪ್ರಥಮ ದರ್ಜೆ ಸಹಾಯಕರು | 79,439-00 |

| | | | |
|---|---|---|---|
| 33 | ನಿಮಿತ ಪಿ ರಾವ್ | ಪ್ರಥಮ ದರ್ಜೆ ಸಹಾಯಕರು | 59,336-00 |
| 34 | ಆರ್.ಸುಮಾ | ಶೀಘ್ರಲಿಪಿಗಾರರು | 74,182-00 |
| 35 | ಎನ್.ಕೆ.ಆಶಾ | ರೇಷ್ಮೆ ನಿರೀಕ್ಷಕರು | 85,322-00 |
| 36 | ಎಂ.ರಘುನಾಥ್ | ರೇಷ್ಮೆ ನಿರೀಕ್ಷಕರು | 70,286-00 |
| 37 | ಮಂಜುಳಾ.ಬಿ | ರೇಷ್ಮೆ ನಿರೀಕ್ಷಕರು | 85,322-00 |
| 38 | ಎಲ್.ಪ್ರಶಾಂತ | ರೇಷ್ಮೆ ನಿರೀಕ್ಷಕರು | 93,952-00 |
| 39 | ಸಿ.ಮಹೇಶ್ | ರೇಷ್ಮೆ ನಿರೀಕ್ಷಕರು | 68,652-00 |
| 40 | ಲಲಿತಾ.ಬಿ.ಹೆಚ್ | ರೇಷ್ಮೆ ನಿರೀಕ್ಷಕರು | 79,439-00 |
| 41 | ಕೆ.ಮಹದೇವಸ್ವಾಮಿ | ರೇಷ್ಮೆ ನಿರೀಕ್ಷಕರು | 96,309-00 |
| 42 | ಡಿ.ಮಂಜುಳಾ | ರೇಷ್ಮೆ ನಿರೀಕ್ಷಕರು | 81,700-00 |
| 43 | ಪಿ.ಎಸ್.ಲೋಕೇಶ್ | ರೇಷ್ಮೆ ನಿರೀಕ್ಷಕರು | 83,536-00 |
| 44 | ಎಂ.ಎಸ್.ವಾಣಿ | ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು | 81,400-00 |
| 45 | ಮೋನಿಷಾ.ಟಿ.ಪಿ | ರೇಷ್ಮೆ ಪ್ರದರ್ಶಕರು | 51,458-00 |
| 46 | ಭೂಮಿಕಾ.ಎಂ.ಎಸ್ | ರೇಷ್ಮೆ ಪ್ರದರ್ಶಕರು | 53,942-00 |
| 47 | ಬಾಲಕೃಷ್ಣ | ದ್ವಿತೀಯ ದರ್ಜೆ ಸಹಾಯಕರು | 67,067-00 |
| 48 | ಫೌಸಿಯಾ ಅಫ್ಸಾನ್.ಪಿ.ಆರ್ | ದ್ವಿತೀಯ ದರ್ಜೆ ಸಹಾಯಕರು | 47,928-00 |
| 49 | ಕೆ.ಯುವರಾಜ್ | ದ್ವಿತೀಯ ದರ್ಜೆ ಸಹಾಯಕರು | 55,250-00 |
| 50 | ಡಿ.ಜಯಪ್ರಕಾಶ್ | ದ್ವಿತೀಯ ದರ್ಜೆ ಸಹಾಯಕರು | 62,278-00 |
| 51 | ಸುದೀಪ್.ಎಸ್ | ದ್ವಿತೀಯ ದರ್ಜೆ ಸಹಾಯಕರು | 46,882-00 |
| 52 | ಲೋಕೇಶ ವಿ.ಎಚ್ | ದ್ವಿತೀಯ ದರ್ಜೆ ಸಹಾಯಕರು | 62,278-00 |
| 53 | ರಕ್ಷಿತ.ಸಿ.ಜೆ | ದ್ವಿತೀಯ ದರ್ಜೆ ಸಹಾಯಕರು | 45,836-00 |
| 54 | ಶ್ರೇಯಾ ಎ | ದ್ವಿತೀಯ ದರ್ಜೆ ಸಹಾಯಕರು | 45,836-00 |
| 55 | ಪವಿತ್ರ | ಬೆರಳಚ್ಚುಗಾರರು | 48,228-00 |
| 56 | ಪೂಜಾ ಜವಳಿ | ಬೆರಳಚ್ಚುಗಾರರು | 49,405-00 |
| 57 | ಸಂತೋಷ ಕುಮಾರ್ ಎಸ್.ಆರ್ | ರೇಷ್ಮೆ ಪ್ರವರ್ತಕರು | 45836-00 |
| 58 | ಶಶಾಂಕ್ ಎಸ್ | ರೇಷ್ಮೆ ಪ್ರವರ್ತಕರು | |
| 59 | ರಾಜು.ಹೆಚ್.ಕೆ | ಹಿರಿಯ ವಾಹನ ಚಾಲಕರು | 1,06,494-00 |
| 60 | ಸತೀಶ್‌ಚಂದ್ರ ಬಾಬು.ಎನ್ | ಹಿರಿಯ ವಾಹನ ಚಾಲಕರು | 74,932-00 |
| 61 | ವಿಶ್ವನಾಥ್.ಆರ್ | ಹಿರಿಯ ವಾಹನ ಚಾಲಕರು | 67,717-00 |
| 62 | ಮಂಜುನಾಥ.ಪಿ | ವಾಹನ ಚಾಲಕರು | 61,507-00 |

** ** **

## 4(1)(ಬಿ)(xi) ಆಯವ್ಯಯ – ವಂಟನೆ ಮತ್ತು ವೆಚ್ಚ

## ಯೋಜನಾ ಲೆಕ್ಕ ಶೀರ್ಷಿಕೆ – ವಂಟನೆ ಮತ್ತು ವೆಚ್ಚ

ರೇಷ್ಮೆ ಇಲಾಖೆಯ 2024–25ನೇ ಸಾಲಿನ ಆಯವ್ಯಯ ಮತ್ತು ವೆಚ್ಚ ಹಾಗೂ 2025–26ನೇ ಸಾಲಿನ ಆಯವ್ಯಯದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಲೆಕ್ಕ ಶೀರ್ಷಿಕೆ | 2024-25ನೇ ಸಾಲಿನ ಪರಿಷ್ಕೃತ ಆಯವ್ಯಯ | ವೆಚ್ಚ | 2025-26ನೇ ಸಾಲಿನ ಆಯವ್ಯಯ |
|---|---|---|---|---|---|
| I | ರಾಜ್ಯ ವಲಯ ಯೋಜನೆಗಳು | | | | |
| 1 | ರಾಜ್ಯ ರೇಷ್ಮೆ ಉದ್ಯಮಗಳು | | 10954.230 | 10018.502 | 9976.730 |
| 2 | ರೇಷ್ಮೆ ಅಭಿವೃದ್ಧಿ ಯೋಜನೆ | | | | |
| | ಪೂರಕ ವೆಚ್ಚಗಳು | 2851-00-107-1-35(015) | 88.000 | 86.777 | 75.000 |
| | ಇತರೆ ಖರ್ಚುಗಳು | 2851-00-107-1-35(059) | 751.000 | 743.792 | 700.000 |
| | ಸಹಾಯಧನ | 2851-00-107-1-35(106) | 5195.000 | 5160.754 | 3655.720 |
| | ವಿಶೇಷ ಘಟಕ ಉಪ ಯೋಜನೆ | 2851-00-107-1-35(422) | 1223.091 | 1216.384 | 733..220 |
| | ಗಿರಿಜನ ಉಪ ಯೋಜನೆ | 2851-00-107-1-35(423) | 555.682 | 550.199 | 336.060 |
| | ಒಟ್ಟು | | 7812.773 | 7757.907 | 5500.000 |
| 3 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ(PMKSY) | | | | |
| | ಇತರೆ ಖರ್ಚುಗಳು | 2851-00-107-1-49(059) | | | |
| | ಸಹಾಯಧನ | 2851-00-107-1-49(106) | 519.000 | 255.799 | |
| | ವಿಶೇಷ ಘಟಕ ಉಪ ಯೋಜನೆ | 2851-00-107-1-49(422) | 85.909 | 59.396 | 109.000 |
| | ಗಿರಿಜನ ಉಪ ಯೋಜನೆ | 2851-00-107-1-49(423) | 49.318 | 42.990 | 55.000 |
| | ಒಟ್ಟು | | 654.227 | 358.186 | 164.000 |
| 4 | ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯಿದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆ | | | | |
| | ವಿಶೇಷ ಘಟಕ ಉಪ ಯೋಜನೆ | 2851-00-107-1-50(422) | 3.420 | 3.420 | 17.810 |
| | ಗಿರಿಜನ ಉಪ ಯೋಜನೆ | 2851-00-107-1-50(423) | 3.650 | 3.650 | 6.520 |
| | ಒಟ್ಟು | | 7.070 | 7.070 | 24.330 |
| 5 | ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ | | | | |
| | ಕಚೇರಿ ವೆಚ್ಚಗಳು | 2851-00-107-1-51(050) | | | 100.000 |
| | ಇತರೆ ಖರ್ಚುಗಳು | 2851-00-107-1-51(059) | 1550.000 | 798.119 | 1.000 |
| | ಕಟ್ಟಡ ವೆಚ್ಚಗಳು | 2851-00-107-1-51(071) | 75.000 | 62.807 | 75.000 |
| | ಧನ ಸಹಾಯ/ಪರಿಹಾರ | 2851-00-107-1-51(100) | 10.000 | 10.000 | 10.000 |
| | ಸಹಾಯಾನುದಾನ - ಸಾಮಾನ್ಯ | 2851-00-107-1-51(103) | 151.000 | 151.000 | 1.000 |
| | ಸಹಾಯಧನ | 2851-00-107-1-51(106) | 3300.000 | 3284.363 | 4599.000 |

| | | | | | |
|---|---|---|---|---|---|
| | ಸಣ್ಣ ಕಾಮಗಾರಿಗಳು | 2851-00-107-1-51(140) | 300.000 | 292.838 | 225.000 |
| | ಸಾಮಗ್ರಿ ಮತ್ತು ಸರಬರಾಜುಗಳು | 2851-00-107-1-51(221) | | | 300.000 |
| | ಒಟ್ಟು | | 5386.000 | 4598.127 | 5311.000 |
| 6 | ಖಾಲಿ ಹುದ್ದೆಗಳಿಗಾಗಿ ಅನುದಾನ | | | | |
| | ಇತರೆ ಭತ್ಯೆ | 2851-00-107-1-55(014) | 846.250 | | 3473.230 |
| 7 | ಕಟ್ಟಡ ಕಾಮಗಾರಿಗಳು ಯೋಜನೆ | | | | |
| | ಪ್ರಧಾನ ಕಾಮಗಾರಿಗಳು | 4851-00-107-1-01(139) | 94.000 | 91.309 | 98.000 |
| | ವಿಶೇಷ ಘಟಕ ಉಪ ಯೋಜನೆ | 4851-00-107-1-01(422) | 4.000 | 4.000 | 1.000 |
| | ಗಿರಿಜನ ಉಪ ಯೋಜನೆ | 4851-00-107-1-01(423) | 2.000 | 2.000 | 1.000 |
| | ನಬಾರ್ಡ್ ಕಾಮಗಾರಿಗಳು | 4851-00-107-1-03(436) | 4000.000 | 2940.261 | 4396.000 |
| | ಒಟ್ಟು | | 4100.000 | 3037.571 | 4496.000 |
| 8 | ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯಿದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆ | | | | |
| | ಗಿರಿಜನ ಉಪ ಯೋಜನೆ | 4851-00-107-0-01(423) | 0.010 | 0.007 | |
| | ರೇಷ್ಮೆ ಉದ್ಯಮಗಳು ಯೋಜನೆ - ವಸ್ತ್ರೋದ್ಯಮಗಳು | | | | |
| 9 | ಸರ್ಕಾರಿ ರೇಷ್ಮೆ ಫಿಲೇಚರ್, ಸಂತೇಮರಹಳ್ಳಿ | 2852-08-202-2-01 | 986.680 | 886.442 | 948.320 |
| | ರಾಜ್ಯ ವಲಯ ಯೋಜನೆಗಳ ಒಟ್ಟು | | 30747.240 | 26663.811 | 29893.610 |
| II | ಜಿಲ್ಲಾ ವಲಯ ಯೋಜನೆಗಳು | | | | |
| | ಜಿಲ್ಲಾ ಪಂಚಾಯತ್ ಯೋಜನೆಗಳು | | | | |
| 10 | ಆಡಳಿತ | 2851-00-107-0-26 | 8429.570 | 7704.473 | 8060.010 |
| 11 | ರೇಷ್ಮೆ ಬೆಳೆಗಾರರಿಗೆ ಸಹಾಯ | | | | |
| | ಧನ ಸಹಾಯ/ಪರಿಹಾರ | 2851-00-104-0-30(100) | 1314.580 | 1284.452 | 1314.580 |
| | ವಿಶೇಷ ಘಟಕ ಉಪ ಯೋಜನೆ | 2851-00-104-0-30(422) | 324.130 | 322.965 | 324.130 |
| | ಗಿರಿಜನ ಉಪ ಯೋಜನೆ | 2851-00-104-0-30(423) | 173.350 | 169.521 | 173.350 |
| | ಒಟ್ಟು | | 1812.060 | 1776.938 | 1812.060 |
| | ಜಿಲ್ಲಾ ಪಂಚಾಯತ್ ಯೋಜನೆಗಳ ಒಟ್ಟು | | 10241.630 | 9481.411 | 9872.070 |
| | ತಾಲ್ಲೂಕು ಪಂಚಾಯತ್ ಯೋಜನೆಗಳು | | | | |
| 12 | ಉತ್ಪಾದನೆ/ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ | | | | |
| | ಧನ ಸಹಾಯ/ಪರಿಹಾರ | 2851-00-104-0-61(100) | 142.500 | 112.363 | 142.500 |
| | ಜಿಲ್ಲಾ ವಲಯ ಯೋಜನೆಗಳ ಒಟ್ಟು | | 10384.130 | 9593.774 | 10014.570 |
| | ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ಯೋಜನೆಗಳ ಒಟ್ಟು (I + II) | | 41131.370 | 36257.585 | 39908.180 |

## 2024–25ನೇ ಸಾಲಿನ ಅನುದಾನದ ವಿವರಗಳು

| ಕ್ರ ಸಂ. | ಲೆಕ್ಕಶೀರ್ಷಿಕೆ ವಿವರಗಳು<br>ವೇತನ ಮತ್ತು ವೇತನೇತರ ವೆಚ್ಚಗಳು<br>2851–00–107–1–01 | ರೂ (ಲಕ್ಷಗಳಲ್ಲಿ) |
|---|---|---|
| I | **2851–00–107–1–01** | |
| 1 | 002 ಅಧಿಕಾರಿಗಳ ವೇತನ | 1827.57 |
| 2 | 003 ಸಿಬ್ಬಂದಿ ವೇತನ | 4078.17 |
| 3 | 004 ತಾತ್ಕಾಲಿಕ ಪರಿಹಾರ | 726.00 |
| 4 | 011 ತುಟ್ಟಿ ಭತ್ಯೆ | 2144.00 |
| 5 | 014 ಇತರೆ ಭತ್ಯೆ | 690.16 |
| 6 | 020 ವೈದ್ಯಕೀಯ ಭತ್ಯೆ | 29.52 |
| 7 | 021 ವೈದ್ಯಕೀಯ ವೆಚ್ಚದ ಮರುಪಾವತಿ | 64.00 |
| | ಒಟ್ಟು | **9559.42** |
| 1 | 033 ದಿನಗೂಲಿ | 370.94 |
| 2 | 034 ಗುತ್ತಿಗೆ/ಹೊರಗುತ್ತಿಗೆ | 22.53 |
| 3 | 041 ಪ್ರಯಾಣ ವೆಚ್ಚಗಳು | 90.00 |
| 4 | 051 ಸಾಮಾನ್ಯ ವೆಚ್ಚಗಳು | 390.00 |
| 5 | 052 ದೂರವಾಣಿ ವೆಚ್ಚಗಳು | 13.00 |
| 6 | 053 ಕಛೇರಿಯ ಪಿಠೋಪಕರಣಗಳು ಮತ್ತು ಜೋಡಣೆಗಳ ಖರೀದಿ | 10.00 |
| 7 | 071 ಕಟ್ಟಡ ವೆಚ್ಚಗಳು | 166.00 |
| 8 | 101 ಸಹಾಯಾನುದಾನ – ವೇತನಗಳು | 568.23 |
| 9 | 103 ಸಹಾಯಾನುದಾನ – ಸಾಮಾನ್ಯ | 23.00 |
| 10 | 115 ಸಹಾಯಧಾನ ಗುತ್ತಿಗೆ/ಹೊರಗುತ್ತಿಗೆ | 658.94 |
| 11 | 118 ಸಹಾಯಾನುದಾನ–ವಿಶ್ರಾಂತಿ ವೇತನಗಳು | 271.24 |
| 12 | 195 ಸಾರಿಗೆ ವೆಚ್ಚ | 113.63 |
| 13 | 221 ಸಾಮಗ್ರಿ ಮತ್ತು ಸರಬರಾಜುಗಳು | 0.00 |
| 14 | 251 ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು | 137.00 |
| | ಒಟ್ಟು | 2834.51 |
| | ವೇತನ+ವೇತನೇತರ ಒಟ್ಟು | **12393.93** |

# 4(1)(ಬಿ) (xii) 2024-25ನೇ ಸಾಲಿನಲ್ಲಿ ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಲೆಕ್ಕ ಶೀರ್ಷಿಕೆ 2851-00-107-1-51(ಸಹಾಯಧನ-106)(ಸಾಮಾನ್ಯ) ಯೋಜನೆಯಡಿ ಸಹಾಯಧನ ಮಂಜೂರು ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಗಳು

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

ಸಂ.ಯೋಜನೆ/ಪಿಎಸ್1/ಮಾರ್ಗಸೂಚಿ/32/2024-25 ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ,
ಬೆಂಗಳೂರು, ದಿನಾಂಕ:31.05.2024.

ಸುತ್ತೋಲೆ

ವಿಷಯ: 2024-25ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸಾಮಾನ್ಯ ವರ್ಗಗಳಡಿ ಅನುಷ್ಠಾನಗೊಳಿಸುವ ಫಲಾನುಭವಿಯಾಧಾರಿತ ಕಾರ್ಯಕ್ರಮಗಳ ಅನುಷ್ಠಾನದ ಮಾರ್ಗಸೂಚಿ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ರೇಷ್ಮೆ/112/ರೇಕೃವಿ/2024, ಬೆಂಗಳೂರು, ದಿನಾಂಕ:06.04.2024.

*****

2024-25ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಯೋಜನೆಗಳ ಲೆಕ್ಕ ಶೀರ್ಷಿಕೆಗಳಿಗೆ ಸರ್ಕಾರವು ಅನುದಾನವನ್ನು ಒದಗಿಸಿದ್ದು, ಮುಂದುವರೆದ ಯೋಜನೆಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ರೇಷ್ಮೆ ಅಭಿವೃದ್ಧಿ ಯೋಜನೆ - ಲೆಕ್ಕ ಶೀರ್ಷಿಕೆ - 2851-00-107-1-33(1ಎ) ಅಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಹಾಗೂ ಚಲ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ - ಲೆಕ್ಕ ಶೀರ್ಷಿಕೆ - 2851-00-107-1-11(1ಎ) ಸಾಮಾನ್ಯ ಅಡಿ ಅನುಷ್ಠಾನಗೊಳಿಸುವ ಫಲಾನುಭವಿಯಾಧಾರಿತ ಕಾರ್ಯಕ್ರಮಗಳ ಮಾರ್ಗಸೂಚಿಯನ್ನು ತಯಾರಿಸಿದ್ದು, ಪತ್ರದೊಂದಿಗೆ ಅಡಕಗೊಳಿಸಿ ಕಳುಹಿಸುತ್ತಾ, ಸದರಿ ಮಾರ್ಗಸೂಚಿಯನ್ವಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸೂಚಿಸಿದೆ.

2024-25ನೇ ಸಾಲಿನಲ್ಲಿ ವಿವಿಧ ಫಲಾನುಭವಿಯಾಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ/ಪ್ರೋತ್ಸಾಹಧನ ನೀಡಲು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.

(1) ರೇಷ್ಮೆ ಭಾಗೀದಾರರು ರೇಷ್ಮೆ ಇಲಾಖೆಯಲ್ಲಿ ನೀಡಲಾಗುತ್ತಿರುವ ಸಹಾಯಧನ/ ಪ್ರೋತ್ಸಾಹಧನಗಳ ಸೌಲಭ್ಯವನ್ನು ಪಡೆಯಲು ಕಡ್ಡಾಯವಾಗಿ FRUITS Login

ನಲ್ಲಿ FID Create ಮಾಡಿ ಅರ್ಜಿ ನಮೂನೆಯಲ್ಲಿ FID ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವಂತೆ ಸೂಚಿಸಿದೆ.

ರೇಷ್ಮೆ ನಿರ್ದೇಶನಾಲಯದಿಂದ ವಿವಿಧ ಯೋಜನೆಗಳಡಿ ಅನುಷ್ಠಾನಗೊಳಿಸುವ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಡಿ ಜಿಲ್ಲಾವಾರು ನಿಗಧಿಪಡಿಸುವ ಭೌತಿಕ ಹಾಗೂ ಆರ್ಥಿಕ ಗುರಿಯನ್ನು ಸಾಧಿಸಲು ಕ್ರಮವಹಿಸುವುದು. 2024-25ನೇ ಸಾಲಿನಲ್ಲಿ ಒದಗಿಸುವ ಅನುದಾನಕ್ಕನುಗುಣವಾಗಿ ಮಾಹೆವಾರು ಭರಿಸುವ ವೆಚ್ಚದ ಮಾಹಿತಿಯನ್ನು ಎನ್‌ಡಿಎಸ್‌ಎಸ್‌ನಲ್ಲಿ ತಪ್ಪದೇ ದಾಖಲಿಸುವುದು ಹಾಗೂ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ತಯಾರಿಸಿ ಯೋಜನಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

19/02/24

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ಇವರಿಗೆ,
ಎಲ್ಲಾ ರೇಷ್ಮೆ ಜಂಟಿ ನಿರ್ದೇಶಕರು
ಎಲ್ಲಾ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಕುಣಿಗಲ್/ಮಾಗಡಿ
ರೇಷ್ಮೆ ಉಪನಿರ್ದೇಶಕರು, ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ವಿಜಯಪುರ/ರಾಮನಗರ/ಕನಕಪುರ/ಕೊಳ್ಳೇಗಾಲ/ಕೋಲಾರ/ಶಿಡ್ಲಘಟ್ಟ
ಎಲ್ಲಾ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು
ಎಲ್ಲಾ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆಗಳು
ಎಲ್ಲಾ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ/ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್)

ಪ್ರತಿಯನ್ನು, ರೇಷ್ಮೆ ಜಂಟಿ ನಿರ್ದೇಶಕರು, ಎಸ್‌ಪಿಎಸ್‌ಎಫ್ ವಿಭಾಗ/ಟಿಎಸ್‌ಟಿಐ ವಿಭಾಗ/ರೇಷ್ಮೆ ಗೂಡು ಮಾರುಕಟ್ಟೆ ವಿಭಾಗ ಹಾಗೂ ಗೂಡಿನ ನಂತರದ ಚಟುವಟಿಕೆ ವಿಭಾಗ, ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು, ಮುಖ್ಯ ಅರ್ಥಶಾಸ್ತ್ರಜ್ಞರು, ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು, ಸಹಕಾರ ಸಂಘಗಳ ಜಂಟಿ ನಿಬಂಧಕರು(ರೇಷ್ಮೆ), ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಕಾರ್ಯಕ್ರಮ : 1

## ಮೈಸೂರು ಬಿತ್ತನೆ ವಲಯದಲ್ಲಿ ಬಿತ್ತನೆಗೆ ಯೋಗ್ಯವಾಗಿದ್ದು, ಬೇಡಿಕೆ ಇಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟವಾಗುವ ಶುದ್ಧ ಮೈಸೂರು ತಳಿ ಬಿತ್ತನೆ ಗೂಡಿಗೆ ಬೋನಸ್ ಪ್ರತಿ ಕೆ.ಜಿ.ಗೆ ರೂ.225/- ನೀಡುವುದು.

ಮೈಸೂರು ಬಿತ್ತನೆ ಪ್ರದೇಶದಲ್ಲಿ ಉತ್ಪಾದನೆಯಾಗುವ ಶುದ್ಧ ಮೈಸೂರು ತಳಿ ಬಿತ್ತನೆ ಗೂಡು ಬಿತ್ತನೆಗೆ ಯೋಗ್ಯವಾಗಿದ್ದು, ಬೇಡಿಕೆ ಇಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದ ಪ್ರತಿ ಕೆ.ಜಿ. ಗೂಡಿಗೆ ರೂ.225/- ಬೋನಸ್ ನೀಡುವುದು. ಬೋನಸ್ ಮಂಜೂರಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸುವುದು

1. ಕರ್ನಾಟಕ ರಾಜ್ಯದ ಬಿತ್ತನೆ ರೇಷ್ಮೆ ಬೆಳೆಗಾರರು ಕೇಂದ್ರ ರೇಷ್ಮೆ ಮಂಡಳಿಯಿಂದ ನೋಂದಾಯಿತರಾಗಿರಬೇಕು.
2. ಗೂಡಿನ ಇಳುವರಿ 100 ಮೊಟ್ಟೆಗಳಿಗೆ ಕನಿಷ್ಠ 32 ಕೆ.ಜಿ ಇರಬೇಕು.
3. ಪ್ರತಿ ಕೆ.ಜಿ.ಗೆ ತೂಗುವ ಗೂಡುಗಳ ಸಂಖ್ಯೆ 1000 ಮೀರಬಾರದು.
4. ಮೈಸೂರು ಬಿತ್ತನೆ ಗೂಡಿನ ಮಾರುಕಟ್ಟೆಗಳಲ್ಲಿ ಬಿತ್ತನೆ ಗೂಡು ವಿಲೇವಾರಿಯಾಗಲು ತಾಂತ್ರಿಕ ಸೇವಾ ಕೇಂದ್ರದ ಸಿಬ್ಬಂದಿ ನೀಡಿರುವ ಅರ್ಹತಾ ದೃಢೀಕರಣ ಪತ್ರ ಹಾಗೂ ರೇಷ್ಮೆ ಬೆಳೆಗಾರರ ಪಾಸ್ ಪುಸ್ತಕದಲ್ಲಿನ ಬೆಳೆ ವಿವರಗಳನ್ನು ರೇಷ್ಮೆ ಸಹಾಯಕ ನಿರ್ದೇಶಕರು, ರೇಷ್ಮೆ ಗೂಡು ಮಾರುಕಟ್ಟೆ ರವರು ಪರಿಶೀಲಿಸುವುದು ಹಾಗೂ ಮಾರಾಟದ ವಿವರಗಳನ್ನು ಪಾಸ್ ಪುಸ್ತಕದಲ್ಲಿ ದಾಖಲಿಸುವುದು.
5. ನೂಲು ಬಿಚ್ಚಾಣಿಕೆಗೆ ವಹಿವಾಟಾಗುವ ರೇಷ್ಮೆ ಗೂಡನ್ನು ಕೂಡಲೇ ಉಬ್ಬೆ ಕೊಡಿಸಲು (Cocoon stifling) ಕಡ್ಡಾಯವಾಗಿ ಕ್ರಮವಹಿಸುವುದು.
6. ಮಾರುಕಟ್ಟೆ ಅಧಿಕಾರಿಗಳು ಬೋನಸ್ ನೀಡಿಕೆಗೆ ಅರ್ಹವಿರುವ ಬಿತ್ತನೆ ಗೂಡಿನ ಪ್ರತಿ ದಿನದ ವಿವರಗಳನ್ನು ಕ್ರೋಢೀಕರಿಸುವುದು.
7. ಬೋನಸ್ ಪಾವತಿಗೆ ಅನುದಾನವನ್ನು ರೇಷ್ಮೆ ಉಪನಿರ್ದೇಶಕರು, ಕುಣಿಗಲ್/ ಮಾಗಡಿ ವಿಭಾಗ ಇವರಿಗೆ ರೇಷ್ಮೆ ನಿರ್ದೇಶನಾಲಯದಿಂದ ಬಿಡುಗಡೆಗೊಳಿಸಲಾಗುವುದು. ಮೈಸೂರು ಬಿತ್ತನೆ ವಲಯದ ಮಾರುಕಟ್ಟೆಗಳ ಬೇಡಿಕೆ ಮೇರೆಗೆ ರೇಷ್ಮೆ ಉಪನಿರ್ದೇಶಕರು, ಕುಣಿಗಲ್/ಮಾಗಡಿ ವಿಭಾಗದವರು ರೇಷ್ಮೆ ಗೂಡಿನ ಮಾರುಕಟ್ಟೆಗಳ ರೇಷ್ಮೆ ಸಹಾಯಕ ನಿರ್ದೇಶಕರುಗಳಿಗೆ ಮರುಹಂಚಿಕೆ ಮಾಡುವುದು.
8. ಸಂಬಂಧಿಸಿದ ಅಧಿಕಾರಿಗಳು ಇಲಾಖೆಯಿಂದ ನೀಡಿರುವ ವಿತ್ತೀಯ ಪ್ರತ್ಯಾಧಿಕಾರದ ಪ್ರಕಾರ ಮಂಜೂರಾತಿ ಪಡೆದು ಪ್ರೋತ್ಸಾಹಧನ ಪಾವತಿಗೆ ಕ್ರಮವಹಿಸುವುದು.
9. ಮೈಸೂರು ಬಿತ್ತನೆ ವಲಯದ ಮಾರುಕಟ್ಟೆ ಅಧಿಕಾರಿಗಳು ಬೋನಸ್ ಪಾವತಿಗೆ ಬಿಲ್ಲನ್ನು ಸಿದ್ಧಪಡಿಸಿ ರೇಷ್ಮೆ ಉಪನಿರ್ದೇಶಕರವರಿಂದ ಮೇಲು ಸಹಿ ಪಡೆದು ಖಜಾನೆಗೆ ಸಲ್ಲಿಸಿ ಖಜಾನೆ-2/ಡಿಬಿಟಿ ಮುಖಾಂತರ ರೇಷ್ಮೆ ಬೆಳೆಗಾರರ ಬ್ಯಾಂಕ್ ಖಾತೆಗೆ ನೇರವಾಗಿ ಬೋನಸ್ ಹಣ ಪಾವತಿಯಾಗುವ ರೀತಿಯಲ್ಲಿ ಕ್ರಮವಹಿಸುವುದು.
10. ಮಾರುಕಟ್ಟೆ ಅಧಿಕಾರಿಗಳು ಪ್ರತಿ ಮಾಹೆ ಬೋನಸ್ ಪಾವತಿಯಾದ ರೇಷ್ಮೆ ಬೆಳೆಗಾರರ ವಿವರಗಳನ್ನು ಮಾಸಿಕ ವರದಿಯೊಂದಿಗೆ ರೇಷ್ಮೆ ಜಂಟಿ ನಿರ್ದೇಶಕರು, ಬಿಳಿದೇವಾಲಯ ಇವರಿಗೆ ಸಲ್ಲಿಸುವುದು.
11. ಪ್ರಸ್ತುತ ಮಾರುಕಟ್ಟೆ ಅಧಿಕಾರಿಗಳು ನಿರ್ವಹಿಸಲಾಗುತ್ತಿರುವ ಎಲ್ಲಾ ದಾಖಲಾತಿಗಳನ್ನು ಮುಂದುವರೆಸುವುದು.
12. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

## ಕಾರ್ಯಕ್ರಮ : 2

### ದ್ವಿತಳಿ(ಬೈವೋಲ್ಟೈನ್) ಬಿತ್ತನೆ ವಲಯದಲ್ಲಿ ಬಿತ್ತನೆಗೆ ಯೋಗ್ಯವಾಗಿದ್ದು, ಬೇಡಿಕೆ ಇಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದಲ್ಲಿ ಅಂತಹ ಬಿತ್ತನೆ ಗೂಡಿಗೆ ಪ್ರತಿ ಕೆ.ಜಿ.ಗೆ ರೂ.225/-ಗಳ ಬೋನಸ್ ಪಾವತಿಸುವುದು.

ದ್ವಿತಳಿ ಬಿತ್ತನೆ ಗೂಡು ಬಿತ್ತನೆಗೆ ಯೋಗ್ಯವಾಗಿದ್ದು, ಬೇಡಿಕೆ ಇಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದ ಪ್ರತಿ ಕೆ.ಜಿ. ಗೂಡಿಗೆ ರೂ.225/- ಬೋನಸ್ ನೀಡುವುದು. ಬೋನಸ್ ನೀಡಿಕೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಪಾಲಿಸುವುದು.

1. ಕರ್ನಾಟಕ ರಾಜ್ಯದ ಬಿತ್ತನೆ ರೇಷ್ಮೆ ಬೆಳೆಗಾರರು ಕೇಂದ್ರ ರೇಷ್ಮೆ ಮಂಡಳಿಯಿಂದ ನೋಂದಾಯಿತರಾಗಿರಬೇಕು.
2. ಗೂಡಿನ ಇಳುವರಿ 100 ಮೊಟ್ಟೆಗಳಿಗೆ ಕನಿಷ್ಠ 45 ಕೆ.ಜಿ ಇರಬೇಕು.
3. ಪ್ರತಿ ಕೆ.ಜಿ.ಗೆ ತೂಗುವ ಗೂಡುಗಳ ಸಂಖ್ಯೆ 700 ಮೀರಬಾರದು.
4. ದ್ವಿತಳಿ ಬಿತ್ತನೆ ಗೂಡು ಮಾರುಕಟ್ಟೆಯಲ್ಲಿ ಬಿತ್ತನೆ ಗೂಡು ವಿಲೇವಾರಿಯಾಗಲು ತಾಂತ್ರಿಕ ಸೇವಾ ಕೇಂದ್ರದ ಸಿಬ್ಬಂದಿ ನೀಡಿರುವ ಅರ್ಹತಾ ದೃಢೀಕರಣ ಪತ್ರ ಹಾಗೂ ಬೆಳೆಗಾರರ ಪಾಸ್ ಪುಸ್ತಕದಲ್ಲಿನ ಬೆಳೆ ವಿವರಗಳನ್ನು ರೇಷ್ಮೆ ಸಹಾಯಕ ನಿರ್ದೇಶಕರು, ರೇಷ್ಮೆ ಗೂಡು ಮಾರುಕಟ್ಟೆ ಇವರು ಪರಿಶೀಲಿಸುವುದು ಹಾಗೂ ಮಾರಾಟದ ವಿವರಗಳನ್ನು ಪಾಸ್ ಪುಸ್ತಕದಲ್ಲಿ ದಾಖಲಿಸುವುದು.
5. ನೂಲು ಬಿಚ್ಚಾಣಿಕೆಗೆ ವಹಿವಾಟಾಗುವ ರೇಷ್ಮೆ ಗೂಡನ್ನು ಕೂಡಲೇ ಉಬ್ಬೆ ಕೊಡಿಸಲು (Cocoon stifling) ಕಡ್ಡಾಯವಾಗಿ ಕ್ರಮವಹಿಸುವುದು.
6. ಮಾರುಕಟ್ಟೆ ಅಧಿಕಾರಿಗಳು ಬೋನಸ್ ನೀಡಿಕೆಗೆ ಅರ್ಹವಿರುವ ಬಿತ್ತನೆ ಗೂಡಿನ ಪ್ರತಿ ದಿನದ ವಿವರಗಳನ್ನು ಕ್ರೋಢೀಕರಿಸುವುದು.
7. ಬೋನಸ್ ಪಾವತಿಗೆ ಅನುದಾನವನ್ನು ಸಂಬಂದಿಸಿದ ರೇಷ್ಮೆ ಉಪನಿರ್ದೇಶಕರವರಿಗೆ ರೇಷ್ಮೆ ನಿರ್ದೇಶನಾಲಯದಿಂದ ಬಿಡುಗಡೆಗೊಳಿಸಲಾಗುವುದು. ದ್ವಿತಳಿ ಬಿತ್ತನೆ ವಲಯದ ಮಾರುಕಟ್ಟೆಗಳ ಬೇಡಿಕೆ ಮೇರೆಗೆ ಸಂಬಂದಿಸಿದ ರೇಷ್ಮೆ ಉಪನಿರ್ದೇಶಕರವರು ರೇಷ್ಮೆ ಗೂಡಿನ ಮಾರುಕಟ್ಟೆಗಳ ರೇಷ್ಮೆ ಸಹಾಯಕ ನಿರ್ದೇಶಕರುಗಳಿಗೆ ಮರುಹಂಚಿಕೆ ಮಾಡುವುದು.
8. ಸಂಬಂಧಿಸಿದ ಅಧಿಕಾರಿಗಳು ಇಲಾಖೆಯಿಂದ ನೀಡಿರುವ ವಿತ್ತೀಯ ಪ್ರತ್ಯಾಧಿಕಾರದ ಪ್ರಕಾರ ಮಂಜೂರಾತಿ ಪಡೆದು ಪ್ರೋತ್ಸಾಹಧನ ಪಾವತಿಗೆ ಕ್ರಮವಹಿಸುವುದು.
9. ದ್ವಿತಳಿ ಬಿತ್ತನೆ ವಲಯದ ಮಾರುಕಟ್ಟೆ ಅಧಿಕಾರಿಗಳು ಬೋನಸ್ ಪಾವತಿಗೆ ಬಿಲ್ಲನ್ನು ಸಿದ್ಧಪಡಿಸಿ ರೇಷ್ಮೆ ಉಪನಿರ್ದೇಶಕರು ರವರಿಂದ ಮೇಲು ಸಹಿ ಪಡೆದು ಖಜಾನೆಗೆ ಸಲ್ಲಿಸಿ ಖಜಾನೆ-2/ಡಿಬಿಟಿ ಮುಖಾಂತರ ರೇಷ್ಮೆ ಬೆಳೆಗಾರರ ಬ್ಯಾಂಕ್ ಖಾತೆಗೆ ನೇರವಾಗಿ ಬೋನಸ್ ಹಣ ಪಾವತಿಯಾಗುವ ರೀತಿಯಲ್ಲಿ ಕ್ರಮವಹಿಸುವುದು.
10. ಮಾರುಕಟ್ಟೆ ಅಧಿಕಾರಿಗಳು ಪ್ರತಿ ಮಾಹೆ ಬೋನಸ್ ಪಾವತಿಯಾದ ರೇಷ್ಮೆ ಬೆಳೆಗಾರರ ವಿವರಗಳನ್ನು ಮಾಸಿಕ ವರದಿಯೊಂದಿಗೆ ರೇಷ್ಮೆ ಜಂಟಿ ನಿರ್ದೇಶಕರು, ಬಿಳಿದೇವಾಲಯ ಇವರಿಗೆ ಸಲ್ಲಿಸುವುದು.
11. ಪ್ರಸ್ತುತ ಮಾರುಕಟ್ಟೆ ಅಧಿಕಾರಿಗಳು ನಿರ್ವಹಿಸಲಾಗುತ್ತಿರುವ ಎಲ್ಲಾ ದಾಖಲಾತಿಗಳನ್ನು ಮುಂದುವರೆಸುವುದು.
12. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

## ಮೈಸೂರು/ದ್ವಿತಳಿ ಬಿತ್ತನೆ ವಲಯದಲ್ಲಿ ಬೋನಸ್ ಪಾವತಿಗೆ ಸಂಬಂಧಿಸಿದಂತೆ ಕ್ಷೇತ್ರಮಟ್ಟದ ಅಧಿಕಾರಿಗಳು ಅನುಸರಿಸಬೇಕಾದ ಕ್ರಮಗಳು.

### ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು:

1. ರೇಷ್ಮೆ ಪ್ರದರ್ಶಕರು/ವಲಯ/ಗ್ರಾಮ ಪಂಚಾಯಿತಿ ನೋಡಲ್ ಅಧಿಕಾರಿಗಳು, ರೇಷ್ಮೆ ಬೆಳೆಗಾರರ ಪಾಸ್ ಪುಸ್ತಕದಲ್ಲಿ ಮೊಟ್ಟೆ ಅಥವಾ ಚಾಕಿ ಸಂಖ್ಯೆ, ಮೂಲ, ಹುಳು ಹಣ್ಣಾಗುವ ದಿನಾಂಕ, ಬೆಳೆ ವೀಕ್ಷಣೆ ಮಾಡಿದಾಗ ಹುಳುವಿನ ಹಂತ ಮತ್ತು ಸಲಹೆ ನೀಡಿದ ವಿವರಗಳನ್ನು ಪಾಸ್ ಪುಸ್ತಕದಲ್ಲಿ ನಮೂದಿಸುವುದು.
2. ರೇಷ್ಮೆ ಬೆಳೆಗಾರರ ಬೆಳೆ ಹಣ್ಣಾದ ಮೇಲೆ ಗ್ರಾಮ ಪಂಚಾಯಿತಿ ನೋಡಲ್ ಅಧಿಕಾರಿಗಳು ಅರ್ಹತಾ ದೃಢೀಕರಣ ಪತ್ರದಲ್ಲಿ ಮೊಟ್ಟೆ ಅಥವಾ ಚಾಕಿ ಸಂಖ್ಯೆ, ಮೂಲ, ಬೆಳೆ ಹಣ್ಣಾದ ದಿನಾಂಕ ಮತ್ತು ಅಂದಾಜು ಪಡೆಯಬಹುದಾದ ಗೂಡಿನ ಪ್ರಮಾಣವನ್ನು ನಮೂದಿಸಬೇಕು.
3. ರೇಷ್ಮೆ ವಿಸ್ತರಣಾಧಿಕಾರಿಗಳು ಕನಿಷ್ಠ ಒಂದು ಬಾರಿಯಾದರೂ ಬೆಳೆಯನ್ನು ಪರಿಶೀಲಿಸುವುದು.

### ವಿಭಾಗೀಯ ಮಟ್ಟದ ಅಧಿಕಾರಿಗಳು:

1. ವಿಭಾಗೀಯ ರೇ ಸಹಾಯಕ ನಿರ್ದೇಶಕರು, ಕ್ಷೇತ್ರ ಮಟ್ಟದ ಪರಿವೀಕ್ಷಣಾ ಸಮಯದಲ್ಲಿ ರೇಷ್ಮೆ ಬೆಳೆಗಾರರು ಪಡೆದ ಮೊಟ್ಟೆ/ಚಾಕಿ ಹುಳುಗಳ ಮೂಲದ ಬಗ್ಗೆ ವಿವರಗಳನ್ನು ಪರಿಶೀಲಿಸಿ ಪಾಸ್ ಪುಸ್ತಕದಲ್ಲಿ ದೃಢೀಕರಿಸುವುದು.ಪರಿಶೀಲನಾ ಸಮಯದಲ್ಲಿ ವಲಯ/ತಾಂತ್ರಿಕ ಸೇವಾ ಕೇಂದ್ರದ ಸಿಬ್ಬಂದಿಗಳು ದಾಖಲಿಸಿದ ಅಂಶಗಳನ್ನು ದೃಢೀಕರಿಸುವುದು ಹಾಗೂ ನ್ಯೂನತೆಗಳು ಕಂಡುಬಂದಲ್ಲಿ ಸೂಕ್ತ ಸೂಚನೆಯನ್ನು ನೀಡುವುದು.

### ಜಿಲ್ಲಾ ಮಟ್ಟದ ಅಧಿಕಾರಿಗಳು:

1. ರೇಷ್ಮೆ ಉಪನಿರ್ದೇಶಕರು, ಕುಣಿಗಲ್/ಮಾಗಡಿ, ಸಂಬಂದಿಸಿದ ಜಿಲ್ಲಾ ಪಂಚಾಯತ್‌ರವರು ಮೈಸೂರು/ದ್ವಿತಳಿ ಗೂಡಿಗೆ ಪಾವತಿಸಲಾದ ಬೋನಸ್ ವಿವರವನ್ನು ಪರಿಶೀಲನೆ ನಡೆಸುವುದು.
2. ಪಾವತಿಸಿದ ಬೋನಸ್ ವಿವರಗಳನ್ನು ಪರಿಶೀಲಿಸಿ ನಮೂನೆಯಲ್ಲಿ ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರವರಿಗೆ ಹಾಗೂ ರೇಷ್ಮೆ ನಿರ್ದೇಶನಾಲಯದ ರೇಷ್ಮೆ ಕೃಷಿ ಕ್ಷೇತ್ರ ಮತ್ತು ಬಿತ್ತನೆ ಕೋಠಿಗಳ ವಿಭಾಗಕ್ಕೆ ಸಲ್ಲಿಸುವುದು.
3. ಬಿಡುಗಡೆಯಾದ ಅನುದಾನಕ್ಕೆ ಸಂಬಂಧಿಸಿದಂತೆ ಉಪಯುಕ್ತತಾ ದೃಢೀಕರಣ ಪತ್ರ ಹಾಗೂ ಕ್ರೋಢೀಕೃತ ಫಲಾನುಭವಿಗಳ ಪಟ್ಟಿಯನ್ನು ರೇಷ್ಮೆ ನಿರ್ದೇಶನಾಲಯದ ರೇಷ್ಮೆ ಕೃಷಿ ಕ್ಷೇತ್ರ ಮತ್ತು ಬಿತ್ತನೆ ಕೋಠಿಗಳ ವಿಭಾಗಕ್ಕೆ ಪ್ರತಿ ಮಾಹೆ ಸಲ್ಲಿಸುವುದು.

### ಮಾರುಕಟ್ಟೆ ಅಧಿಕಾರಿಗಳು:

1. ವಹಿವಾಟಾದ ಗೂಡಿನ ಪ್ರಮಾಣ, ಮೌಲ್ಯ ವಿವರಗಳನ್ನು ಮಾರುಕಟ್ಟೆ ಅಧಿಕಾರಿಗಳು ರೇಷ್ಮೆ ಬೆಳೆಗಾರರ ಪಾಸ್ ಪುಸ್ತಕದಲ್ಲಿ ಕಡ್ಡಾಯವಾಗಿ ದಾಖಲಿಸುವುದು.
2. ಬಿತ್ತನೆ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೇಷ್ಮೆ ಬೆಳೆಗಾರರ ಗೂಡಿನ ವಹಿವಾಟಿನ ಹರಾಜು ಚೀಟಿಯೊಂದಿಗೆ ಮುಂಗಡ ಹಣ ಸಂದಾಯದ ರಶೀದಿಯನ್ನು ಪಡೆಯುವುದು.
3. ಬೋನಸ್ ಮಂಜೂರಾತಿಗಾಗಿ ಆರ್ಥಿಕ ಪ್ರತ್ಯಾಯೋಜನೆಯಂತೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.
4. ರೇಷ್ಮೆ ಗೂಡು ಮಾರುಕಟ್ಟೆ ಅಧಿಕಾರಿಗಳು ಮಂಜೂರಾತಿ ಪಡೆದ ನಂತರ, ಬಿಲ್ಲನ್ನು ಸಿದ್ಧಪಡಿಸಿ, ರೇಷ್ಮೆ ಉಪನಿರ್ದೇಶಕರವರಿಂದ ಮೇಲು ಸಹಿ ಪಡೆಯುವುದು ಹಾಗೂ ಬೋನಸ್ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ **ಖಜಾನೆ-2/ಡಿಬಿಟಿ** ಮುಖಾಂತರ ಜಮಾ ಮಾಡಲು ಕ್ರಮವಹಿಸುವುದು.
5. ಬೋನಸ್ ಪಾವತಿಯ ಕುರಿತಂತೆ ಫಲಾನುಭವಿಗಳ ವಿಳಾಸ, ಬ್ಯಾಂಕ್ ಖಾತೆ ಸಂಖ್ಯೆ, ಮಂಜೂರಾದ ಬೋನಸ್ ಮೊತ್ತ, ನಗದೀಕರಿಸಿದ UTR ಸಂಖ್ಯೆ ಮತ್ತು ದಿನಾಂಕದ ವಿವರಗಳನ್ನು ಒಳಗೊಂಡಂತೆ ಪ್ರತ್ಯೇಕ ವಹಿಯನ್ನು ನಿರ್ವಹಿಸುವುದು.
6. ರೀಲರ್‌ವಾರು ರೇಷ್ಮೆ ಗೂಡು ಖರೀದಿಯ ವಿವರಗಳನ್ನು ಸಂಬಂಧಿಸಿದ ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರಗಳಿಗೆ ಹಾಗೂ ಗೂಡಿನ ನಂತರದ ಚಟುವಟಿಕೆಗಳು ಸಹಾಯಕ ನಿರ್ದೇಶಕರುಗಳಿಗೆ ಒದಗಿಸುವುದು.

**ಕಾರ್ಯಕ್ರಮ : 3**

## ಉತ್ಪಾದಕತೆ ಮತ್ತು ಗುಣಮಟ್ಟ ಆಧಾರಿತ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮ.

ರಾಜ್ಯದಲ್ಲಿ ಉತ್ಪಾದನೆಯಾಗಿ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳ ಮೂಲಕ ವಹಿವಾಟಾಗುವ ರೇಷ್ಮೆ ಬಿತ್ತನೆ ಗೂಡುಗಳಿಗೆ ಉತ್ಪಾದಕತೆ ಮತ್ತು ಗುಣಮಟ್ಟ ಆಧರಿಸಿ ಪ್ರತಿ ಕೆ.ಜಿ.ಗೆ ರೂ.120/- ಪ್ರೋತ್ಸಾಹಧನ ನೀಡುವುದು.

ಈ ಕಾರ್ಯಕ್ರಮದಡಿ ಸೌಲಭ್ಯ ಪಡೆಯಲು ಕೆಳಕಂಡ ಅರ್ಹತೆ ಹೊಂದಿರಬೇಕಾಗುತ್ತದೆ.

1. ಕರ್ನಾಟಕ ರಾಜ್ಯದ ಬಿತ್ತನೆ ರೇಷ್ಮೆ ಬೆಳೆಗಾರರು ಕೇಂದ್ರ ರೇಷ್ಮೆ ಮಂಡಳಿಯಿಂದ ನೋಂದಾಯಿತರಾಗಿರಬೇಕು.
2. ಗೂಡಿನ ಇಳುವರಿ ಮಿತಿ ಪ್ರತಿ **100 ರೋಗರಹಿತ** ಮೊಟ್ಟೆಗಳಿಗೆ **:**

   ಅ) **ಶುದ್ಧ ಮೈಸೂರು ತಳಿ :** 35 ಕೆ.ಜಿ.ಗಿಂತ ಕಡಿಮೆಯಿಲ್ಲದಂತೆ ಹಾಗೂ ಪ್ರತಿ ಕೆ.ಜಿ.ಗೆ ತೂಗುವ ಗೂಡುಗಳ ಸಂಖ್ಯೆ 900ಕ್ಕಿಂತ ಕಡಿಮೆ ಇರಬೇಕು.

   ಆ) **ಶುದ್ಧ ದ್ವಿತಳಿ :** 50 ಕೆ.ಜಿ.ಗಿಂತ ಹೆಚ್ಚಿನ ಇಳುವರಿ ಹಾಗೂ ಪ್ರತಿ ಕೆ.ಜಿ.ಗೆ ತೂಗುವ ಗೂಡುಗಳ ಸಂಖ್ಯೆ 700ಕ್ಕಿಂತ ಕಡಿಮೆ ಇರಬೇಕು.
3. ಬಿತ್ತನೆ ಗೂಡು ಬಿತ್ತನೆಗೆ ಯೋಗ್ಯವಾಗಿದ್ದು, ಬಿತ್ತನೆಗೆ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ವಹಿವಾಟಾದರೂ ಸಹ ಪ್ರೋತ್ಸಾಹಧನಕ್ಕೆ ಅರ್ಹವಾಗಿರುತ್ತದೆ.
4. ನೋಂದಾಯಿತ ಬಿತ್ತನೆ ಬೆಳೆಗಾರರು ರೋಗರಹಿತ ಮೊಟ್ಟೆಯನ್ನು ರಾಜ್ಯ ಸರ್ಕಾರ/ಕೇಂದ್ರ ಸರ್ಕಾರದ ಬಿತ್ತನೆ ಕೋಠಿಗಳಿಂದ ಮಾತ್ರ ಪಡೆದಿರಬೇಕು ಹಾಗೂ ಈ ಕುರಿತು ಪೂರಕವಾದ ರಶೀದಿ/ದಾಖಲೆಯನ್ನು ಹೊಂದಿರಬೇಕು.
5. ಬಿತ್ತನೆಗೆ ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ ನೀಡಿಕೆಗೆ ಸಂಬಂಧಿಸಿದಂತೆ ಪ್ರೋತ್ಸಾಹಧನವನ್ನು ರೇಷ್ಮೆ ಬಿತ್ತನೆ ಗೂಡು ಮಾರುಕಟ್ಟೆಗಳ ಅಧಿಕಾರಿಗಳ ಮುಖಾಂತರ ವಿತರಿಸುವುದು. ತಾಂತ್ರಿಕ ಸೇವಾ ಕೇಂದ್ರ ಸಿಬ್ಬಂದಿಗಳು ರೇಷ್ಮೆ ಬೆಳೆಗಾರರು ಉತ್ಪಾದಿಸಿದ ಮೈಸೂರು/ದ್ವಿತಳಿ ಬಿತ್ತನೆ ಗೂಡು ಮಾರುಕಟ್ಟೆಯಲ್ಲಿ ವಿಲೇವಾರಿಗೆ ಅನುವಾಗಲು ನೀಡಿರುವ ಅರ್ಹತಾ ದೃಢೀಕರಣ ಪತ್ರವನ್ನು ಪರಿಶೀಲಿಸುವುದು. ರೇಷ್ಮೆ ಬೆಳೆಗಾರರ ಪಾಸ್ ಪುಸ್ತಕದಲ್ಲಿ ಮಾರಾಟದ ವಿವರಗಳನ್ನು ರೇಷ್ಮೆ ಸಹಾಯಕ ನಿರ್ದೇಶಕರು, ರೇಷ್ಮೆ ಗೂಡು ಮಾರುಕಟ್ಟೆ ರವರು ದಾಖಲಿಸುವುದು. ಪ್ರೋತ್ಸಾಹಧನ ಮಾಹಿತಿಗೆ ಸಂಬಂಧಿಸಿದಂತೆ ಪ್ರಸ್ತುತ ಅನುಸರಿಸುತ್ತಿರುವ ವಿಧಾನವನ್ನು ಸರಳೀಕರಿಸಲಾಗಿದ್ದು, ಪರಿಷ್ಕೃತ ನಮೂನೆಯಲ್ಲಿ ರೇಷ್ಮೆ ಬೆಳೆಗಾರರು ಮಾಹಿತಿಯನ್ನು ಭರ್ತಿ ಮಾಡಿಸಿ ಈಗಾಗಲೇ ನಿಗಧಿ ಪಡಿಸಿರುವ ಷರತ್ತು ಮತ್ತು ಮಾರ್ಗಸೂಚಿಯನ್ನಯ ಕ್ರಮವಹಿಸುವುದು.
6. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

## ಇಲಾಖಾ ಅನುಷ್ಠಾನಾಧಿಕಾರಿಗಳು ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡಿಕೆಗೆ ಅನುಸರಿಸಬೇಕಾದ ವಿಧಿ ವಿಧಾನಗಳು ಕೆಳಕಂಡಂತಿವೆ:

### I. ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು:

1. ನೋಂದಾಯಿತ ಬಿತ್ತನೆ ರೇಷ್ಮೆ ಬೆಳೆಗಾರರಿಗೆ ತಪ್ಪದೆ ಪಾಸ್ ಪುಸ್ತಕವನ್ನು ವಿತರಿಸುವುದು. ಹಿಪ್ಪುನೇರಳೆ ತೋಟವನ್ನು ಪಾಲುದಾರಿಕೆಯಲ್ಲಿ ಪಡೆದು ಹುಳು ಸಾಕಾಣಿಕೆ ಮಾಡುತ್ತಿರುವವರನ್ನು ಪ್ರತಿನಿಧಿ ಎಂದು ಪರಿಗಣಿಸಿ ತೋಟದ ಮಾಲೀಕರ ಹೆಸರಿನಲ್ಲಿ ರೇಷ್ಮೆ ವಿಸ್ತರಣಾಧಿಕಾರಿಗಳು ದೃಢೀಕರಿಸಿ ಪಾಸ್ ಪುಸ್ತಕವನ್ನು ನೀಡಲು ಕ್ರಮವಹಿಸುವುದು.

2. ಕ್ಷೇತ್ರಮಟ್ಟದ ನೋಡಲ್ ಅಧಿಕಾರಿಗಳು/ಸಿಬ್ಬಂದಿ ಪಾಸ್ ಪುಸ್ತಕದಲ್ಲಿ ನೋಂದಾಯಿತ ಬಿತ್ತನೆ ಬೆಳೆಗಾರರ ಬೆಳೆಯನ್ನು ಪರಿಶೀಲಿಸಿ ಚಾಕಿ/ಮೊಟ್ಟೆಗಳ ಸಂಖ್ಯೆ, ಮೂಲ, ಬೆಳೆ ವೀಕ್ಷಣೆಯ ಹುಳುವಿನ ಹಂತ, ತಾಂತ್ರಿಕ ಸಲಹೆಗಳನ್ನು ಮತ್ತು ಹಣ್ಣಾಗುವ ದಿನಾಂಕದ ವಿವರಗಳನ್ನು ರೇಷ್ಮೆ ಪಾಸ್ ಪುಸ್ತಕದಲ್ಲಿ ನಮೂದಿಸುವುದು. ರೇಷ್ಮೆ ವಿಸ್ತರಣಾಧಿಕಾರಿಗಳು/ಸೀಡ್ ಆಫೀಸರ್ ಗಳು ಕನಿಷ್ಠ ಒಂದು ಬಾರಿಯಾದರೂ ಬೆಳೆಯನ್ನು ಪರಿಶೀಲಿಸಿ ನಮೂದಿಸಿರಬೇಕು.
**3.** ಪ್ರತಿಯೊಬ್ಬ ನೋಂದಾಯಿತ ಬಿತ್ತನೆ ಬೆಳೆಗಾರರ ಪ್ರೋತ್ಸಾಹಧನದ ಮೊತ್ತವನ್ನು ಸಂದಾಯ ಮಾಡಲು ಬ್ಯಾಂಕ್ ಖಾತೆಯನ್ನು ತೆರೆಯುವಂತೆ ಕ್ರಮವಹಿಸುವುದು.

## II.ವಿಭಾಗೀಯ ಮಟ್ಟದ ಅಧಿಕಾರಿಗಳು:

1. ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ಕ್ಷೇತ್ರಮಟ್ಟದ ಪರಿವೀಕ್ಷಣಾ ಸಮಯದಲ್ಲಿ ನೋಂದಾಯಿತ ಬಿತ್ತನೆ ಬೆಳೆಗಾರರು ಪಡೆದ ಮೊಟ್ಟೆ/ಚಾಕಿ ಹುಳುಗಳ ವಿತರಣೆಯ ವಿವರಗಳನ್ನು ಪರಿಶೀಲಿಸುವುದು ಹಾಗೂ ಪಾಸ್ ಪುಸ್ತಕದಲ್ಲಿ ದಾಖಲಿಸಿದ ವಿವರಗಳನ್ನು ಖಚಿತಪಡಿಸಿಕೊಂಡು ಕೆಲವು ಬೆಳೆಗಾರರನ್ನು ಭೇಟಿ ಮಾಡಿ ಬೆಳೆಯನ್ನು ಪರಿಶೀಲಿಸುವುದು.
2. ನೋಂದಾಯಿತ ಬಿತ್ತನೆ ಬೆಳೆಗಾರರು ಪಡೆದಂತಹ ರೋಗರಹಿತ ಮೊಟ್ಟೆ/ಚಾಕಿ ಹುಳುಗಳ ಮೂಲದ ಬಗ್ಗೆ ಖಚಿತಪಡಿಸಿಕೊಂಡು ದೃಢೀಕರಿಸುವುದು.
3. ಪರಿಶೀಲನಾ ಸಮಯದಲ್ಲಿ ನ್ಯೂನತೆಗಳು ಕಂಡುಬಂದಲ್ಲಿ ಸೂಕ್ತ ತಾಂತ್ರಿಕ ಸಲಹೆ/ಸೂಚನೆಗಳನ್ನು ನೀಡುವುದು.

## III.ಜಿಲ್ಲಾ ಮಟ್ಟದ ಅಧಿಕಾರಿಗಳು:

1. ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್/ಬಿತ್ತನೆ ವಲಯ ರವರು ಬೆಳೆಗಳನ್ನು ಪರಿಶೀಲಿಸುವುದು.
2. ವಿತ್ತೀಯ ಪ್ರತ್ಯಾಧಿಕಾರದ ರೀತ್ಯಾ ಮಂಜೂರಾತಿ ಮಾಡಿ ಕೂಡಲೇ ಹಿಂತಿರುಗಿಸುವುದು.
3. ಪಾವತಿಸಿದ ಪ್ರೋತ್ಸಾಹಧನದ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರುಗಳಿಗೆ ಹಾಗೂ ರೇಷ್ಮೆ ನಿರ್ದೇಶನಾಲಯದ ರೇಷ್ಮೆ ಬೀಜೋತ್ಪಾದನೆ ಮತ್ತು ಕೃಷಿ ಕ್ಷೇತ್ರಗಳ ವಿಭಾಗಕ್ಕೆ ಹಾಗೂ ಎಂಐಎಸ್(MIS) ವಿಭಾಗಕ್ಕೆ ಸಲ್ಲಿಸುವುದು.

## IV.ಮಾರುಕಟ್ಟೆ ಅಧಿಕಾರಿಗಳು:

1. ವಹಿವಾಟಾದ ಗೂಡಿನ ಪ್ರಮಾಣ, ಮೌಲ್ಯ ವಿವರಗಳನ್ನು ಮಾರುಕಟ್ಟೆ ಅಧಿಕಾರಿಗಳು ರೇಷ್ಮೆ ಬೆಳೆಗಾರರ ಪಾಸ್ ಪುಸ್ತಕದಲ್ಲಿ ಕಡ್ಡಾಯವಾಗಿ ದಾಖಲಿಸುವುದು.
2. ಬಿತ್ತನೆ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೇಷ್ಮೆ ಬೆಳೆಗಾರರ ಗೂಡಿನ ವಹಿವಾಟಿನ ಹರಾಜು ಚೀಟಿಯೊಂದಿಗೆ ಮುಂಗಡ ಹಣ ಸಂದಾಯದ ರಶೀದಿಯನ್ನು ಪಡೆಯುವುದು.
3. ಬಿತ್ತನೆ ಗೂಡು ಬಿತ್ತನೆಗೆ ಯೋಗ್ಯವಾಗಿದ್ದು, ಬಿತ್ತನೆಗೆ ಬೇಡಿಕೆ ಇಲ್ಲದೆ ನೂಲು ಬಿಚ್ಚಾಣಿಕೆಗೆ ವಹಿವಾಟಾದ ರೇಷ್ಮೆ ಗೂಡು ಪುನಃ ಮಾರುಕಟ್ಟೆಗೆ ಪ್ರವೇಶಿಸದಂತೆ ಗೂಡುಗಳನ್ನು ಕಡ್ಡಾಯವಾಗಿ ಹಬೆಗೆ ಒಳಪಡಿಸಲು ಕ್ರಮ ಕೈಗೊಳ್ಳುವುದು.
4. ಬೋನಸ್ ಮಂಜೂರಾತಿಗಾಗಿ ಆರ್ಥಿಕ ಪ್ರತ್ಯಾಯೋಜನೆಯಂತೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.
5. ರೇಷ್ಮೆ ಗೂಡು ಮಾರುಕಟ್ಟೆ ಅಧಿಕಾರಿಗಳು ಮಂಜೂರಾತಿ ಪಡೆದ ನಂತರ, ಬಿಲ್ಲನ್ನು ಸಿದ್ಧಪಡಿಸಿ, ರೇಷ್ಮೆ ಉಪನಿರ್ದೇಶಕರವರಿಂದ ಮೇಲು ಸಹಿ ಪಡೆಯುವುದು ಹಾಗೂ ಬೋನಸ್ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ **ಖಜಾನೆ-2/ಡಿಬಿಟಿ** ಮುಖಾಂತರ ಜಮಾ ಮಾಡಲು ಕ್ರಮವಹಿಸುವುದು.
6. ಒಮ್ಮೆ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ವಹಿವಾಟಾದ ಗೂಡು ಪುನಃ ಮಾರುಕಟ್ಟೆಗೆ ಮರು ಪ್ರವೇಶಿಸದಂತೆ ಎಚ್ಚರ ವಹಿಸಬೇಕು.

7. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ನೋಂದಾಯಿತ ಬಿತ್ತನೆ ಬೆಳೆಗಾರರು ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಗೂಡು ಮಾರಾಟ ಮಾಡಿದ ಹರಾಜು ಚೀಟಿ ಕಳೆದುಕೊಂಡಲ್ಲಿ ಅಥವಾ ಹಾಳು ಮಾಡಿಕೊಂಡಲ್ಲಿ ಅಂತಹವರಿಗೆ ಮಾರುಕಟ್ಟೆ ಅಧಿಕಾರಿಗಳು ಮಾರುಕಟ್ಟೆಯಲ್ಲಿ ಸಂರಕ್ಷಿಸಿದ ಮೂಲ ಹರಾಜು ಚೀಟಿಯ ನೆರಳಚ್ಚು ಪ್ರತಿಯನ್ನು ದೃಢೀಕರಿಸಿ ನೀಡುವುದು.

**V.ರೇಷ್ಮೆ ಜಂಟಿ ನಿರ್ದೇಶಕರು :**

1. ವಿತ್ತೀಯ ಪ್ರತ್ಯಾಧಿಕಾರದ ರೀತ್ಯಾ ಮಂಜೂರಾತಿ ಮಾಡಿ ಕೂಡಲೇ ಹಿಂತಿರುಗಿಸುವುದು.
2. ತಮ್ಮ ವ್ಯಾಪ್ತಿಯ ತಾಂತ್ರಿಕ ಸೇವಾ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರೋತ್ಸಾಹಧನ ಪಾವತಿಯ ಬಗ್ಗೆ ಪರಿಶೀಲಿಸುವುದು ಹಾಗೂ ಯಾವುದೇ ಲೋಪವೆಸಗಿರುವುದು ಕಂಡು ಬಂದಲ್ಲಿ ಅಂತಹ ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವುದು.

**ಕಾರ್ಯಕ್ರಮ : 4**

**ಬೈವೋಲ್ಟೈನ್ ರೇಷ್ಮೆ ಗೂಡುಗಳಿಗೆ ಪ್ರಸ್ತುತ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಕಿಲೋಗೆ 10 ರೂ.ನಿಂದ 30 ರೂ.ಗೆ ಹೆಚ್ಚಿಸಲು ಘೋಷಿಸಿದೆ.**

ರಾಜ್ಯದಲ್ಲಿ ಉತ್ಪಾದನೆಯಾಗಿ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳ ಮೂಲಕ ವಹಿವಾಟಾಗುವ ದ್ವಿತಳಿ ರೇಷ್ಮೆ ಗೂಡುಗಳಿಗೆ ಪ್ರತಿ 100 ರೋಗ ರಹಿತ ಮೊಟ್ಟೆಗಳಿಗೆ/ಚಾಕಿ ಹುಳುಗಳಿಗೆ 60 ಕೆ.ಜಿ. ಗಿಂತ ಹೆಚ್ಚಿನ ಇಳುವರಿ ಪಡೆದ ರೇಷ್ಮೆ ಬೆಳೆಗಾರರಿಗೆ **ಬೈವೋಲ್ಟೈನ್ ರೇಷ್ಮೆ ಗೂಡುಗಳಿಗೆ ಪ್ರಸ್ತುತ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಕಿಲೋಗೆ 10 ರೂ.ನಿಂದ 30 ರೂ.ಗೆ ಹೆಚ್ಚಿಸಲು ಹಾಗೂ ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-51(106)ರಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ. ರೇಷ್ಮೆ/129/ರೇಕೃವಿ/2024, ಬೆಂಗಳೂರು, ದಿನಾಂಕ:04.06.2024ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ. <u>ಸರ್ಕಾರದ ಆದೇಶದ ದಿನಾಂಕ : 04.06.2024ರಿಂದ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಮಾರಾಟವಾಗುವ ದ್ವಿತಳಿ ರೇಷ್ಮೆ ಗೂಡುಗಳಿಗೆ ಪ್ರತಿ ಕೆ.ಜಿಗೆ ರೂ.30/-ರಂತೆ ಪ್ರೋತ್ಸಾಹಧನ ನೀಡಲು ಅವಕಾಶವಿರುತ್ತದೆ. ಸರ್ಕಾರದ ಆದೇಶದ ಪ್ರತಿಯನ್ನು ಅಡಕವಿರಿಸಿದೆ.</u>**

ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ದ್ವಿತಳಿ ಗೂಡಿಗೆ ಪ್ರೋತ್ಸಾಹಧನವನ್ನು ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ವಹಿವಾಟಾದ ದ್ವಿತಳಿ ಸಂಕರಣ ಗೂಡಿಗೆ ಮಾತ್ರ ನೀಡುವುದು.
2. ಕರ್ನಾಟಕ ರಾಜ್ಯದ ರೇಷ್ಮೆ ಬೆಳೆಗಾರರು ಮಾತ್ರವೇ ಈ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.
3. ಗರಿಷ್ಠ ಇಳುವರಿ ಮಿತಿ ಪ್ರತಿ 100 ರೋಗ ರಹಿತ ಮೊಟ್ಟೆಗಳಿಗೆ ದ್ವಿತಳಿ ಸಂಕರಣ(ಡಬಲ್ ಹೈಬ್ರಿಡ್ ಸೇರಿ)(60,000 ಬಿಡಿ ಮೊಟ್ಟೆಗಳು)90 ಕೆ.ಜಿ.ಗಳು ಎಂದು ಪರಿಗಣಿಸುವುದು.
4. ರೇಷ್ಮೆ ಬೆಳೆಗಾರರು ರೋಗ ರಹಿತ ಮೊಟ್ಟೆಯನ್ನು/ಚಾಕಿ ಹುಳುಗಳನ್ನು ರಾಜ್ಯ ಸರ್ಕಾರದ ರೇಷ್ಮೆ ಬಿತ್ತನೆ ಕೋಠಿಗಳು/ಕೇಂದ್ರ ಸರ್ಕಾರದ ರೇಷ್ಮೆ ಬಿತ್ತನೆ ಕೋಠಿಗಳು/ನೋಂದಾಯಿತ ಖಾಸಗಿ ಮೊಟ್ಟೆ ತಯಾರಕರು ಹಾಗೂ ನೋಂದಾಯಿತ ಚಾಕಿ ಸಾಕಾಣಿಕಾ ಕೇಂದ್ರಗಳಿಂದ ಪಡೆದಿರಬೇಕು ಮತ್ತು ಇದರ ಕುರಿತು ಪೂರಕವಾದ ರಶೀದಿ ಹೊಂದಿರಬೇಕು.
5. ಕರಗಿದ ಮತ್ತು ಜಲ್ಲಿ ಗೂಡಿಗೆ ಪ್ರೋತ್ಸಾಹಧನ ನೀಡಲಾಗುವುದಿಲ್ಲ.
6. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

ಈ ಕಾರ್ಯಕ್ರಮದಡಿ ಇಲಾಖಾ ಅನುಷ್ಠಾನಾಧಿಕಾರಿಗಳು ಅನುಸರಿಸಬೇಕಾದ ಕ್ರಮಗಳು ಈ ಕೆಳಕಂಡಂತಿವೆ:

## I.ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು:

1. ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ರೇಷ್ಮೆ ಬೆಳೆಗಾರರಿಗೆ ಗುರುತಿನ ಚೀಟಿ ವಿತರಿಸುವ ಕ್ರಮ ಕೈಗೊಳ್ಳುವುದು.
2. ಸ್ವಂತ ಹಿಪ್ಪುನೇರಳೆ ತೋಟ ಹೊಂದಿರುವ/ಹಿಪ್ಪುನೇರಳೆ ತೋಟವನ್ನು ಪಾಲುದಾರಿಕೆ ಆಧಾರ/ಇತರೆಯವರ ಹಿಪ್ಪುನೇರಳೆ ತೋಟದಿಂದ ಸೊಪ್ಪನ್ನು ಖರೀದಿಸಿ ಹುಳು ಸಾಕಾಣಿಕೆ ಮಾಡುವ ರೇಷ್ಮೆ ಬೆಳೆಗಾರರು ಸದರಿ ಕಾರ್ಯಕ್ರಮದಡಿಯಲ್ಲಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಸೊಪ್ಪನ್ನು ಖರೀದಿಸಿ ಹುಳು ಸಾಕಾಣಿಕೆ ಮಾಡುವ ರೇಷ್ಮೆ ಬೆಳೆಗಾರರನ್ನು ಪ್ರತಿನಿಧಿ ಎಂದು ಪರಿಗಣಿಸಿ, ತೋಟದ ಮಾಲೀಕರ ಹೆಸರಿನಲ್ಲಿ ಪಾಸ್ ಪುಸ್ತಕ ನೀಡಬಹುದಾಗಿದೆ.
3. ರೇಷ್ಮೆ ಪ್ರದರ್ಶಕರು/ವಲಯ/ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು, ರೇಷ್ಮೆ ಬೆಳೆಗಾರರ ಪಾಸ್ ಪುಸ್ತಕದಲ್ಲಿ ಮೊಟ್ಟೆ/ಚಾಕಿ ಸಂಖ್ಯೆ, ಮೂಲ, ಹುಳು ಹಣ್ಣಾಗುವ ದಿನಾಂಕ, ಹುಳುವಿನ ಆರೋಗ್ಯ ಮತ್ತು ಪಡೆಯಬಹುದಾದ ಅಂದಾಜು ಗೂಡಿನ ಪರಿಮಾಣವನ್ನು ನಮೂದಿಸುವುದು. ರೇಷ್ಮೆ ವಿಸ್ತರಣಾಧಿಕಾರಿಗಳು ಕನಿಷ್ಠ ಒಂದು ಬಾರಿಯಾದರೂ ಬೆಳೆಯನ್ನು ಪರಿಶೀಲಿಸಿ ನಮೂದಿಸಬೇಕು.
4. ರೇಷ್ಮೆ ಬೆಳೆಗಾರರ ಪಾಸ್ ಪುಸ್ತಕದಲ್ಲಿ ದ್ವಿತಳಿ ರೇಷ್ಮೆ ಬೆಳೆ ಸಾಕಾಣಿಕೆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಧೃಡೀಕರಿಸಿ, ಧೃಡೀಕರಿಸಿದ ಪುಟ ಮತ್ತು ರೇಷ್ಮೆ ಬೆಳೆಗಾರರ ವಿವರವುಳ್ಳ ಪುಟಗಳ ಪ್ರತಿ, ಮೊಟ್ಟೆ/ಚಾಕಿ ಹುಳು ಖರೀದಿಸಿರುವ ರಶೀದಿ ಪ್ರತಿ, ಮಾರುಕಟ್ಟೆ ಹರಾಜು ಚೀಟಿ, ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ, ಆಧಾರ್ ಕಾರ್ಡ್ ಪ್ರತಿ ಹಾಗೂ ರೈತರಿಂದ ಮುಂಗಡ ಹಣ ಸಂದಾಯ ರಶೀದಿಗಳನ್ನು ಪಡೆದು, ಸದರಿ ರೇಷ್ಮೆ ಬೆಳೆಗಾರರ ಪಾಸ್ ಪುಸ್ತಕದಲ್ಲಿನ ಮಾರಾಟದ ವಿವರಗಳನ್ನು ಪರಿಶೀಲಿಸಿ ಮಂಜೂರಾತಿಗೆ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.
5. ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಪ್ರೋತ್ಸಾಹಧನದ ವಿವರಗಳ ವಹಿಯನ್ನು ನಿರ್ವಹಿಸುವುದು.

## II.ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು:

1. ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ಕ್ಷೇತ್ರಮಟ್ಟದ ಪರಿವೀಕ್ಷಣಾ ಸಮಯದಲ್ಲಿ ರೇಷ್ಮೆ ಬೆಳೆಗಾರರು ಪಡೆದ ಮೊಟ್ಟೆ/ಚಾಕಿ ಹುಳುಗಳ ವಿತರಣೆಯ ವಿವರಗಳನ್ನು ಕನಿಷ್ಠ ಶೇ.25ಕ್ಕಿಂತ ಕಡಿಮೆ ಇಲ್ಲದಂತೆ ಪರಿಶೀಲಿಸುವುದು ಹಾಗೂ ವಿವರಗಳನ್ನು ಪಾಸ್ ಪುಸ್ತಕದಲ್ಲಿ ದಾಖಲಿಸುವುದು.
2. ರೇಷ್ಮೆ ಬೆಳೆಗಾರರು ಪಡೆದಂತಹ ರೋಗ ರಹಿತ ಮೊಟ್ಟೆ/ಚಾಕಿ ಹುಳುಗಳ ಮೂಲದ ಬಗ್ಗೆ ಖಚಿತ ಪಡಿಸಿಕೊಂಡು ದೃಢೀಕರಿಸುವುದು.
3. ಪರಿಶೀಲನಾ ಸಮಯದಲ್ಲಿ ನ್ಯೂನತೆಗಳು ಕಂಡುಬಂದಲ್ಲಿ ಅವುಗಳನ್ನು ಸರಿಪಡಿಸಲು ಕ್ರಮವಹಿಸುವುದು.
4. ತಾಂತ್ರಿಕ ಸೇವಾ ಕೇಂದ್ರಗಳಿಂದ ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಇಲಾಖೆಯಿಂದ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯಂತೆ ಮಂಜೂರಾತಿ ನೀಡುವುದು.
5. ಡಿ.ಸಿ.ಬಿಲ್ ತಯಾರಿಸಿ, ಡಿ.ಸಿ.ಬಿಲ್ ಮೇಲು ಸಹಿ ಮಾಡಿಸಿ **ಖಜಾನೆ-2/ಡಿಬಿಟಿ** ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವುದು.
6. ಪ್ರೋತ್ಸಾಹಧನದ ವಿವರಗಳ ವಹಿಯನ್ನು ನಿರ್ವಹಿಸುವುದು ಮತ್ತು ಮೇಲಾಧಿಕಾರಿಗಳಿಗೆ ವಿವರಗಳನ್ನು ಒದಗಿಸುವುದು.

## III.ಜಿಲ್ಲಾ ಮಟ್ಟದ ಅಧಿಕಾರಿಗಳು:

1. ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್‌ರವರು ಶೇಕಡಾ 5 ರಿಂದ 10 ರಷ್ಟು ದ್ವಿತಳಿ ಬೆಳೆಗಳನ್ನು ಪರಿಶೀಲಿಸುವುದು.

2. ಪ್ರೋತ್ಸಾಹಧನದ ಬಿಲ್ ಅನ್ನು ಮೇಲು ಸಹಿ ಮಾಡಿ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಹಿಂತಿರುಗಿಸುವುದು.
3. ಪ್ರೋತ್ಸಾಹಧನದ ಪ್ರಸ್ತಾವನೆಗಳನ್ನು ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿಗಳಲ್ಲಿ ಆಗಾಗ್ಗೆ ಪರಿಶೀಲಿಸುವುದು.
4. ಪಾವತಿಸಿದ ಪ್ರೋತ್ಸಾಹಧನದ ವಿವರಗಳನ್ನು ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರುಗಳಿಗೆ ಹಾಗೂ ರೇಷ್ಮೆ ನಿರ್ದೇಶನಾಲಯದ ರೇಷ್ಮೆ ಗೂಡು ಮಾರುಕಟ್ಟೆಯ ವಿಭಾಗಕ್ಕೆ ಸಲ್ಲಿಸುವುದು.

**IV.ಮಾರುಕಟ್ಟೆ ಅಧಿಕಾರಿಗಳು:**

1. ರೇಷ್ಮೆ ಮಾರುಕಟ್ಟೆ ಅಧಿಕಾರಿಗಳು ಗೂಡಿನ ಇಳುವರಿಯನ್ನು ಪಾಸ್ ಪುಸ್ತಕದಲ್ಲಿನ ವಿವರಗಳೊಂದಿಗೆ ಪರಿಶೀಲಿಸಿ ಮಾರುಕಟ್ಟೆಗಳಲ್ಲಿ ಗೂಡಿನ ಮಾರಾಟದ ವಿವರಗಳನ್ನು ಸಂಬಂಧಿಸಿದ ರೈತರ ಪಾಸ್ ಪುಸ್ತಕಗಳಲ್ಲಿ ದಾಖಲಿಸುವುದು.
2. ಒಮ್ಮೆ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ವಹಿವಾಟಾದ ಗೂಡು ಪುನಃ ಮಾರುಕಟ್ಟೆ ಮರು ಪ್ರವೇಶಿಸಿದಂತೆ ನಿಗಾ ವಹಿಸಬೇಕು.
3. ಅನಿವಾರ್ಯ ಸಂದರ್ಭಗಳಲ್ಲಿ ರೇಷ್ಮೆ ಬೆಳೆಗಾರರು ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಗೂಡು ಮಾರಾಟ ಮಾಡಿದ ಹರಾಜು ಚೀಟಿ ಕಳೆದುಕೊಂಡಲ್ಲಿ ಅಥವಾ ಹಾಳು ಮಾಡಿಕೊಂಡಲ್ಲಿ ಅಂತಹವರಿಗೆ ಮಾರುಕಟ್ಟೆ ಅಧಿಕಾರಿಗಳು ಮಾರುಕಟ್ಟೆಯಲ್ಲಿ ಸಂರಕ್ಷಿಸಿದ ಮೂಲ ಹರಾಜು ಚೀಟಿಯ ನೆರಳಚ್ಚು ಪ್ರತಿಯನ್ನು ದೃಢೀಕರಿಸಿ ನೀಡುವುದು.
4. ರೀಲರುವಾರು ರೇಷ್ಮೆ ಗೂಡು ಖರೀದಿಯ ವಿವರಗಳನ್ನು ಸಂಬಂಧಿಸಿದ ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರಗಳಿಗೆ ಹಾಗೂ ಗೂಡಿನ ನಂತರದ ಚಟುವಟಿಕೆ ಸಹಾಯಕ ನಿರ್ದೇಶಕರುಗಳಿಗೆ ಒದಗಿಸುವುದು.

**V.ರೇಷ್ಮೆ ಜಂಟಿ ನಿರ್ದೇಶಕರು :**

1. ತಮ್ಮ ವ್ಯಾಪ್ತಿಯ ರೇಷ್ಮೆ ಸಹಾಯಕ ನಿರ್ದೇಶಕರುಗಳ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರೋತ್ಸಾಹಧನ ಪಾವತಿಯ ಬಗ್ಗೆ ಪರಿಶೀಲಿಸುವುದು ಹಾಗೂ ಯಾವುದೇ ಸಿಬ್ಬಂದಿ ಲೋಪವೆಸಗಿರುವುದು ಕಂಡು ಬಂದಲ್ಲಿ ಅಂತಹ ತಪ್ಪಿತಸ್ಥ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಸೂಕ್ತ ಶಿಸ್ತಿನ ಕ್ರಮವನ್ನು ಕೈಗೊಳ್ಳುವುದು.

# ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು

## ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳ ಮಾರ್ಗಸೂಚಿಗಳು

2024-25ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಿರುವ ಮಹಿಳಾ ಅಭಿವೃದ್ಧಿ ವಿಭಾಗದ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಿ ಪ್ರೋತ್ಸಾಹಿಸಲು ಉದ್ದೇಶಿಸಿದ್ದು, ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಈ ಕೆಳಕಂಡ ಕ್ರಿಯಾಯೋಜನೆ ರೂಪಿಸಲಾಗಿದೆ. ಈ ಮಾರ್ಗಸೂಚಿಗಳನ್ವಯ ಪ್ರಗತಿ ಸಾಧಿಸಲು ಸೂಚಿಸಲಾಗಿದೆ. ಸದರಿ ಕಾರ್ಯಕ್ರಮಗಳ ವೆಚ್ಚವನ್ನು ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-51(ಸಹಾಯಧನ-106)ರಡಿ ಭರಿಸುವುದು.

**ಕಾರ್ಯಕ್ರಮ : 1**

**ರೇಷ್ಮೆ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಮಹಿಳೆಯರ ಹೆಸರಿನಲ್ಲಿ ಮಂಜೂರು ಮಾಡಿದ ಸಾಲದ ಮೇಲಿನ ಬಡ್ಡಿಗೆ ಶೇ.50ರ ಸಹಾಯಧನ.**

ರೇಷ್ಮೆ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಮಹಿಳೆಯರು ರೇಷ್ಮೆ ಉದ್ಯಮದ ವಿವಿಧ ಚಟುವಟಿಕೆಗಳಿಗೆ ಹಣಕಾಸು ಸಂಸ್ಥೆ/ಬ್ಯಾಂಕುಗಳಿಂದ ಪಡೆದ ಸಾಲದ ಮೇಲಿನ ಬಡ್ಡಿಗೆ ಶೇ.50ರಷ್ಟು ಸಹಾಯಧನ ನೀಡಲಾಗುವುದು. ಸದರಿ ಯೋಜನೆಯು 2022-23 ಹಾಗೂ 2023-

24ನೇ ಸಾಲಿನಲ್ಲಿ ರೇಷ್ಮೆ ಕೃಷಿ ಚಟುವಟಿಕೆಗಳಿಗೆ ಹಣಕಾಸು ಸಂಸ್ಥೆ/ಬ್ಯಾಂಕುಗಳಿಂದ ಸಾಲ ಪಡೆದ ಮಹಿಳೆಯರಿಗೆ ಅನ್ವಯವಾಗುತ್ತದೆ.

**ಘಟಕ ದರ:** ರೇಷ್ಮೆ ಚಟುವಟಿಕೆಗಳಿಗೆ ನಬಾರ್ಡ್‌ನಿಂದ ಅನುಮೋದಿತವಾಗಿರುವ ಘಟಕ ದರಗಳ ರೀತಿಯಲ್ಲಿ ಹಾಗೂ ಬ್ಯಾಂಕಿನ ಸಾಲ ಮಂಜೂರಾತಿ ಅವಧಿಯಲ್ಲಿ ಪಾವತಿಸಲಾದ ಬಡ್ಡಿಯ ಶೇ.50ರಷ್ಟು.

**ಸಹಾಯಧನ:** ರೇಷ್ಮೆ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಮಹಿಳೆಯರ ಹೆಸರಿನಲ್ಲಿ ಮಂಜೂರು ಮಾಡಿದ ಸಾಲದ ಮೇಲಿನ ಬಡ್ಡಿಗೆ ಶೇ.50ರ ಸಹಾಯಧನ ನೀಡಬಹುದಾಗಿದೆ.

**ಅನುದಾನ:** ಪ್ರತಿಯೊಬ್ಬರಿಗೆ ಗರಿಷ್ಠ ರೂ.5000/-ರಂತೆ 40 ಮಹಿಳೆಯರಿಗೆ ರೂ.2.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದೆ.

**ಸಹಾಯಧನ ಪಡೆಯಲು ಇಚ್ಛಿಸುವ ಮಹಿಳೆಯರಿಂದ ಪಡೆಯಬೇಕಾದ ದಾಖಲಾತಿಗಳು:**

1. ನಿಗದಿತ ನಮೂನೆಯಲ್ಲಿ ಅರ್ಜಿ(ನಮೂನೆ – 1 ಅಡಕಗೊಳಿಸಿದೆ)
2. ತಾಂತ್ರಿಕ ಸೇವಾ ಕೇಂದ್ರದಿಂದ ನೀಡಿರುವ ಪಾಸ್ ಪುಸ್ತಕದ ಪ್ರತಿ/ರೀಲಿಂಗ್ ಲೈಸನ್ಸ್ ಪ್ರತಿ.
3. ಬ್ಯಾಂಕ್‌ನಿಂದ ರೇಷ್ಮೆ ಕೃಷಿ ಚಟುವಟಿಕೆಗೆ ಸಾಲ ಮಂಜೂರಾತಿಯಾಗಿರುವ ಪತ್ರದ ಪ್ರತಿ.
4. ನಿಗದಿತ ಅವಧಿಯಲ್ಲಿ ಸಾಲ(ಅಸಲು ಮತ್ತು ಬಡ್ಡಿ) ಮರುಪಾವತಿ ಮಾಡಿರುವ/ ಮಾಡುತ್ತಿರುವ ಬಗ್ಗೆ ಸಂಬಂಧಿಸಿದ ಬ್ಯಾಂಕ್ ಅಧಿಕಾರಿಗಳ ದೃಢೀಕರಣ ಪತ್ರ(ನಮೂನೆ – 2 ಅಡಕಗೊಳಿಸಿದೆ).
5. ನಿಗಧಿತ ನಮೂನೆಯಲ್ಲಿ ಸಾಲದ ಮೇಲಿನ ವಾರ್ಷಿಕ ಬಡ್ಡಿ ಮೊತ್ತದ ಬಗ್ಗೆ ಸಂಬಂಧಿಸಿದ ಬ್ಯಾಂಕ್ ಅಧಿಕಾರಿಗಳಿಂದ ವಿವರ(ನಮೂನೆ-3 ಅಡಕಗೊಳಿಸಿದೆ).
6. ಯಾವ ಉದ್ದೇಶಕ್ಕಾಗಿ ಸಾಲ ಪಡೆಯಲಾಗಿತ್ತೋ, ಅದೇ ಉದ್ದೇಶಕ್ಕಾಗಿ ಬಳಸಿಕೊಂಡಿರುವ ಬಗ್ಗೆ ಮಹಿಳೆಯಿಂದ ದೃಢೀಕರಣ(ನಮೂನೆ-4 ಅಡಕಗೊಳಿಸಿದೆ)

ಮೇಲ್ಕಂಡ ಕಾರ್ಯಕ್ರಮದಡಿ ಬಡ್ಡಿ ಸಹಾಯಧನ ಪಡೆಯಲು ಇಚ್ಛಿಸುವ ಮಹಿಳೆಯು ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ತಮ್ಮ ಪ್ರದೇಶಕ್ಕೆ ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರಗಳಿಗೆ/ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್)ಗಳಿಗೆ/ರೇಷ್ಮೆ ಸಹಾಯಕ ನಿರ್ದೇಶಕರು/ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆ,ರವರಿಗೆ ಸಲ್ಲಿಸುವುದು. ರೇಷ್ಮೆ ವಿಸ್ತರಣಾಧಿಕಾರಿಗಳು/ರೇಷ್ಮೆ ಸಹಾಯಕ ನಿರ್ದೇಶಕರು, ರವರು ಅರ್ಜಿ ಹಾಗೂ ನಿಗಧಿತ ದಾಖಲಾತಿಗಳನ್ನು ಪರಿಶೀಲಿಸಿದ ನಂತರ, ಮಹಿಳೆಯರು ರೇಷ್ಮೆ ಕೃಷಿ ಚಟುವಟಿಕೆಗಾಗಿ ಪಡೆದಿರುವ ಸಾಲವನ್ನು ಸದುಪಯೋಗ ಮಾಡಿಕೊಂಡಿರುವ ಬಗ್ಗೆ ದೃಢೀಕರಣದೊಂದಿಗೆ ಶೇ.50ರ ಬಡ್ಡಿ ಸಹಾಯಧನ ಮಂಜೂರಾತಿಗಾಗಿ ಸಂಬಂಧಿಸಿದ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು/ರೇಷ್ಮೆ ಸಹಾಯಕ ನಿರ್ದೇಶಕರು(ಗೂಡಿನ ನಂತರದ ಚಟುವಟಿಕೆ)ರವರಿಗೆ ಸಲ್ಲಿಸುವುದು. ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು/ರೇಷ್ಮೆ ಸಹಾಯಕ ನಿರ್ದೇಶಕರು(ಗೂಡಿನ ನಂತರದ ಚಟುವಟಿಕೆ),ರವರು ನಿಯಮಾನುಸಾರ ಮಂಜೂರಾತಿ ನೀಡುವುದು. ಮಂಜೂರಾದ ಮೊತ್ತವನ್ನು ರೇಷ್ಮೆ ಸಹಾಯಕ ನಿರ್ದೇಶಕರು/ರೇಷ್ಮೆ ಸಹಾಯಕ ನಿರ್ದೇಶಕರು(ಗೂಡಿನ ನಂತರದ ಚಟುವಟಿಕೆ),ರವರು **ಖಜಾನೆ-2/ಡಿಬಿಟಿ** ಮೂಲಕ ಫಲಾನುಭವಿಯ ಬ್ಯಾಂಕ್ ಖಾತೆಗೆ ಜಮಾ ಮಾಡುವುದು.

ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

**ಅನುಷ್ಠಾನಾಧಿಕಾರಿಗಳು** – ರೇಷ್ಮೆ ವಿಸ್ತರಣಾಧಿಕಾರಿಗಳು/ರೇಷ್ಮೆ ವಿಸ್ತರಣಾಧಿಕಾರಿ(ರೀಲಿಂಗ್), ರವರು ಹಾಗೂ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು/ರೇಷ್ಮೆ ಸಹಾಯಕ ನಿರ್ದೇಶಕರು(ಗೂಡಿನ ನಂತರದ ಚಟುವಟಿಕೆ),ರವರು ಹಾಗೂ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್/ರೇಷ್ಮೆ ಗೂಡಿನ ಮಾರುಕಟ್ಟೆ ಅಧಿಕಾರಿಗಳು.

**ಕಾರ್ಯಕ್ರಮ : 2**

**ಚಿಟ್ಟೆ ಕೊರೆದ ಗೂಡುಗಳಿಂದ ಕರಕುಶಲ ವಸ್ತು ತಯಾರಿಸುವ ಮಹಿಳಾ ಫಲಾನುಭವಿಗಳಿಗೆ ಶೇ.90ರ ಸಹಾಯಧನ ನೀಡುವುದು.**

**ಘಟಕ ದರ:** ಒಬ್ಬ ಮಹಿಳೆಗೆ ಒಂದು ಮಾಹೆಗೆ 5 ಕೆ.ಜಿ. ಮೀರದಂತೆ ಚಿಟ್ಟೆ ಕೊರೆದ ಗೂಡುಗಳನ್ನು ಒದಗಿಸುವುದು. ಚಿಟ್ಟೆ ಕೊರೆದ ಗೂಡುಗಳ ಪೂರ್ಣ ಮೌಲ್ಯವನ್ನು ಪಾವತಿಸಿದ ಮಹಿಳೆಯರಿಗೆ ಶೇ.90ರ ಸಹಾಯಧನವನ್ನು ಫಲಾನುಭವಿ ಬ್ಯಾಂಕ್ ಖಾತೆಗೆ ಪಾವತಿಸುವುದು.

**ಸಹಾಯಧನ:** ಹಿಂದಿನ ಹರಾಜು ದರದನ್ವಯ ಚಿಟ್ಟೆ ಕೊರೆದ ಗೂಡುಗಳ ಮೌಲ್ಯದ ಮೇಲೆ ಶೇ.90ರ ರಿಯಾಯಿತಿ.

**ಅನುದಾನ:** ವಾರ್ಷಿಕ ರೂ.3.00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

**ಸಹಾಯಧನ ಪಡೆಯಲು ಇಚ್ಛಿಸುವ ಮಹಿಳೆಯರಿಂದ ಪಡೆಯಬೇಕಾದ ದಾಖಲಾತಿಗಳು:**

1. ರೇಷ್ಮೆ ತರಬೇತಿ ಸಂಸ್ಥೆ ಅಥವಾ ಇತರೆ ಸಂಸ್ಥೆಗಳ ಮೂಲಕ ಕರಕುಶಲ ವಸ್ತುಗಳ ತಯಾರಿಕೆಗೆ ಸಂಬಂಧಿಸಿದ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ.
2. ಚಿಟ್ಟೆ ಕೊರೆದ ಗೂಡಿನ ಅವಶ್ಯಕತೆ ಬಗ್ಗೆ ಮಹಿಳಾ ಫಲಾನುಭವಿಯು ತಮ್ಮ ಬೇಡಿಕೆಯನ್ನು ಲಿಖಿತ ರೂಪದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಸಲ್ಲಿಸಬೇಕು.
3. ಖಜಾನೆ-2ರಲ್ಲಿ ರೆಸಿಪಿಯಂಟ್ ಐಡಿ(Recipient ID) ಸೃಜಿಸಲು ಅಗತ್ಯವಾದ ದಾಖಲಾತಿಗಳನ್ನು ಸಲ್ಲಿಸಬೇಕು.
4. ಸರ್ಕಾರಿ ಬಿತ್ತನೆ ಕೋಠಿಗಳಿಂದ ಪೂರ್ಣ ಮೊತ್ತ ಪಾವತಿಸಿ ಚಿಟ್ಟೆ ಕೊರೆದ ಗೂಡುಗಳನ್ನು ಪಡೆದ ರಶೀದಿ.

**ಮೇಲ್ಕಂಡ ಕಾರ್ಯಕ್ರಮದಡಿ ಚಿಟ್ಟೆ ಕೊರೆದ ಗೂಡುಗಳಿಗೆ ಶೇ.90ರ ಸಹಾಯಧನವನ್ನು ಪಡೆಯಲು ಕೆಳಕಂಡ ಷರತ್ತುಗಳನ್ನು ಪಾಲಿಸುವುದು:**

1. ಚಿಟ್ಟೆ ಕೊರೆದ ಗೂಡಿನ ಅವಶ್ಯಕತೆ ಬಗ್ಗೆ ಮಹಿಳಾ ಫಲಾನುಭವಿಯು ತಮ್ಮ ಬೇಡಿಕೆಯನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆಗಳು ಅಥವಾ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್), ರವರಿಗೆ ನೀಡತಕ್ಕದ್ದು.
2. ಮಹಿಳೆಯು ಚಿಟ್ಟೆ ಕೊರೆದ ಗೂಡಿನಿಂದ ಕರಕುಶಲ ವಸ್ತುಗಳ ತಯಾರಿಕೆ ಕುರಿತು ರೇಷ್ಮೆ ತರಬೇತಿ ಸಂಸ್ಥೆಯಿಂದ ಅಥವಾ ರೇಷ್ಮೆ ತರಬೇತಿ ಸಂಸ್ಥೆಯಲ್ಲಿ ತರಬೇತಿಯಾದವರಿಂದ ತರಬೇತಿ ಪಡೆದಿರುವ ಕುರಿತು ಸಂಬಂಧಿಸಿದ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ

ಕೇಂದ್ರ(ರೀಲಿಂಗ್), ಅಥವಾ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆಗಳು ಇವರು ದೃಢೀಕರಿಸುವುದು.

3. ಚಿಟ್ಟೆ ಕೊರೆದ ಗೂಡುಗಳನ್ನು ಕರಕುಶಲ ವಸ್ತುಗಳ ತಯಾರಿಕೆಗೆ ಉಪಯೋಗಿಸುವ ಬಗ್ಗೆ, ಹಾಗೂ ಈ ಹಿಂದೆ ಖರೀದಿಸಿದ ಚಿಟ್ಟೆ ಕೊರೆದ ಗೂಡುಗಳಿಂದ ಕರಕುಶಲ ವಸ್ತು ತಯಾರಿಸಿ, ಮಾರಾಟ ಮಾಡಿರುವ ಬಗ್ಗೆ, ಫಲಾನುಭವಿಯು ಹಾಗೂ ಅಧಿಕಾರಿಯು ದೃಢೀಕರಿಸುವುದು.
4. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಅವರ ಚಟುವಟಿಕೆಯನ್ನು ಪರಿಶೀಲಿಸಿ, ಅಭ್ಯಸಿಸಿ, ಉತ್ಪಾದನಾ ಸಾಮರ್ಥ್ಯ, ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಿರುವ ವಿವರದ ಬಗ್ಗೆ, ದೃಢೀಕರಿಸಿ ಬಿತ್ತನೆ ಕೋಠಿ ಅಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
5. ಮಹಿಳಾ ಫಲಾನುಭವಿಗಳ ವಿವರ, ಶಿಫಾರಸ್ಸು ಮಾಡಿದ ಚಿಟ್ಟೆ ಕೊರೆದ ಗೂಡುಗಳ ಪರಿಮಾಣ ಹಾಗೂ ದಿನಾಂಕ, ಬಿತ್ತನೆ ಕೋಠಿಯ ಹೆಸರು ಕುರಿತು ಪ್ರತಿ ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು/ರೇಷ್ಮೆ ಸಹಾಯಕ ನಿರ್ದೇಶಕರು(ಗೂಡಿನ ನಂತರದ ಚಟುವಟಿಕೆ),ರವರು ಪ್ರತ್ಯೇಕ ವಹಿ ನಿರ್ವಹಿಸುವುದು.
6. ಕರಕುಶಲ ವಸ್ತುಗಳ ತಯಾರಿಕೆಗಾಗಿ ಚಿಟ್ಟೆ ಕೊರೆದ ಗೂಡು ಪಡೆಯಲು ಸಂಬಂಧಿಸಿದ ಅಧಿಕಾರಿಗಳ ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಿ ಬಿತ್ತನೆ ಕೋಠಿಗೆ ಯಾವುದೇ ಜಿಲ್ಲೆಯ ಮಹಿಳಾ ಫಲಾನುಭವಿಗಳು ಬಂದಲ್ಲಿ, ಬಿತ್ತನೆ ಕೋಠಿ ಅಧಿಕಾರಿಗಳು ಪ್ರತಿ ಮಹಿಳಾ ಉದ್ಯಮಶಾಲಿಗೆ ಕರಕುಶಲ ವಸ್ತು ತಯಾರಿಕೆಗಾಗಿ **ಒಂದು ಮಾಹೆಗೆ 5 ಕೆ.ಜಿ. ಮೀರದಂತೆ, ಚಿಟ್ಟೆ ಕೊರೆದ ಗೂಡುಗಳ ಪೂರ್ಣ ಮೊತ್ತವನ್ನು ಮಹಿಳೆಯಿಂದ ಪಡೆದು ಒದಗಿಸುವುದು ಹಾಗೂ ಅಧಿಕೃತ ರಸೀದಿಯನ್ನು ನೀಡುವುದು.**
7. **ಸಂಬಂಧಿಸಿದ ಸರ್ಕಾರಿ ಬಿತ್ತನೆ ಕೋಠಿಯಲ್ಲಿ ಅಂತಿಮವಾಗಿ ಹರಾಜು ಮಾಡಿದ ಚಿಟ್ಟೆ ಕೊರೆದ ಗೂಡುಗಳ ದರದನ್ವಯ ಮಹಿಳೆಯರಿಗೆ ನೀಡುವ ಚಿಟ್ಟೆ ಕೊರೆದ ಗೂಡುಗಳ ದರವನ್ನು ನಿಗದಪಡಿಸುವುದು.**
8. ಮೇಲ್ಕಂಡ ಷರತ್ತುಗಳಂತೆ ನಿಗದಿ ಮಾಡಿರುವ ಚಿಟ್ಟೆ ಕೊರೆದ ಗೂಡುಗಳ ಪ್ರಮಾಣಕ್ಕೆ ತಗಲುವ ಪೂರ್ಣ ಮೌಲ್ಯವನ್ನು ಫಲಾನುಭವಿಗಳು ಸಂಬಂಧಿಸಿದ ಬಿತ್ತನೆ ಕೋಠಿಯಲ್ಲಿ ಪಾವತಿ ಮಾಡಿ, ಕರ್ನಾಟಕ ಆರ್ಥಿಕ ಸಂಹಿತೆ ಪ್ರಕಾರ ನಿಗದಿ ಮಾಡಿರುವ ಸಾಮಾನ್ಯ ಅಧಿಕೃತ ರಸೀದಿಯನ್ನು ಪಡೆಯತಕ್ಕದ್ದು.
9. ಬಿತ್ತನೆ ಕೋಠಿ ಅಧಿಕಾರಿಗಳು ಪ್ರತಿ ಮಾಹೆ ಚಿಟ್ಟೆ ಕೊರೆದ ಗೂಡುಗಳನ್ನು ಖರೀದಿಸಿದ ಮಹಿಳಾ ಫಲಾನುಭವಿಗಳ ವಿವರ(ಹೆಸರು ಮತ್ತು ವಿಳಾಸ), ಕರಕುಶಲ ವಸ್ತು ತಯಾರಿಸಲು ನೀಡಿದ ಚಿಟ್ಟೆ ಕೊರೆದ ಗೂಡುಗಳ ಪರಿಮಾಣ, ಪ್ರತಿ ಕೆ.ಜಿ.ಗೆ ನಿಗದಿ ಪಡಿಸಿದ ದರ(ಅಂತಿಮವಾಗಿ ಹರಾಜು ಮಾಡಿದ ಚಿಟ್ಟೆ ಕೊರೆದ ಗೂಡುಗಳ ದರದನ್ವಯ), ಪಡೆದ ಮೊತ್ತ ಮತ್ತು ಇದನ್ನು ಪಡೆದಿರುವುದಕ್ಕೆ ರಸೀದಿ ಸಂಖ್ಯೆ ಹಾಗೂ ದಿನಾಂಕದ ಬಗ್ಗೆ, ನಿಗದಿತ ನಮೂನೆಯಲ್ಲಿ ವರದಿ ಸಲ್ಲಿಸುವುದು(**ಅಡಕ – ನಮೂನೆ – ಅ**).
10. ಸದರಿ ರಸೀದಿಯೊಂದಿಗೆ ಮಹಿಳಾ ಫಲಾನುಭವಿಗಳು ಚಿಟ್ಟೆ ಕೊರೆದ ಗೂಡುಗಳಿಗೆ ಶೇ.90ರ ಸಹಾಯಧನವನ್ನು ಪಡೆಯಲು ಮುಂಗಡ ಹಣ ಸಂದ ರಸೀದಿಯನ್ನು ಹಾಗೂ ರೆಸಿಪಿಯಂಟ್ ಐಡಿ(Recipient ID) ಸೃಜಿಸಲು ಅಗತ್ಯ ವಿವರಗಳನ್ನು ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರಕ್ಕೆ/ರೇಷ್ಮೆ ಸಹಾಯಕ ನಿರ್ದೇಶಕರು(ಗೂಡಿನ ನಂತರದ ಚಟುವಟಿಕೆ), ರವರಿಗೆ ನಿಗದಿತ ಅರ್ಜಿಯೊಂದಿಗೆ ಹಾಗೂ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸುವುದು.
11. ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು/ರೇಷ್ಮೆ ಸಹಾಯಕ ನಿರ್ದೇಶಕರು (ಗೂಡಿನ ನಂತರದ ಚಟುವಟಿಕೆ), ರವರು ಮಹಿಳಾ ಫಲಾನುಭವಿಗಳು ಖರೀದಿಸಿದ ಚಿಟ್ಟೆ ಕೊರೆದ ಗೂಡುಗಳಿಗೆ ಶೇ.90ರ ಸಹಾಯಧನವನ್ನು ನೀಡಲು ಅಗತ್ಯವಾದ ಅನುದಾನವನ್ನು ಬಿಡುಗಡೆ

ಮಾಡಲು ಬಿತ್ತನೆ ಕೋಠಿ ಅಧಿಕಾರಿಗಳು ಮಹಿಳೆಗೆ ನೀಡಿರುವ ರಸೀದಿ ಪ್ರತಿಯೊಂದಿಗೆ ಪ್ರಸಾವನೆಯನ್ನು ಸಮುಚಿತ ಮಾರ್ಗದಲ್ಲಿ ರೇಷ್ಮೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

12. ಅನುದಾನ ಬಿಡುಗಡೆ ನಂತರ, ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು/ರೇಷ್ಮೆ ಸಹಾಯಕ ನಿರ್ದೇಶಕರು(ಗೂಡಿನ ನಂತರದ ಚಟುವಟಿಕೆ),ರವರು ಅರ್ಥಿಕ ಪ್ರತ್ಯಾಯೋಜನೆಯನ್ವಯ ಸಂಬಂಧಿಸಿದ ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆಯುವುದು. ಡಿ.ಸಿ. ಬಿಲ್ಲು ತಯಾರಿಸಿ, ಸಂಬಂಧಿಸಿದ ಮೇಲಾಧಿಕಾರಿಗಳಿಂದ ಮೇಲು ರುಜು ಪಡೆದು **ಖಜಾನೆ-2** ಮೂಲಕ ನಿಯಮಾನುಸಾರ ಸೆಳೆದು ಮಹಿಳೆಯ ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಹಾಗೂ ಜಮಾ ಮಾಡಿದ ಶೇ.90ರ ಸಹಾಯಧನಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಪ್ರತ್ಯೇಕ ವಹಿಯಲ್ಲಿ ನಮೂದಿಸುವುದು(**ಅಡಕ ನಮೂನೆ – ಆ**).

13. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

**ಕರ್ನಾಟಕ ಸರ್ಕಾರ**
**ರೇಷ್ಮೆ ಇಲಾಖೆ**

ಸಂ.ಯೋಜನೆ/ಪಿಎಸ್1/ಮಾರ್ಗಸೂಚಿ/32/2024-25

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ,
ಬೆಂಗಳೂರು, ದಿನಾಂಕ:31.05.2024.

**ಸುತ್ತೋಲೆ**

ವಿಷಯ: 2024-25ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸಾಮಾನ್ಯ ವರ್ಗಗಳಡಿ ಅನುಷ್ಠಾನಗೊಳಿಸುವ ಫಲಾನುಭವಿಯಾಧಾರಿತ ಕಾರ್ಯಕ್ರಮಗಳ ಅನುಷ್ಠಾನದ ಮಾರ್ಗಸೂಚಿ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ರೇಷ್ಮೆ/112/ರೇಕೃವಿ/2024 ಬೆಂಗಳೂರು, ದಿನಾಂಕ:06.04.2024.

*****

2024-25ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಯೋಜನೆಗಳ ಲೆಕ್ಕ ಶೀರ್ಷಿಕೆಗಳಡಿ ಸರ್ಕಾರವು ಅನುದಾನವನ್ನು ಒದಗಿಸಿದ್ದು, ಮುಂದುವರೆದ ಯೋಜನೆಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ರೇಷ್ಮೆ ಅಭಿವೃದ್ಧಿ ಯೋಜನೆ - ಲೆಕ್ಕ ಶೀರ್ಷಿಕೆ - 2851-00-107-1-35([illegible]) ಅಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಹಾಗೂ ಬೆಲೆ ಸ್ಥಿರೀಕರಣ ನಿಧಿ [illegible] ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ - ಲೆಕ್ಕ ಶೀರ್ಷಿಕೆ - 2851-00-107-1-[illegible] ಸಾಮಾನ್ಯ ಅಡಿ ಅನುಷ್ಠಾನಗೊಳಿಸುವ ಫಲಾನುಭವಿಯಾಧಾರಿತ ಕಾರ್ಯಕ್ರಮಗಳ ಮಾರ್ಗಸೂಚಿಯನ್ನು ತಯಾರಿಸಿದ್ದು, ಪತ್ರದೊಂದಿಗೆ ಅಡಕಗೊಳಿಸಿ ಕಳುಹಿಸಲಾಗಿದೆ. ಸದರಿ ಮಾರ್ಗಸೂಚಿಯನ್ವಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸೂಚಿಸಿದೆ.

2024-25ನೇ ಸಾಲಿನಲ್ಲಿ ವಿವಿಧ ಫಲಾನುಭವಿಯಾಧಾರಿತ ಕಾರ್ಯಕ್ರಮಗಳಡಿ ಸಹಾಯಧನ/ಪ್ರೋತ್ಸಾಹಧನ ನೀಡಲು ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.

(1) ರೇಷ್ಮೆ ಭಾಗೀದಾರರು ರೇಷ್ಮೆ ಇಲಾಖೆಯಲ್ಲಿ ನೀಡಲಾಗುತ್ತಿರುವ ಸಹಾಯಧನ/ ಪ್ರೋತ್ಸಾಹಧನಗಳ ಸೌಲಭ್ಯವನ್ನು ಪಡೆಯಲು ಕಡ್ಡಾಯವಾಗಿ FRUITS Login

ನಲ್ಲಿ FID Create ಮಾಡಿ ಅರ್ಜಿ ನಮೂನೆಯಲ್ಲಿ FID ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವಂತೆ ಸೂಚಿಸಿದೆ.

ರೇಷ್ಮೆ ನಿರ್ದೇಶನಾಲಯದಿಂದ ವಿವಿಧ ಯೋಜನೆಗಳಡಿ ಅನುಷ್ಠಾನಗೊಳಿಸುವ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಡಿ ಜಿಲ್ಲಾವಾರು ನಿಗಧಿಪಡಿಸುವ ಭೌತಿಕ ಹಾಗೂ ಆರ್ಥಿಕ ಗುರಿಯನ್ನು ಸಾಧಿಸಲು ಕ್ರಮವಹಿಸುವುದು. 2024-25ನೇ ಸಾಲಿನಲ್ಲಿ ಒದಗಿಸುವ ಅನುದಾನಕ್ಕನುಗುಣವಾಗಿ ಮಾಹೆವಾರು ಭರಿಸುವ ವೆಚ್ಚದ ಮಾಹಿತಿಯನ್ನು ಎನ್‌ಡಿಎಸ್‌ಎಸ್‌ನಲ್ಲಿ ತಪ್ಪದೇ ದಾಖಲಿಸುವುದು ಹಾಗೂ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ತಯಾರಿಸಿ ಯೋಜನಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

19/04/24

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ಇವರಿಗೆ,
ಎಲ್ಲಾ ರೇಷ್ಮೆ ಜಂಟಿ ನಿರ್ದೇಶಕರು
ಎಲ್ಲಾ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಕುಣಿಗಲ್/ಮಾಗಡಿ
ರೇಷ್ಮೆ ಉಪನಿರ್ದೇಶಕರು, ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ವಿಜಯಪುರ/ರಾಮನಗರ/ಕನಕಪುರ/ಕೊಳ್ಳೇಗಾಲ/ಕೋಲಾರ/ಶಿಡ್ಲಘಟ್ಟ
ಎಲ್ಲಾ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು
ಎಲ್ಲಾ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆಗಳು
ಎಲ್ಲಾ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ/ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್)

ಪ್ರತಿಯನ್ನು ರೇಷ್ಮೆ ಜಂಟಿ ನಿರ್ದೇಶಕರು, ಎಸ್‌ಪಿಎಸ್‌ಎಫ್ ವಿಭಾಗ/ಟಿಎಸ್‌ಟಿಐ ವಿಭಾಗ/ರೇಷ್ಮೆ ಗೂಡು ಮಾರುಕಟ್ಟೆ ವಿಭಾಗ ಹಾಗೂ ಗೂಡಿನ ನಂತರದ ಚಟುವಟಿಕೆ ವಿಭಾಗ,

# 2024-25ನೇ ಸಾಲಿನ ರೇಷ್ಮೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-35(ಸಹಾಯಧನ-106)(ಸಾಮಾನ್ಯ) ಕಾರ್ಯಕ್ರಮಗಳ ಮಾರ್ಗಸೂಚಿ

**ರೇಷ್ಮೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-35(ಸಹಾಯಧನ - 106)**

## ಗೂಡಿನ ಪೂರ್ವದ ಚಟುವಟಿಕೆ ಯ ಕಾರ್ಯಕ್ರಮಗಳು

**ಕಾರ್ಯಕ್ರಮ : 1**

**ರೇಷ್ಮೆ ಹುಳು ಸಾಕಾಣಿಕೆ(ಸುಧಾರಿತ ಮೌಂಟೇಜಸ್‌ಗಳು ಸೇರಿದಂತೆ) ಸಲಕರಣೆಗಳು/ ಹಿಪ್ಪುನೇರಳೆ ತೋಟ ನಿರ್ವಹಣಾ ಸಲಕರಣೆಗಳ ಖರೀದಿಗೆ ಸಹಾಯಧನ:**

ಈ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ರೇಷ್ಮೆ ಬೆಳೆಗಾರರಿಗೆ ಸೌಲಭ್ಯ ಒದಗಿಸುವ ಹಿತದೃಷ್ಟಿಯಿಂದ ಸಲಕರಣೆ ಖರೀದಿಗೆ ಘಟಕ ದರ ರೂ.75,000/- ನಿಗದಿ ಪಡಿಸಿದ್ದು, ಸಹಾಯಧನ ರೂ.56,250/-(ಶೇಕಡಾ 75). ಸಲಕರಣೆ ಖರೀದಿಗೆ ಹೊಸ ರೈತರಿಗೆ ಮೊದಲ ಆದ್ಯತೆ ನೀಡುವುದು.

- ಮೈಸೂರು ಶುದ್ಧ ತಳಿ/ದ್ವಿತಳಿ/ಸುಧಾರಿತ ಮಿಶ್ರತಳಿ ರೇಷ್ಮೆ ಗೂಡು ಬೆಳೆಯುವ ರೇಷ್ಮೆ ಬೆಳೆಗಾರರನ್ನು ಸಲಕರಣೆ ಖರೀದಿಗೆ ಸಹಾಯಧನ ನೀಡಲು ಆಯ್ಕೆ ಮಾಡಬೇಕು.
- ಇಲಾಖೆಯ ಖರೀದಿ ಸಮಿತಿ ಅನುಮೋದಿಸುವ ಸಲಕರಣೆಗಳ ಘಟಕ ದರ ಮಿತಿಗೆ ಒಳಪಟ್ಟು ಅನುಮೋದಿತ ಸಂಸ್ಥೆಗಳಿಂದ ಮಾತ್ರ ಸಲಕರಣೆಗಳನ್ನು ಖರೀದಿಸಬೇಕು.
- ಇಲಾಖೆಯು ಅನುಮೋದಿಸುವ ಸಲಕರಣೆಗಳನ್ನು ಖರೀದಿಸಬಹುದಾಗಿದೆ. ಈ ಕುರಿತು ರೇಷ್ಮೆ ನಿರ್ದೇಶನಾಲಯದಿಂದ ಪ್ರತ್ಯೇಕ ಸುತ್ತೋಲೆ ನೀಡಲಾಗುವುದು.
- ಹುಳು ಸಾಕಾಣಿಕೆ ಮಾಡುವ ಬಗ್ಗೆ ಚಾಲ್ತಿಯಲ್ಲಿರುವ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.
- ಹುಳು ಸಾಕಾಣಿಕೆಯನ್ನು ಮುಂದಿನ 3 ವರ್ಷಗಳವರೆಗೆ ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.50/-ಗಳ ಛಾಪಾ ಕಾಗದದಲ್ಲಿ ನಿಗದಿತ ನಮೂನೆಯಲ್ಲಿ ಮುಚ್ಚಳಿಕೆ ಪಡೆಯಬೇಕು.
- ರೇಷ್ಮೆ ಬೆಳೆಗಾರರು ಸಲಕರಣೆ ಸರಬರಾಜು ಪಡೆಯಲು ಇಚ್ಛಿಸುವ ಸಲಕರಣೆ ಮತ್ತು ಸಂಸ್ಥೆಗಳ ವಿವರಗಳನ್ನು ರೇಷ್ಮೆ ಬೆಳೆಗಾರರಿಂದ ಪಡೆಯುವ ಕೋರಿಕೆಯ ಅರ್ಜಿಯಲ್ಲಿ ವಿವರಗಳನ್ನು ಪಡೆಯುವುದು
- **ಸಲಕರಣೆಗಳ ಸರಬರಾಜು ಪಡೆದು ಸಹಾಯಧನ ವಿತರಣೆ:**
  ಇಲಾಖೆಯು ಅನುಮೋದಿಸಿ empanel ಮಾಡಿರುವ ಸಂಸ್ಥೆಗಳಿಂದ ಮಾತ್ರ ಸಲಕರಣೆಗಳನ್ನು ಸರಬರಾಜು ಪಡೆಯುವುದು ಕಡ್ಡಾಯವಾಗಿದೆ.
  - ರೇಷ್ಮೆ ಬೆಳೆಗಾರರು ಸಲಕರಣೆಗಳ ಸಂಪೂರ್ಣ ಮೊತ್ತವನ್ನು ಪಾವತಿಸಿ empanel ಮಾಡಿರುವ ಸಂಸ್ಥೆಗಳಿಂದ ಸರಬರಾಜು ಪಡೆದಿದ್ದಲ್ಲಿ ಸಹಾಯಧನದ ಮೊತ್ತವನ್ನು **ಖಜಾನೆ-2/ಡಿಬಿಟಿ** ಮುಖಾಂತರ ರೇಷ್ಮೆ ಬೆಳೆಗಾರರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
  - ಸಂಬಂಧಿಸಿದ ಜಿಲ್ಲೆಯ ಇಲಾಖಾ ಅಧಿಕಾರಿಗಳು ರೇಷ್ಮೆ ಬೆಳೆಗಾರರ ವತಿಯಿಂದ ಫಲಾನುಭವಿ ವಂತಿಕೆಯಾಗಿ ಶೇಕಡಾ 25ರಷ್ಟನ್ನು empanel ಸಂಸ್ಥೆಗೆ ಡಿಮಾಂಡ್ ಡ್ರಾಫ್ಟ್ ಮುಖಾಂತರ ಪಾವತಿಸಿ ಸಲಕರಣೆಗಳನ್ನು ರೇಷ್ಮೆ ಬೆಳೆಗಾರರಿಗೆ ಸರಬರಾಜು ಮಾಡಿರುವುದನ್ನು ಖಾತ್ರಿ ಪಡಿಸಿಕೊಂಡು, ರೇಷ್ಮೆ ಬೆಳೆಗಾರರಿಂದ ಸರಬರಾಜು ಸಂಸ್ಥೆಗೆ ಸಹಾಯಧನ ಮೊತ್ತ ಪಾವತಿಸಲು ಯಾವುದೇ ನಿರಾಪೇಕ್ಷಣೆ ಇರುವುದಿಲ್ಲವೆಂಬ ಬಗ್ಗೆ No

Objection Certificate(NOC). ರೇಷ್ಮೆ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ನಿರಾಕ್ಷೇಪಣಾ ಪತ್ರಕ್ಕೆ ರೇಷ್ಮೆ ಬೆಳೆಗಾರರು ಸಹಿ ಮಾಡಿ ನೀಡಿದ್ದಲ್ಲಿ ಸಹಾಯಧನದ ಮೊತ್ತವನ್ನು ಸಲಕರಣೆ ಸರಬರಾಜು ಮಾಡಿದ ಸಂಸ್ಥೆಗೆ **ಖಜಾನೆ-2/ಡಿಬಿಟಿ** ಮುಖಾಂತರ ಸಂಸ್ಥೆಯ ಬ್ಯಾಂಕ್ ಖಾತೆಗೆ ಪಾವತಿಸಬಹುದಾಗಿದೆ.

- ಸಲಕರಣೆ ಸರಬರಾಜು ಮಾಡಿದ ಸಂಸ್ಥೆಗೆ ಹಣ ಪಾವತಿಸುವಾಗ Tax Invoiceನಲ್ಲಿನ GSTಯ ಶೇ.2ರಷ್ಟು(CGST-1% + SGST-1%ರಂತೆ) ಮತ್ತು Tax Invoiceನಲ್ಲಿನ ಒಟ್ಟಾರೆ ಬಿಲ್ಲಿನ ಮೊತ್ತಕ್ಕೆ(Including GST) ಶೇ.2ರಷ್ಟು ಐಟಿ(IT)ಯನ್ನು ನಿಯಮಾನುಸಾರ ಕಟಾಯಿಸುವುದು ಹಾಗೂ ನಿಗದಿತ ದಿನಾಂಕದೊಳಗೆ ಟಿಡಿಎಸ್ (TDS) ಫೈಲ್ ಮಾಡುವುದು.

- ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ/ಅಧಿಕಾರಿಗಳು ಖರೀದಿಸಿರುವ ಸಲಕರಣೆಗಳ ಜೊತೆಯಲ್ಲಿ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
- ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು/ ದೃಢೀಕರಣಗಳಿರಬೇಕು.
- ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

**(ರೂ.ಲಕ್ಷಗಳಲ್ಲಿ)**

| ವಿವರ | ಘಟಕ ದರ | ಸಹಾಯಧನ(75%) |
|---|---|---|
| ರೇಷ್ಮೆ ಹುಳು ಸಾಕಾಣಿಕೆ ಸಲಕರಣೆ | 0.75 | 0.5625 |

**ತಾಂತ್ರಿಕ ಸೇವಾ ಕೇಂದ್ರದ ವಲಯಾಧಿಕಾರಿಗಳು:**

- ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಪಡೆಯುವುದು ಹಾಗೂ ಅರ್ಜಿಯಲ್ಲಿನ ಫಲಾನುಭವಿಗಳ ಮಾಹಿತಿಯ ನೈಜತೆಯನ್ನು ಪರಿಶೀಲಿಸಿ ಆಯ್ಕೆಗೆ ಶಿಫಾರಸ್ಸು ಮಾಡುವ ಜವಾಬ್ದಾರಿಯು ವಲಯಾಧಿಕಾರಿಯದ್ದಾಗಿರುತ್ತದೆ.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ಸದರಿ ಬೆಳೆಗಾರರು ಈ ಹಿಂದಿನ ಸಾಲುಗಳಲ್ಲಿ ಇಲಾಖೆಯಲ್ಲಿ ಸಲಕರಣೆ ಖರೀದಿಗೆ ಸಹಾಯಧನ ಪಡೆದಿರುವ ಬಗ್ಗೆ ಪರಿಶೀಲಿಸಿ ಪುನರಾವರ್ತನೆಯಾಗದಿರುವುದನ್ನು ಖಾತ್ರಿಪಡಿಸಿಕೊಂಡು ಪ್ರಸ್ತಾವನೆಯನ್ನು ತಯಾರಿಸಿ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸುವುದು.
- ಪ್ರಸ್ತಾವನೆ ತಯಾರಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ವಲಯಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**<u>ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು:</u>**

- ವಲಯಾಧಿಕಾರಿಗಳು ಸಲ್ಲಿಸಿರುವ ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸುವುದು.
- ಅರ್ಹವಾಗುವುದಾದಲ್ಲಿ, ಬೆಳೆಗಾರರ ಅರ್ಜಿಯ ಅಡಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ದೃಢೀಕರಿಸಬೇಕು ಹಾಗೂ ಜೇಷ್ಠತೆ ಆಧಾರದ ಮೇಲೆ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು.
- ನಮೂನೆಯಲ್ಲಿ ಸ್ಥಳದ ಮಹಜರ್ ಜರುಗಿಸಿ, ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

**ಸಂಬಂಧಪಟ್ಟ ರೇಷ್ಮೆ ಸಹಾಯಕ ನಿರ್ದೇಶಕರು:**

- ಸಲಕರಣೆ ಖರೀದಿಸಿರುವುದನ್ನು ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಗಿ ಸಹಿ ಮಾಡಿ ವಿತ್ತೀಯ ಪ್ರಾಧಿಕಾರ ಆಗಿದ್ದಲ್ಲಿ ಮಂಜೂರಾತಿ ನೀಡುವುದು.

**ಕಾರ್ಯಕ್ರಮ: 2**
**ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ:**

ರೇಷ್ಮೆ ಹುಳುಗಳನ್ನು ಆರೋಗ್ಯಕರ ವಾತಾವರಣದಲ್ಲಿ ಸಾಕಾಣಿಕೆ ಮಾಡುವುದರಿಂದ ಉತ್ತಮ ಗುಣಮಟ್ಟದ ರೇಷ್ಮೆ ಗೂಡು, ಅಧಿಕ ಇಳುವರಿ ಹಾಗೂ ಅಧಿಕ ಆದಾಯ ಪಡೆಯಬಹುದಾಗಿದೆ. ಪ್ರತ್ಯೇಕ ರೇಷ್ಮೆ ಹುಳು ಸಾಕಾಣಿಕೆ ಮನೆಯಲ್ಲಿ ಸೋಂಕು ನಿವಾರಣೆಯನ್ನು ಸಮರ್ಪಕವಾಗಿ ಕೈಗೊಳ್ಳಬಹುದಾಗಿದ್ದು, ಉತ್ತಮ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ.

ಕೇಂದ್ರ ರೇಷ್ಮೆ ಮಂಡಳಿಯು ಸಿಲ್ಕ್ ಸಮಗ್ರ-2ರಡಿ ಘಟಕ ದರ/ಸಹಾಯಧನಗಳನ್ನು ನೀಡಿರುತ್ತದೆ. ಇಲಾಖೆಯಲ್ಲಿಯೂ ಸಹ ಸದರಿ ಘಟಕ ದರ/ಸಹಾಯಧನಗಳನ್ನು ಅಳವಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರೇಷ್ಮೆ ಅಭಿವೃದ್ಧಿ ಯೋಜನೆಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣದ ಘಟಕ ದರಗಳನ್ನು ಮತ್ತು ಸಹಾಯಧನದ ಮೊತ್ತ ಹಾಗೂ ಇರಬೇಕಾದ ಹಿಪ್ಪುನೇರಳೆ ವಿಸ್ತೀರ್ಣದ ವಿವರಗಳನ್ನು ಮತ್ತು ಪರಿಮಿತಿಗಳನ್ನು ಈ ಕೆಳಗೆ ನೀಡಿದೆ.

**(ರೂ.ಲಕ್ಷಗಳಲ್ಲಿ)**

| ಮನೆಯ ಅಳತೆ (ಚದರಡಿ) | ಘಟಕ ದರ | ವಿವರ | ಕನಿಷ್ಠ ಇರಬೇಕಾದ | | ಸಹಾಯಧನ |
|---|---|---|---|---|---|
| | | | ಹಿಪ್ಪುನೇರಳೆ ಕ್ಷೇತ್ರ (ಎಕರೆಗಳಲ್ಲಿ) | ಸಾಕುವ ಮೊಟ್ಟೆಗಳು (ಪ್ರತಿ ತಂಡದಲ್ಲಿ) | |
| ಕಡಿಮೆ ವೆಚ್ಚದ ಹುಳು ಸಾಕಾಣಿಕೆ ಶೆಡ್ ನಿರ್ಮಾಣ - 225-1000 ಚದರ ಅಡಿಯವರೆಗೆ | 1 ಚದರ ಅಡಿಗೆ ರೂ.100/-ರಂತೆ ಪ್ರೋರೇಟಾ ಆಧರಿಸಿ ಕನಿಷ್ಠ 225 ಚದರ ಅಡಿಯಿಂದ ಗರಿಷ್ಠ 1000 ಚದರ ಅಡಿಯವರೆಗೆ ಸಹಾಯಧನ ನೀಡಲಾಗುತ್ತದೆ. | | ಶೆಡ್ ವಿಸ್ತೀರ್ಣದ ಪ್ರೋರೇಟಾದಂತೆ 0.20 ರಿಂದ 1.20 | 50 - 250 | ಪ್ರೋರೇಟಾದಂತೆ ರೂ.0.225 ರಿಂದ ರೂ.1.000 |
| 225 | 0.900 | ರೇಷ್ಮೆ ಹುಳು ಸಾಕಾಣಿಕೆ ಮನೆ | 0.20 | 50 | 0.675(75%) |
| 600 | 3.250 | | 1.00 | 100 - 150 | 2.4375(75%) |
| 1000 | 4.500 | | 1.20 | 150 - 250 | 3.375(75%) |

1. ಹುಳು ಸಾಕಾಣಿಕೆ ಮನೆಯು, ರೋಗದ ಸೋಂಕು ತಡೆಯಲು, ಪ್ರತ್ಯೇಕವಾಗಿರಬೇಕು ಹಾಗೂ ಇದಕ್ಕೆ ಹೊಂದಿಕೊಂಡಂತೆ ವಾಸದ ಮನೆ ಇರಬಾರದು.
2. ಹುಳು ಸಾಕಾಣಿಕೆ ಮನೆಯ ನೆಲ ಹಾಗೂ ಗೋಡೆಗಳು ಸಿಮೆಂಟ್‌ನಿಂದ ಗಿಲಾವು ಮಾಡಿಸಿದ್ದು, ಹುಳು ಸಾಕಾಣಿಕೆ ಮನೆಗಳಲ್ಲಿ ಉಷ್ಣಾಂಶ ಮತ್ತು ಶೈತ್ಯಾಂಶ ನಿರ್ವಹಿಸಲು ಸಾಧ್ಯವಾಗುವಂತೆ ಹಾಗೂ ಪರಿಣಾಮಕಾರಿ ಸೋಂಕು ನಿವಾರಣೆ ಮಾಡಲು ಸಾಧ್ಯವಾಗುವಂತೆ ಇರಬೇಕು.(ಗಾಳಿಯಾಡದಂತೆ ಮಾಡಲು ಅವಕಾಶವಿರಬೇಕು).
3. ಹುಳು ಸಾಕಾಣಿಕೆ ಮನೆಯು ರೇಷ್ಮೆ ಹುಳು ಸಾಕಾಣಿಕೆ ಮಾಡಲು ಸಾಧ್ಯವಾಗುವಂತೆ ಸಾಕಷ್ಟು ಗಾಳಿಯಾಡಲು ಕಿಟಕಿ/ಗವಾಕ್ಷಿಗಳು ಇರಬೇಕು.

4. ನಿಗದಿತ ನಕ್ಷೆಯಂತೆ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ ಮಾಡಿರಬೇಕು(ನಕ್ಷೆಯನ್ನು ಅಡಕಗೊಳಿಸಿದೆ)(225, 600 ಮತ್ತು 1000 ಚದರಡಿಗಳಿಗೆ ಮಾತ್ರ). ಈ ನಿಯಮ ಕಡಿಮೆ ವೆಚ್ಚದ ಶೆಡ್‌ಗೆ ಅನ್ವಯಿಸುವುದಿಲ್ಲ.
5. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಬ್ಯಾಂಕ್‌ನಿಂದ ಆರ್ಥಿಕ ನೆರವು ಕೂಡ ದೊರಕಿಸಬಹುದಾಗಿದೆ.
6. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕಾಗಿ ರೈತರು ಅರ್ಜಿಯನ್ನು ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ,ರವರಿಗೆ ಸಲ್ಲಿಸಬೇಕು. ರೈತರು ಅರ್ಜಿ ಸಲ್ಲಿಸಿದ್ದಕ್ಕೆ ರೈತರಿಗೆ ಸ್ವೀಕೃತಿ ನೀಡುವುದು ಮತ್ತು ವಹಿಯಲ್ಲಿ ದಾಖಲಿಸುವುದು. ರೇಷ್ಮೆ ವಿಸ್ತರಣಾಧಿಕಾರಿಗಳು ತಾಂತ್ರಿಕ ಸೇವಾ ಕೇಂದ್ರ,ರವರು ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ ಮಾಡುವ ಸ್ಥಳವನ್ನು ಪರಿಶೀಲಿಸಿ, ಶಿಫಾರಸ್ಸು ನೀಡಬೇಕು. ಸಂಬಂಧಿಸಿದ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು ಸಹ ಸ್ಥಳವನ್ನು ಪರಿಶೀಲಿಸಿ ದೃಢೀಕರಿಸಿ ಶಿಫಾರಸ್ಸು ಮಾಡಿ ಅನುಮೋದನೆ ನೀಡಿದ ನಂತರ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ,ರವರು ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕಾಗಿ ಕಾರ್ಯಾದೇಶ ನೀಡುವುದು.
7. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣದ ಸ್ಥಳದ ಜಮೀನಿನ ಮತ್ತು ವಾರಸುದಾರರ ಮಾಹಿತಿಯನ್ನು ದಿಶಾಂಕ್((Dishank app)ಆಪ್‌ನಲ್ಲಿ ಇಂಧೀಕರಿಸುವುದು.
8. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ಪಡೆಯಲು ಕೊನೆಯ ಹಂತದ ಒಂದು ಫೋಟೋವನ್ನು ತೆಗೆಯಬೇಕು. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ ಸಂಪೂರ್ಣವಾದ ನಂತರ(GPS ಫೋಟೋ ಪ್ರತಿಗಳು – ಫೋಟೋ ಪ್ರತಿಗಳಲ್ಲಿ Lattitude ಮತ್ತು Longitude ನಮೂದಿಸಿರಬೇಕು).
9. **ರೇಷ್ಮೆ ಹುಳು ಸಾಕಾಣಿಕೆ ಮನೆಗಳಿಗೆ ಸಹಾಯಧನ ನೀಡುವ ಮುನ್ನಾ ಸರ್ಕಾರದ ಇತರೆ ಯೋಜನೆಗಳಡಿ ಸದರಿ ಮನೆಗೆ ಅರ್ಥಿಕ ಸೌಲಭ್ಯ ಪಡೆದಿರಬಾರದು ಎಂಬುದನ್ನು ಖಾತರಿ ಪಡಿಸಿಕೊಂಡು ಪ್ರಸ್ತಾವನೆ ತಯಾರಿಕೆ/ಮಂಜೂರಾತಿ ನೀಡುವುದು.**
10. ತದನಂತರ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲು ರೈತರಿಂದ ಅರ್ಜಿ ಪಡೆಯಬೇಕು. ಅರ್ಜಿಗಳನ್ನು ಜೇಷ್ಠತೆಯ ಆಧಾರದ ಮೇಲೆ ವಹಿಗಳಲ್ಲಿ ದಾಖಲಿಸಬೇಕು. ಇದರೊಂದಿಗೆ ಅಗತ್ಯವಿರುವ ದಾಖಲಾತಿಗಳೊಂದಿಗೆ ಸಹಾಯಧನ ಮಂಜೂರಾತಿಗೆ ಪ್ರಸ್ತಾವನೆ ಸಿದ್ಧಪಡಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಬೇಕು.
11. ರೂ.50/- ಛಾಪಾ ಕಾಗದದ ಮೇಲೆ 5 ವರ್ಷಗಳವರೆಗೆ ಹುಳು ಸಾಕಾಣಿಕೆ ಮನೆ ಉದ್ದೇಶಿತ ಹುಳು ಸಾಕಾಣಿಕೆ ಮಾಡಲು ಮಾತ್ರ ಉಪಯೋಗಿಸಲು ಹಾಗೂ ವರ್ಷದಲ್ಲಿ ಕನಿಷ್ಠ ಎರಡು ದ್ವಿತಳಿ ಹುಳು ಸಾಕಾಣಿಕೆ ಮಾಡುವುದಾಗಿ ಮುಚ್ಚಳಿಕೆ ಬರೆದುಕೊಡಬೇಕು.
12. ರೇಷ್ಮೆ ಬೆಳೆಗಾರರು ತಮ್ಮ ಹೆಸರಿನಲ್ಲಿ ಮೇಲೆ ವಿವರಿಸಿರುವ ಕೋಷ್ಟಕ ರೀತ್ಯಾ ಕನಿಷ್ಠ ವಿಸ್ತೀರ್ಣದಷ್ಟು ಹಿಪ್ಪುನೇರಳೆ ತೋಟ ಹೊಂದಿರಬೇಕು ಹಾಗೂ ಅಂತಹ ದಾಖಲಾತಿ ಇರುವ ಪಹಣಿಯನ್ನು ಒದಗಿಸಬೇಕು.
13. ರೇಷ್ಮೆ ಬೆಳೆಗಾರರು ದ್ವಿತಳಿ/ಸುಧಾರಿತ ಮಿಶ್ರತಳಿ ರೇಷ್ಮೆ ಬೆಳೆಗಾರರಾಗಿದ್ದು, ವರ್ಷಕ್ಕೆ ಕನಿಷ್ಠ ಎರಡು ದ್ವಿತಳಿ ಹುಳು ಸಾಕಾಣಿಕೆ ಮಾಡಬೇಕು**(ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರಿಗೆ ದ್ವಿತಳಿ ಬೆಳೆ ಮಾಡಬೇಕೆಂಬ ನಿಯಮ ಇರುವುದಿಲ್ಲ).**
14. ರೇಷ್ಮೆ ಬೆಳೆಗಾರರು ರೇಷ್ಮೆ ಹುಳು ಸಾಕಾಣಿಕಾ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.
15. ರೇಷ್ಮೆ ಹುಳು ಸಾಕಾಣಿಕೆ ಮನೆಯು ನಿಗದಿ ಪಡಿಸಿದ ವಿಸ್ತೀರ್ಣದಲ್ಲಿದ್ದು, ಅದರ ಒಂದು ಭಾಗಕ್ಕೆ ಸೊಪ್ಪು ಶೇಖರಣಾ ಕೊಠಡಿ ಹೊಂದಿಕೊಂಡಿದ್ದಲ್ಲಿ ಅಂತಹ ಮನೆಗಳಿಗೆ ಸಹಾಯಧನ ನೀಡಲು ಪರಿಗಣಿಸಬಹುದಾಗಿದೆ.
16. ರೇಷ್ಮೆ ಹುಳು ಸಾಕಾಣಿಕೆ ಮನೆಯ ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ **ಖಜಾನೆ-2/ಡಿಬಿಟಿ** ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
17. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ/ಅಧಿಕಾರಿಗಳು ರೇಷ್ಮೆ ಹುಳು ಸಾಕಾಣಿಕೆ ಮನೆಯ ಮುಂದೆ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
18. ಇಲಾಖೆಯು ನಿಗದಿ ಪಡಿಸಿದ ನಮೂನೆಯಲ್ಲಿ ಅರ್ಜಿ, ಸ್ಥಳ ಪರಿಶೀಲನಾ ವರದಿ(ಕಾರ್ಯಾದೇಶ ನೀಡುವ ಮುನ್ನ), ಕಾರ್ಯಾದೇಶ, ಮಹಜರ್(ಸ್ಥಳ ಪರಿಶೀಲನಾ ವರದಿ ಕಾರ್ಯದ ನಂತರ), ಶಿಫಾರಸ್ಸು/ದೃಢೀಕರಣಗಳಿರಬೇಕು.

30. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ಸೌಲಭ್ಯ ಒದಗಿಸುವಲ್ಲಿ ವ್ಯತ್ಯಾಸಗಳೇನಾದರೂ ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.
31. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ಮಂಜೂರಾತಿ ನೀಡಲು ಮಂಜೂರಾತಿ ಪ್ರಾಧಿಕಾರದವರೆಗೆ ಎಲ್ಲಾ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗಳು ಖುದ್ದಾಗಿ ರೇಷ್ಮೆ ಹುಳು ಸಾಕಾಣಿಕೆ ಮನೆಯನ್ನು ಪರಿವೀಕ್ಷಿಸಿ ಮಂಜೂರಾತಿ ನೀಡಲು ಶಿಫಾರಸ್ಸು ಮಾಡುವುದು ಕಡ್ಡಾಯವಾಗಿರುತ್ತದೆ.

**ತಾಂತ್ರಿಕ ಸೇವಾ ಕೇಂದ್ರದ ವಲಯಾಧಿಕಾರಿಗಳು:**

- ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಪಡೆಯುವುದು ಹಾಗೂ ಅರ್ಜಿಯಲ್ಲಿನ ಫಲಾನುಭವಿಗಳ ಮಾಹಿತಿಯ ನೈಜತೆಯನ್ನು ಪರಿಶೀಲಿಸಿ ಆಯ್ಕೆಗೆ ಶಿಫಾರಸ್ಸು ಮಾಡುವ ಜವಾಬ್ದಾರಿಯು ವಲಯಾಧಿಕಾರಿಯದ್ದಾಗಿರುತ್ತದೆ.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ಸದರಿ ಬೆಳೆಗಾರರು ಈ ಹಿಂದೆ ಇಲಾಖೆಯಲ್ಲಿ ಅಥವಾ ಬೇರೆ ಇಲಾಖೆಯ ಯೋಜನೆಗಳಡಿ ಸಹಾಯಧನ ಸೌಲಭ್ಯವನ್ನು ಪಡೆದಿಲ್ಲದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪ್ರಸ್ತಾವನೆಯನ್ನು ತಯಾರಿಸಿ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಸ್ತಾವನೆ ತಯಾರಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ವಲಯಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು:**

- ವಲಯಾಧಿಕಾರಿಗಳು ಸಲ್ಲಿಸಿರುವ ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸುವುದು. ಜೇಷ್ಠತೆ ಆಧಾರದಲ್ಲಿ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು. ರೈತರಿಂದ ಅರ್ಜಿ ಪಡೆದಿದ್ದಕ್ಕೆ ರೈತರಿಗೆ ಸ್ವೀಕೃತಿ ನೀಡುವುದು ಹಾಗೂ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಕಾರ್ಯಾದೇಶವನ್ನು ಸಂಬಂಧಿಸಿದ ರೇಷ್ಮೆ ಬೆಳೆಗಾರರಿಗೆ ನೀಡುವುದು.
- ಅರ್ಹವಾಗುವುದಾದಲ್ಲಿ, ಬೆಳೆಗಾರರ ಅರ್ಜಿಯ ಅಡಕಗಳನ್ನು ಸೂಕ್ತವಾಗಿ ಪರಿಶೀಲಿಸಿ, ದೃಢೀಕರಿಸಬೇಕು.
- ನಮೂನೆಯಲ್ಲಿ ಸ್ಥಳ ಪರಿಶೀಲನಾ ವರದಿಯಂತೆ ಖುದ್ದಾಗಿ ಪರಿಶೀಲಿಸಿ ಮಹಜರ್ ಜರುಗಿಸಿ, ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.
- ಪ್ರಸ್ತಾವನೆ ತಯಾರಿಕೆ ಹಾಗೂ ಪರಿಶೀಲನೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ರೇಷ್ಮೆ ವಿಸ್ತರಣಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ಸಂಬಂಧಪಟ್ಟ ರೇಷ್ಮೆ ಸಹಾಯಕ ನಿರ್ದೇಶಕರು:**

- ಸ್ಥಳ ಪರಿಶೀಲಿಸಿ, ದೃಢೀಕರಿಸಿ ಕಾರ್ಯಾದೇಶ ನೀಡಲು ಶಿಫಾರಸ್ಸು ಮಾಡಿ ಅನುಮೋದನೆ ನೀಡುವುದು.
- ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿ ಮಾಡಿ ವಿತ್ತೀಯ ಪ್ರಾಧಿಕಾರ ಆಗಿದ್ದಲ್ಲಿ ಮಂಜೂರಾತಿ ನೀಡುವುದು, ಇಲ್ಲವಾದಲ್ಲಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ರೇಷ್ಮೆ ಉಪನಿರ್ದೇಶಕರಿಗೆ ಸಲ್ಲಿಸಬೇಕು.

19. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲು ರೇಷ್ಮೆ ವಿಸ್ತರಣಾಧಿಕಾರಿಗಳು ಶಿಫಾರಸ್ಸಿನೊಂದಿಗೆ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು. ರೇಷ್ಮೆ ಸಹಾಯಕ ನಿರ್ದೇಶಕರು ಪರಿಶೀಲಿಸಿ ಶಿಫಾರಸ್ಸಿನೊಂದಿಗೆ ಅನುಮೋದಿಸಿ, ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಕಳುಹಿಸುವುದು. ರೇಷ್ಮೆ ವಿಸ್ತರಣಾಧಿಕಾರಿಗಳು ಫಲಾನುಭವಿಗಳಿಗೆ ಕಾರ್ಯಾದೇಶ ನೀಡುವುದು.
20. ರೇಷ್ಮೆ ಹುಳು ಸಾಕಾಣಿಕೆ ಮನೆಗೆ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ ರೇಷ್ಮೆ ಹುಳು ಸಾಕಾಣಿಕೆ ಮನೆಯ ಮೇಲೆ ವಿವರಗಳನ್ನು ಅಳವಡಿಸುವುದು.
21. ರೇಷ್ಮೆ ಹುಳು ಸಾಕಾಣಿಕೆ ಮನೆ ಅಥವಾ ವಾಸದ ಮನೆಯು ಒಂದನೇ ಮಹಡಿಯಲ್ಲಿದ್ದು/ ರೇಷ್ಮೆ ಹುಳು ಸಾಕಾಣಿಕೆ ಮನೆ ಅಥವಾ ವಾಸದ ಮನೆಯು ಕೆಳ ಮಹಡಿಯಲ್ಲಿದ್ದು, ಇಂತಹ ಪ್ರಕರಣಗಳಲ್ಲಿ ಹುಳು ಸಾಕಾಣಿಕೆ ಮನೆಗೆ ಪ್ರತ್ಯೇಕ ಪ್ರವೇಶ ದ್ವಾರ ಇದ್ದಲ್ಲಿ ಸಹಾಯಧನದ ಸವಲತ್ತನ್ನು ನೀಡಬಹುದಾಗಿದೆ.
22. ನಿಗಧಿತ ಹಿಪ್ಪುನೇರಳೆ ತೋಟದ ವಿಸ್ತೀರ್ಣದೊಳಗೆ ಹುಳು ಸಾಕಾಣಿಕೆ ಮನೆಯು ನಿರ್ಮಿತವಾಗಿದ್ದಲ್ಲಿ (1 ರಿಂದ 2 ಗುಂಟೆ ಪ್ರದೇಶದಲ್ಲಿ) ಅಂತಹ ಹುಳು ಸಾಕಾಣಿಕೆ ಮನೆಗೆ ಸಹಾಯಧನ ನೀಡುವುದು.
23. ಜಂಟಿ ಖಾತೆಗೆ ಸಂಬಂಧಪಟ್ಟಂತೆ, ಖಾತೆಯ ಇತರ ಸದಸ್ಯರ ನಿರಾಪೇಕ್ಷಣಾ ಪತ್ರವನ್ನು ಪಡೆದು ಅಂತಹ ಪ್ರಕರಣಗಳನ್ನು ಸಹಾಯಧನ ನೀಡಲು ಪರಿಗಣಿಸಬಹುದಾಗಿದೆ.
24. ಹಿಪ್ಪುನೇರಳೆ ತೋಟ ಮತ್ತು ರೇಷ್ಮೆ ಹುಳು ಸಾಕಾಣಿಕೆ ಮನೆಯ ಸ್ವತ್ತಿನ ದಾಖಲಾತಿ ಒಂದೇ ಕುಟುಂಬದ ಬೇರೆ ಬೇರೆ ಸದಸ್ಯರ ಹೆಸರಿನಲ್ಲಿ ಇದ್ದಲ್ಲಿ, ನಿರಾಪೇಕ್ಷಣಾ ಪತ್ರವನ್ನು ಪಡೆದು ಅಂತಹ ಪ್ರಕರಣಗಳನ್ನು ಸಹ ಸಹಾಯಧನ ನೀಡಲು ಪರಿಗಣಿಸಬಹುದಾಗಿದೆ.
25. 600 ಚದರ ಅಡಿ ರೇಷ್ಮೆ ಹುಳು ಸಾಕಾಣಿಕೆ ಮನೆಗೆ ಸಂಬಂಧಪಟ್ಟಂತೆ ಕನಿಷ್ಠ 18 ಅಡಿ ಅಗಲ ಇದ್ದು, ಮನೆಯ ಒಟ್ಟಾರೆ ವಿಸ್ತೀರ್ಣ 600 ಚದರ ಅಡಿ ಇದ್ದಲ್ಲಿ, ಅಂತಹ ರೇಷ್ಮೆ ಹುಳು ಸಾಕಾಣಿಕೆ ಮನೆಗಳಿಗೆ ಸಹಾಯಧನ ಸೌಲಭ್ಯ ನೀಡುವುದು.
26. 1000 ಚದರ ಅಡಿ ರೇಷ್ಮೆ ಹುಳು ಸಾಕಾಣಿಕೆ ಮನೆಗೆ ಸಂಬಂಧಪಟ್ಟಂತೆ ಕನಿಷ್ಠ 18 ಅಡಿ ಅಗಲ ಇದ್ದು, ಮನೆಯ ಒಟ್ಟಾರೆ ವಿಸ್ತೀರ್ಣ 1000 ಚದರ ಅಡಿ ಇದ್ದಲ್ಲಿ, ಅಂತಹ ರೇಷ್ಮೆ ಹುಳು ಸಾಕಾಣಿಕೆ ಮನೆಗಳಿಗೆ ಸಹಾಯಧನ ಸೌಲಭ್ಯ ನೀಡುವುದು.
27. 1000 ಚದರ ಅಡಿ ಮನೆಗೆ ಉದ್ದ ಕನಿಷ್ಠ 48 ಅಡಿ ಮತ್ತು 600 ಚದರ ಅಡಿ ಮನೆಗೆ ಉದ್ದ ಕನಿಷ್ಠ 28 ಅಡಿ ಇರಬೇಕು.
28. 1000 ಚದರ ಅಡಿ ಮತ್ತು 600 ಚದರ ಅಡಿ ಮನೆಗಳಿಗೆ ಸಹಾಯಧನ ನೀಡುವಾಗ ಎತ್ತರ ಕನಿಷ್ಠ 10 ಅಡಿ ಇರಬೇಕು.
**29.** ಹಿಂದಿನ ಸಾಲುಗಳಲ್ಲಿ ವಿವಿಧ ಯೋಜನೆಗಳಡಿ ಕಡಿಮೆ ವೆಚ್ಚದ ಶೆಡ್ ನಿರ್ಮಾಣ ಮಾಡಿ ಸಹಾಯಧನ ಸೌಲಭ್ಯವನ್ನು ಪಡೆದಿರುವಂತಹ ಫಲಾನುಭವಿಗಳು ಪ್ರಸಕ್ತ ಸಾಲಿನಲ್ಲಿ ಪಕ್ಕಾ(225/600/1000 ಚದರಡಿ) ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ ಮಾಡಿದ್ದಲ್ಲಿ, ಸಹಾಯಧನ ನೀಡಲು ಅವಕಾಶವಿರುತ್ತದೆ. ಈಗಾಗಲೇ ಕಡಿಮೆ ವೆಚ್ಚದ ರೇಷ್ಮೆ ಹುಳು ಸಾಕಾಣಿಕೆ ಶೆಡ್ ನಿರ್ಮಾಣಕ್ಕೆ ಪಡೆದಿರುವ ಸಹಾಯಧನವನ್ನು "**ಸರ್ಕಾರದ ಲೆಕ್ಕ ಶೀರ್ಷಿಕೆ 2851-00-911-0-02ಗೆ ಹಿಂಬರಿಸಿ, ಹಿಂಬರಿಸುವ ಚಲನ್‌ನಲ್ಲಿ ಕಡಿಮೆ ವೆಚ್ಚದ ರೇಷ್ಮೆ ಹುಳು ಸಾಕಾಣಿಕೆ ಶೆಡ್ ನಿರ್ಮಾಣಕ್ಕಾಗಿ ಪಡೆದ ಸರ್ಕಾರದ ಸಹಾಯಧನವನ್ನು ಹಿಂಬರಿಸುತ್ತಿರುವ ಕುರಿತು**" ಎಂದು ನಮೂದಿಸಿ ಅರ್ಜಿದಾರರು ನಿರ್ಮಾಣ ಮಾಡಿರುವ ಪಕ್ಕಾ ರೇಷ್ಮೆ ಹುಳು ಸಾಕಾಣಿಕೆ ಮನೆಯ ಪ್ರಸಕ್ತ ಪ್ರಸ್ತಾವನೆಯನ್ನು ಇಲಾಖೆಯ ಮಾರ್ಗಸೂಚಿಯನ್ವಯ ಸಹಾಯಧನ ಮಂಜೂರಾತಿ ನೀಡಲು ಪರಿಗಣಿಸುವುದು. ಕಡಿಮೆ ವೆಚ್ಚದ ರೇಷ್ಮೆ ಹುಳು ಸಾಕಾಣಿಕೆ ಶೆಡ್ ನಿರ್ಮಿಸಿ ಸಹಾಯಧನದ ಸೌಲಭ್ಯ ಪಡೆದಿರುವ ಫಲಾನುಭವಿಗಳು ಒಂದು ವೇಳೆ ಈಗಾಗಲೇ ಪಡೆದಿರುವ ಸಹಾಯಧನವನ್ನು ಹಿಂಬರಿಸಲು ಶಕ್ತರಿಲ್ಲದಿದ್ದಲ್ಲಿ ಅಂತಹ ಸಂದರ್ಭಗಳಲ್ಲಿ ಪಕ್ಕಾ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕಾಗಿ ಮಂಜೂರು ಮಾಡುವ ರಾಜ್ಯ ಪಾಲಿನ ಸಹಾಯಧನದಲ್ಲಿ ಕಟಾವುಗೊಳಿಸಿ ಉಳಿಕೆ ಸಹಾಯಧನವನ್ನು ಫಲಾನುಭವಿಗೆ ಪಾವತಿಸುವುದು.

5. Plans / Designs

Rearing house sketch for 1 acre mulberry garden
(Rearing capacity : 250 dfls)




TOTAL FLOOR AREA OF THE BUILDING : 1000 Sq.ft.

Rearing house sketch for rearing 50-100 dfls
(south zone)




TOTAL FLOOR AREA OF THE BUILDING : 600 Sq.ft.

Rearing house sketch for below 1/2 acre mulberry garden: (Rearing capacity: 50 dfls/crop)




TOTAL FLOOR AREA OF THE BUILDING : 225 Sq.ft.

## ಸಂಬಂಧಪಟ್ಟ ರೇಷ್ಮೆ ಉಪನಿರ್ದೇಶಕರು:

- ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿ ಮಾಡಿ ವಿತ್ತೀಯ ಪ್ರಾಧಿಕಾರ ಆಗಿದ್ದಲ್ಲಿ ಮಂಜೂರಾತಿ ನೀಡುವುದು, ಇಲ್ಲವಾದಲ್ಲಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ರೇಷ್ಮೆ ಜಂಟಿ ನಿರ್ದೇಶಕರಿಗೆ ಸಲ್ಲಿಸಬೇಕು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು. ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಮಂಜೂರು ಮಾಡುವುದಾದರೆ ಸಹಾಯಧನವನ್ನು ವಿತ್ತೀಯ ಪ್ರತ್ಯಾಧಿಕಾರದ ಅನ್ವಯ ಮಂಜೂರಾತಿ ನೀಡುವುದು. ಇಲ್ಲವಾದಲ್ಲಿ ಸಂಬಂಧಿಸಿದ ಜಂಟಿ ನಿರ್ದೇಶಕರಿಗೆ ಮಂಜೂರಾತಿಗಾಗಿ ಸಲ್ಲಿಸುವುದು.
- ಪ್ರಸ್ತಾವನೆ ಪರಿಶೀಲನೆ, ಮಂಜೂರಾತಿ ಹಾಗೂ ಸಹಾಯಧನ ನೀಡಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಸಂಬಂಧಿಸಿದ ರೇಷ್ಮೆ ಉಪನಿರ್ದೇಶಕರೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

## ಸಂಬಂಧಪಟ್ಟ ರೇಷ್ಮೆ ಜಂಟಿ ನಿರ್ದೇಶಕರು:

- ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು. ಸಹಾಯಧನವನ್ನು ವಿತ್ತೀಯ ಪ್ರತ್ಯಾಧಿಕಾರದ ಅನ್ವಯ ಮಂಜೂರಾತಿ ನೀಡುವುದು. ಇಲ್ಲವಾದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ರವರ ಕಛೇರಿಗೆ ಮಂಜೂರಾತಿಗಾಗಿ ಸಲ್ಲಿಸುವುದು.
- ಪ್ರಸ್ತಾವನೆ ಪರಿಶೀಲನೆ, ಮಂಜೂರಾತಿ ಹಾಗೂ ಸಹಾಯಧನ ನೀಡಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

## ಕಾರ್ಯಕ್ರಮ 3
## ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್) ನಿರ್ಮಾಣಕ್ಕೆ ಸಹಾಯಧನ:

ಹಣ್ಣಾಗಿರುವ ಹುಳುಗಳನ್ನು ವಾತಾವರಣದಲ್ಲಿ ಆಗುವ ಉಷ್ಣಾಂಶ ಮತ್ತು ಶೈತ್ಯಾಂಶಗಳ ವೈಪರೀತ್ಯಗಳಿಂದ ಕಾಪಾಡಿ ಉತ್ತಮ ಗುಣಮಟ್ಟದ ಗೂಡುಗಳನ್ನು ಕಟ್ಟುವ ಪರಿಸರ ಒದಗಿಸುವುದು ಮೌಂಟಿಂಗ್ ಹಾಲ್ ನಿರ್ಮಾಣದ ಉದ್ದೇಶ.

ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್) ನಿರ್ಮಾಣ ಮಾಡಲು ಸಹಾಯಧನದ ವಿವರಗಳು ಕೆಳಕಂಡಂತಿದೆ.

**ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್) ಪರಿಗಣಿಸಲು ಪರಿಮಿತಿಗಳು(ಪ್ಯಾರಾ ಮೀಟರ್ಸ್)**
**(ರೂ.ಲಕ್ಷಗಳಲ್ಲಿ)**

| ಹಣ್ಣು ಹುಳುವಿನ ಮನೆಯ ಉದ್ದ, ಅಗಲ, ವಿಸ್ತೀರ್ಣ (ಚದರ ಅಡಿಗಳಲ್ಲಿ) | ಮನೆಯ ಛಾವಣಿ ಮಾದರಿ | ಸಹಾಯಧನ | ಹಿಪ್ಪುನೇರಳೆ ಕ್ಷೇತ್ರ |
|---|---|---|---|
| 20 X 30 = 600 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.180 | 1 ಎಕರೆ |
| 20 X 50 = 1000 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.300 | 1.5 ಎಕರೆ |
| 25 X 50 = 1250 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.375 | 2 ಎಕರೆ |
| 30 X 50 = 1500 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.450 | 2.5 ಎಕರೆ |
| 30 X 60 = 1800 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.50ಕ್ಕೆ ಮಿತಿಗೊಳಿಸಿದೆ | 3 ಎಕರೆ |

ಎತ್ತರ ಕನಿಷ್ಟ 10 ಅಡಿ(12 ಅಡಿಗಿಂತ ಹೆಚ್ಚಿರುವುದು ಸೂಕ್ತ ವಾತಾವರಣ ನಿರ್ವಹಣೆಗೆ ಸಹಕಾರಿಯಲ್ಲ.)

1. ಉದ್ದ – ಪೂರ್ವ – ಪಶ್ಚಿಮವಾಗಿಯೂ, ಅಗಲ – ಉತ್ತರ – ದಕ್ಷಿಣವಾಗಿಯೂ ಇರುವುದು ಅವಶ್ಯಕ.
2. ಮೂರು ಅಡಿ ಎತ್ತರದ ಗೋಡೆ ಕಟ್ಟಿ, ಅದರ ನಂತರದ ಎತ್ತರಕ್ಕೆ ಗಟ್ಟಿ ಚಿಕನ್ ಮೆಷ್ ತಡಿಕೆ ಇರಬೇಕು.
3. ಒಂದೇ ಬದಿಗೆ ಇಳಿಜಾರು ಮೇಲ್ಛಾವಣಿ(ಎ.ಸಿ ಶೀಟ್ ಅಥವಾ ಹೆಂಚು), ಆದರೆ, ಉತ್ತರದಲ್ಲಿ ಅತಿ ಹೆಚ್ಚು ಎತ್ತರವಿದ್ದು, ದಕ್ಷಿಣದಲ್ಲಿ ಅತಿ ಕಡಿಮೆ ಎತ್ತರ ಇರುವಂತೆ ಇಳಿಜಾರು ಆಗಿರಬೇಕು.
4. ಮಳೆಯ ನೀರು ಒಳಗೆ ಬರದಂತೆ ಕಾಪಾಡಲು(ವಾಟರ್ ಪ್ರೂಫ್) ನೀರಿನ ಹರಿಯುವಿಕೆ ತಡೆಯುವ ಲ್ಯಾಮಿನೇಟೆಡ್ ಹೆಚ್.ಡಿ.ಪಿ.ಇ ಶೀಟ್‌ನಿಂದ ವೈರ್ ಮೆಷ್ ಅಳವಡಿಕೆಯನ್ನು ಮುಚ್ಚಲು ಅವಕಾಶ ಕಲ್ಪಿಸುವುದು.
5. ಗಟ್ಟಿ ನೆಲಹಾಸು – ಸಿಮೆಂಟ್ ಅಥವಾ ಕಲ್ಲಿನ ಹಾಸು ಉಪಯೋಗಿಸಿ ಯಾವುದೇ ಬಿರುಕುಗಳು ಇಲ್ಲದಂತೆ ನೆಲಹಾಸನ್ನು ನಿರ್ಮಿಸುವುದು.
6. ನೈರುತ್ಯ ದಿಕ್ಕಿನಲ್ಲಿ ಉಷ್ಣಾಂಶ ಹೆಚ್ಚಿದ್ದು, ಇದಕ್ಕೆ ಹೋಲಿಸಿದಲ್ಲಿ ಈಶಾನ್ಯ ದಿಕ್ಕಿನಲ್ಲಿ ಉಷ್ಣಾಂಶವು ಕಡಿಮೆ ಇರುತ್ತದೆ. ಆದುದರಿಂದ ದಕ್ಷಿಣ ಹಾಗೂ ಪಶ್ಚಿಮ ದಿಕ್ಕುಗಳಲ್ಲಿ ನೆರಳನ್ನು ನೀಡುವ ಮರಗಳನ್ನು ಬೆಳೆಸುವುದು ಸೂಕ್ತವಾಗಿರುತ್ತದೆ.

7. ವೈರ್ ಮೆಷ್ ಬದಲಿಗೆ ಪೂರ್ಣವಾಗಿ ಇಟ್ಟಿಗೆಯ ಗೋಡೆಯಿಂದ ಹಣ್ಣು ಹುಳುವಿನ ಮನೆ(ಮೌಂಟೆಂಗ್ ಹಾಲ್) ನಿರ್ಮಾಣ ಮಾಡಿದಲ್ಲಿ ಗೂಡು ಕಟ್ಟುವಿಕೆಗೆ ಬೇಕಾದ ಹವಾಮಾನ ಕಲ್ಪಿಸಲು, ಗೋಡೆಗಳ ಮೂಲಕ ಶೇ.65ರಷ್ಟು ಗಾಳಿ ಸಂಚಾರಕ್ಕಾಗಿ ಕಿಟಕಿಗಳನ್ನು ಅಳವಡಿಸುವುದು. ಕಟ್ಟಿದ ಭಾಗ ಶೇಕಡಾ 35ಕ್ಕಿಂತ ಹೆಚ್ಚಿಲ್ಲದೇ, ಕಿಟಕಿ – ವಾತಾಯನ ವ್ಯವಸ್ಥೆಗೆ ಶೇಕಡಾ 65ರಷ್ಟು ತೆರೆದ ಭಾಗಗಳಿರಬೇಕು.
8. ರೇಷ್ಮೆ ಬೆಳೆಗಾರರು ತಮ್ಮ ಹೆಸರಿನಲ್ಲಿ ಮೇಲೆ ವಿವರಿಸಿರು ರೀತ್ಯಾ ಕನಿಷ್ಠ ವಿಸ್ತೀರ್ಣದಷ್ಟು ಹಿಪ್ಪುನೇರಳೆ ತೋಟ ಹೊಂದಿರಬೇಕು. ಆ ಸರ್ವೆ ನಂಬರು(ಗಳ) ಪಹಣಿಯನ್ನು ಒದಗಿಸಬೇಕು.
9. ಹಣ್ಣು ಹುಳುವಿನ ಮನೆ(ಮೌಂಟೆಂಗ್ ಹಾಲ್) ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ಪತ್ರದ ಮೂಲ ಪ್ರತಿ ಒದಗಿಸಬೇಕು.
10. ದಾಖಲಾತಿಗಳನ್ನು ಬ್ಯಾಂಕಿಗೆ ಸಲ್ಲಿಸಿದ್ದಲ್ಲಿ ಮೂಲ ದಾಖಲಾತಿಗಳು ಬ್ಯಾಂಕಿನಲ್ಲಿ ಇರುವ ಬಗ್ಗೆ ಬ್ಯಾಂಕಿನವರಿಂದ ಪತ್ರ ಸಲ್ಲಿಸುವುದು.
11. ರೇಷ್ಮೆ ಬೆಳೆಗಾರರು ರೇಷ್ಮೆ ಹುಳು ಸಾಕಾಣಿಕೆ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.
12. ರೇಷ್ಮೆ ಹಣ್ಣು ಹುಳುವಿನ ಮನೆಯನ್ನು(ಮೌಂಟೆಂಗ್ ಹಾಲ್) ಸಾಧ್ಯವಾದಷ್ಟು ಮಟ್ಟಿಗೆ ಹುಳು ಸಾಕುವ ಮನೆಯ ಹತ್ತಿರದಲ್ಲೇ ನಿರ್ಮಿಸಲು ಉತ್ತೇಜನ ಮತ್ತು ಮಾರ್ಗದರ್ಶನ ನೀಡುವುದು.
13. ಮೌಂಟೆಂಗ್ ಹಾಲ್ ನಿರ್ಮಿಸಿಕೊಂಡ ನಂತರ ಸಹಾಯಧನ ಪಡೆಯಲು ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು ಹಾಗೂ ರೂ.50/-ರ ಛಾಪಾ ಕಾಗದದ ಮೇಲೆ 3 ವರ್ಷಗಳವರೆಗೆ ಮೌಂಟೆಂಗ್ ಹಾಲ್ ಅನ್ನು ಅದೇ ಉದ್ದೇಶಕ್ಕಾಗಿ ಬಳಕೆ ಮಾಡುವುದಾಗಿ ಮುಚ್ಚಳಿಕೆ ಬರೆದುಕೊಡಬೇಕು.
14. ಮೌಂಟೆಂಗ್ ಹಾಲ್ ನಿರ್ಮಾಣದ ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ **ಖಜಾನೆ-2/ಡಿಬಿಟಿ** ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
15. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ/ ಅಧಿಕಾರಿಗಳು ಮೌಂಟೆಂಗ್ ಹಾಲ್ ಮುಂದೆ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
16. ಇಲಾಖೆಯು ನಿಗದಿ ಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು/ ದೃಢೀಕರಣಗಳಿರಬೇಕು.
17. ಮೌಂಟೆಂಗ್ ಹಾಲ್ ನಿರ್ಮಾಣಕ್ಕೆ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ ಮೌಂಟೆಂಗ್ ಹಾಲ್ ಕಟ್‌ಟಡದ ಮೇಲೆ ವಿವರಗಳನ್ನು ಅಳವಡಿಸುವುದು.
18. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

## ತಾಂತ್ರಿಕ ಸೇವಾ ಕೇಂದ್ರದ ವಲಯಾಧಿಕಾರಿಗಳು:

- ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಪಡೆಯುವುದು ಹಾಗೂ ಅರ್ಜಿಯಲ್ಲಿನ ಫಲಾನುಭವಿಗಳ ಮಾಹಿತಿಯ ನೈಜತೆಯನ್ನು ಪರಿಶೀಲಿಸಿ ಆಯ್ಕೆಗೆ ಶಿಫಾರಸ್ಸು ಮಾಡುವ ಜವಾಬ್ದಾರಿಯು ವಲಯಾಧಿಕಾರಿಯದ್ದಾಗಿರುತ್ತದೆ.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ಸದರಿ ಬೆಳೆಗಾರರು ಈ ಹಿಂದೆ ಇಲಾಖೆಯಲ್ಲಿ ಅಥವಾ ಬೇರೆ ಇಲಾಖೆಯ ಯೋಜನೆಗಳಡಿ ಸಹಾಯಧನ ಸೌಲಭ್ಯವನ್ನು ಪಡೆದಿಲ್ಲದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪ್ರಸ್ತಾವನೆಯನ್ನು ತಯಾರಿಸಿ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಸ್ತಾವನೆ ತಯಾರಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ವಲಯಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

## ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು

- ವಲಯಾಧಿಕಾರಿಗಳು ಸಲ್ಲಿಸಿರುವ ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸುವುದು.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೋಂದಾಯಿಸಿಕೊಳ್ಳಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸುವುದು. ಜೇಷ್ಠತೆ ಆಧಾರದಲ್ಲಿ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು.

- ಅರ್ಹವಾಗುದಾದಲ್ಲಿ, ಬೆಳೆಗಾರರ ಅರ್ಜಿಯ ಅಡಕಗಳನ್ನು ಸೂಕ್ತವಾಗಿ ಪರಿಶೀಲಿಸಿ, ದೃಢೀಕರಿಸಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

## ಸಂಬಂಧಪಟ್ಟ ರೇಷ್ಮೆ ಸಹಾಯಕ ನಿರ್ದೇಶಕರು

- ಹಣ್ಣು ಹುಳುವಿನ ಮನೆಗೆ(ಮೌಂಟಿಂಗ್ ಹಾಲ್) ಭೇಟಿ ನೀಡಿ ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿ ಮಾಡಿ ವಿತ್ತೀಯ ಪ್ರಾಧಿಕಾರ ಆಗಿದ್ದಲ್ಲಿ ಮಂಜೂರಾತಿ ನೀಡುವುದು, ಇಲ್ಲವಾದಲ್ಲಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ರೇಷ್ಮೆ ಉಪನಿರ್ದೇಶಕರಿಗೆ ಸಲ್ಲಿಸಬೇಕು.

## ಸಂಬಂಧಪಟ್ಟ ರೇಷ್ಮೆ ಉಪನಿರ್ದೇಶಕರು

- ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್)ಗೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ, ಹಣ್ಣು ಹುಳುವಿನಮನೆ(ಮೌಂಟಿಂಗ್ ಹಾಲ್) ಸಹಾಯಧನವನ್ನು ವಿತ್ತೀಯ ಪ್ರತ್ಯಾಧಿಕಾರದ ಅನ್ವಯ ಮಂಜೂರಾತಿ ನೀಡುವುದು.

**ಕಾರ್ಯಕ್ರಮ: 4**

## ನೋಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆಗೆ – ಚಾಕಿ ತೋಟ ಸ್ಥಾಪನೆ/ ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕೆ ಸಲಕರಣೆ ಖರೀದಿಗೆ ಸಹಾಯಧನ

ರೇಷ್ಮೆ ಬೆಳೆ ಯಶಸ್ಸು, ಚಾಕಿ ಹುಳು ಸಾಕಾಣಿಕೆ ನಿರ್ವಹಣೆಯನ್ನು ಆಧರಿಸಿದೆ. ಅಸಮರ್ಪಕ ಚಾಕಿ ನಿರ್ವಹಣೆ ಬೆಳೆ ನಾಶಕ್ಕೆ ದಾರಿಯಾಗುವುದೆಂಬ ಕಾರಣಕ್ಕೆ ರೇಷ್ಮೆ ಬೆಳೆಗಾರರಿಗೆ ವೈಯಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು(NGO)/ಸ್ವಸಹಾಯ ಗುಂಪುಗಳು(SHG) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO)ಗಳಿಗೂ ಸ್ವಂತ ಅಥವಾ ಗುತ್ತಿಗೆ ಆಧಾರದ ಮೇಲೆ(ಕನಿಷ್ಠ 10 ವರ್ಷಗಳವರೆಗೆ) ಜಮೀನಿನಲ್ಲಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಲು ಅವಕಾಶ ಕಲ್ಪಿಸಿದೆ. ಇದರ ಘಟಕ ದರ ರೂ.13.00 ಲಕ್ಷಗಳು. ಸಹಾಯಧನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಘಟಕ ದರ | ಸಹಾಯಧನ(ಶೇ.75) |
|---|---|
| 13.00 | 9.75 |

ಕೇಂದ್ರ ರೇಷ್ಮೆ ಮಂಡಳಿಯು ಸಿಲ್ಕ್ ಸಮಗ್ರ-2ರಡಿ ಘಟಕ ದರ/ಸಹಾಯಧನಗಳನ್ನು ನೀಡಿರುತ್ತದೆ. ಇಲಾಖೆಯಲ್ಲಿಯೂ ಸಹ ಸದರಿ ಘಟಕ ದರ/ಸಹಾಯಧನಗಳನ್ನು ಅಳವಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಕ್ಕೆ ಸಹಾಯಧನ ಪಡೆಯಲು ಇಚ್ಛಿಸುವವರು ಕೇಂದ್ರ ರೇಷ್ಮೆ ಮಂಡಳಿಯ ಕಾಯಿದೆ ಪ್ರಕಾರ ದ್ವಿತಳಿ ಚಾಕಿ ಸಾಕಾಣಿಕೆ ಮಾಡಲು ನೋಂದಾಯಿತರಾಗಿರುವ

ಬಗ್ಗೆ ದೃಢೀಕರಣ ನೀಡಬೇಕು. ಚಾಕಿ ಸಾಕಾಣಿಕೆ ಕೇಂದ್ರವು ಪ್ರೌಢ ಹುಳು ಸಾಕಾಣಿಕೆ ಮನೆಗಳಿಂದ ದೂರವಿರಬೇಕು, ಚಾಕಿ ತೋಟದಲ್ಲಿಯೇ ಕಟ್ಟಡವಿರಬೇಕು ಮತ್ತು ಸಿ.ಡಿ.ಪಿ ಮ್ಯಾನುಯಲ್ ಪ್ರಕಾರ ನಿಗದಿತ ಮಾದರಿ ನಕ್ಷೆಯಂತಿರಬೇಕು(ನಕ್ಷೆ ಅಡಕಗೊಳಿಸಿದೆ).

2. ನೋಂದಾಯಿತ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಸಹಾಯಧನ ಕಾರ್ಯಕ್ರಮದಡಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಹೊಂದಿಕೊಂಡಿರುವಂತೆ ರೇಷ್ಮೆ ಮೊಟ್ಟೆ ಪರಿಪಾಕಣೆ ಕೊಠಡಿ ನಿರ್ಮಿಸಿರುವ ಪ್ರಕರಣಗಳು ಮತ್ತು ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಕನಿಷ್ಠ ಎತ್ತರ 10 ಅಡಿ ಇದ್ದಲ್ಲಿ ಸಹಾಯಧನ ನೀಡಲು ಪರಿಗಣಿಸಬಹುದಾಗಿದೆ.
3. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಪ್ರಾರಂಭಿಸುವವರು ವೈಯಕ್ತಿವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು(NGO)/ಸ್ವಸಹಾಯ ಗುಂಪುಗಳು(SHG-ಕನಿಷ್ಠ 10 ಜನ ಸದಸ್ಯರುಳ್ಳ) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO), FPOಗಳು ಸ್ವಂತ ಅಥವಾ ಗುತ್ತಿಗೆ ಆಧಾರದಲ್ಲಿ (ಕನಿಷ್ಠ 10 ವರ್ಷಗಳವರೆಗೆ) ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಲು ಮುಂದಾಗುವವರ ಅರ್ಜಿಗಳನ್ನು ವಲಯಾಧಿಕಾರಿಗಳು ಸಂಗ್ರಹಿಸಿ ಶಿಫಾರಸ್ಸು ಮಾಡಿ ಸಹಾಯಧನಕ್ಕೆ ಪರಿಗಣಿಸಲು ತಾಂತ್ರಿಕ ಸೇವಾ ಕೇಂದ್ರಗಳಿಗೆ ಸಲ್ಲಿಸಬೇಕು.
4. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಪ್ರಾರಂಭಿಸುವವರು ವೈಯಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು(NGO)/ಸ್ವಸಹಾಯ ಗುಂಪುಗಳು(SHG-ಕನಿಷ್ಠ 10 ಜನ ಸದಸ್ಯರುಳ್ಳ) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO), FPOಗಳು ಸ್ವಂತ ಅಥವಾ ಗುತ್ತಿಗೆ ಆಧಾರದಲ್ಲಿ (ಕನಿಷ್ಠ 10 ವರ್ಷಗಳವರೆಗೆ) ಚಾಕಿ ಸಾಕಾಣಿಕೆ ಕೈಗೊಳ್ಳಲು ಮುಂದಾಗುವವರಿಗೆ ರಾಜ್ಯ/ಕೇಂದ್ರ ರೇಷ್ಮೆ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಹೊಂದಿದ ಬಗ್ಗೆ ದೃಢೀಕರಣವಿರಬೇಕು.
5. ಗುರುತಿಸಿದ ಕ್ಲಸ್ಟರ್‌ಗಳಲ್ಲಿ ಸ್ಥಾಪಿಸಿದ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರಗಳಿಗೆ ಸಹಾಯಧನ ನೀಡಲು ಪ್ರಾಶಸ್ತ್ಯತೆ ನೀಡಲಾಗುವುದು.
6. ಫಲಾನುಭವಿಗೆ ಕನಿಷ್ಠ 2 ಎಕರೆ ಸ್ವಂತ ಅಥವಾ ಗುತ್ತಿಗೆ ಆಧಾರದ ಮೇಲೆ ಪಡೆದ ನೀರಾವರಿಯುಳ್ಳ ಹಿಪ್ಪುನೇರಳೆ ಚಾಕಿ ತೋಟವಿದ್ದು, ಚಾಕಿ ತೋಟಕ್ಕೆ ಕಡ್ಡಾಯವಾಗಿ ಹನಿ ನೀರಾವರಿ ಅಳವಡಿಸಿರಬೇಕು, ಚಾಕಿ ತೋಟದ ಜಮೀನು ಸಮತಟ್ಟಾಗಿದ್ದು ಫಲವತ್ತಾಗಿರಬೇಕು. ಸಾವಯವ ಗೊಬ್ಬರಗಳನ್ನು ಹೆಚ್ಚಾಗಿ ಬಳಸಬೇಕು. ಮರಳು ಮಿಶ್ರಿತ ಕೆಂಪು ಮಣ್ಣು ಇರಬೇಕು.
7. ವಾರ್ಷಿಕ 1.50 ರಿಂದ 1.60 ಲಕ್ಷ ದ್ವಿತಳಿ ಮೊಟ್ಟೆ ಚಾಕಿ ಕಟ್ಟುವ ಸಾಮರ್ಥ್ಯತೆಯಿರಬೇಕು. ಪ್ರತಿ ತಂಡಕ್ಕೆ 5 ಸಾವಿರ ಮೊಟ್ಟೆಗಳಂತೆ ವರ್ಷಕ್ಕೆ 32 ತಂಡಗಳಲ್ಲಿ, ಪ್ರತಿ ತಂಡದಿಂದ ತಂಡಕ್ಕೆ 10 ದಿನಗಳ ಅವಧಿಯಂತೆ ಚಾಕಿ ಮಾಡುವ ಬಗ್ಗೆ ಸಾಮರ್ಥ್ಯ ಇರಬೇಕು.
8. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆಗೆ ಆರ್ಥಿಕ ನೆರವನ್ನು ಬ್ಯಾಂಕುಗಳಿಂದ ಪಡೆಯಬಹುದು.
9. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಿದ ನಂತರ ತಾಂತ್ರಿಕತೆ ಉನ್ನತೀಕರಣಕ್ಕಾಗಿ 2 ವರ್ಷಕ್ಕೊಮ್ಮೆಯಾದರೂ ಒಂದು ವಾರದ ಅವಧಿಯ ಪುನಃಶ್ಚೇತನ ತರಬೇತಿ ಪಡೆಯಬೇಕು. ಪುನಃಶ್ಚೇತನ ತರಬೇತಿ ಪಡೆಯದಿದ್ದಲ್ಲಿ, ನೋಂದಣಿಯನ್ನು ನವೀಕರಿಸಲಾಗುವುದಿಲ್ಲ.
10. ರೂ.50/-ರ ಛಾಪಾ ಕಾಗದದ ಮೇಲೆ 10 ವರ್ಷಗಳವರೆಗೆ ಚಾಕಿ ತೋಟ, ಚಾಕಿ ಸಾಕಾಣಿಕೆ ಕಟ್ಟಡ ಹಾಗೂ ಚಾಕಿ ಸಾಕಾಣಿಕಾ ಸಲಕರಣೆಗಳನ್ನು ಉದ್ದೇಶಿತ ದ್ವಿತಳಿ ಚಾಕಿ ಹುಳು ಸಾಕಾಣಿಕೆ ಮಾಡಲು ಮಾತ್ರ ಉಪಯೋಗಿಸುವ ಬಗ್ಗೆ ಮುಚ್ಚಳಿಕೆ ಬರೆದುಕೊಡಬೇಕು.
11. ಚಾಕಿ ಸಾಕಾಣಿಕೆ ಕೇಂದ್ರದಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಕಾಯಿದೆಯನ್ವಯ ಕನಿಷ್ಠ 10 ವರ್ಷಗಳವರೆಗೆ ದಾಖಲೆ, ದಸ್ತಾವೇಜು ನಿರ್ವಹಿಸತಕ್ಕದ್ದು ಹಾಗೂ ಪರಿವೀಕ್ಷಣೆಗೆ ಅವಶ್ಯವಿದ್ದಲ್ಲಿ ಸದರಿ ದಾಖಲೆಗಳನ್ನು ಒದಗಿಸತಕ್ಕದ್ದು.
12. ಚಾಕಿ ಸಾಕಾಣಿಕಾ ಕೇಂದ್ರದಲ್ಲಿ ಪ್ರತಿವಾರ/ಪ್ರತಿ ಮಾಹೆಯಲ್ಲಿ ಚಾಕಿ ಮಾಡಿ ವಿತರಿಸುವ ವಿವರಗಳನ್ನು ನಿಗದಿತ ನಮೂನೆಗಳಲ್ಲಿ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸಬೇಕು.
13. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರದ ಚಾಕಿ ತೋಟದಲ್ಲಿ ಶಿಫಾರಸ್ಸು ಮಾಡಿದ ತಳಿ, ಸ್ವಳಾವಕಾಶ ಹಾಗೂ ಅಂತರ ಬೇಸಾಯಗಳನ್ನು ನಿರ್ವಹಿಸತಕ್ಕದ್ದು.
14. ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರದಲ್ಲಿ, ಚಾಕಿ ತೋಟ ಸ್ಥಾಪನೆ, ಕಟ್ಟಡ ನಿರ್ಮಾಣ ಪೂರ್ಣಗೊಂಡಿದ್ದು, ನಿಗದಿತ ಪ್ರಮಾಣದಲ್ಲಿ ಸಲಕರಣೆಗಳ ಖರೀದಿ ಮಾಡಿ, ಕನಿಷ್ಠ 3 ತಿಂಗಳ

ಅವಧಿಯಲ್ಲಿ ದ್ವಿತಳಿ ಚಾಕಿ ಹುಳು ವಿತರಣೆ ಮಾಡಿದ್ದಲ್ಲಿ ಮಾತ್ರ ಸಹಾಯಧನ ಮಂಜೂರಾತಿಗಾಗಿ ಪರಿಗಣಿಸಲಾಗುವುದು. ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವುದು. ಸಲಕರಣೆಗಳು ನಿಗದಿತ ಪ್ರಮಾಣದಲ್ಲಿ ಖರೀದಿಸಿರಬೇಕು, ಕಡಿಮೆ ಇದ್ದಲ್ಲಿ ಸಹಾಯಧನ ಮಂಜೂರಾತಿಗೆ ಪರಿಗಣಿಸಲಾಗುವುದಿಲ್ಲ.

15. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ/ಅಧಿಕಾರಿಗಳು/ ಚಾಕಿ ತೋಟ/ಚಾಕಿ ಹುಳು ಸಾಕಾಣಿಕೆ ಕಟ್ಟಡ/ಸಲಕರಣೆ ಮುಂದೆ ನಿಂತಿರುವ ಛಾಯಾಚಿತ್ರ ತೆಗೆದು ಸಲ್ಲಿಸಬೇಕು.
16. ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ಸಹಾಯಧನವನ್ನು ಅವರ ಬ್ಯಾಂಕ್ ಖಾತೆಗೆ **ಖಜಾನೆ-2/ಡಿಬಿಟಿ** ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
17. ಇಲಾಖೆಯು ನಿಗದಿ ಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು/ ದೃಢೀಕರಣಗಳಿರಬೇಕು.
18. ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ ಚಾಕಿ ತೋಟಕ್ಕೆ ಫಲಕದಲ್ಲಿ/ಚಾಕಿ ಸಾಕಾಣಿಕೆ ಕೇಂದ್ರದ ಕಟ್ಟಡದ ಮೇಲೆ ವಿವರಗಳನ್ನು ಬರೆಯಿಸಬೇಕು/ಚಾಕಿ ಸಾಕಾಣಿಕೆ ಸಲಕರಣೆಗಳ ಮೇಲೆ engrave ಮಾಡಿಸುವುದು.
19. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

## ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಸಹಾಯಧನ ನೀಡಲು ಐಟಂವಾರು ಪರಿಗಣಿಸಬೇಕಾದ ವಿವರಗಳನ್ನು ಕೆಳಗೆ ನಮೂದಿಸಿದೆ

| ಕ್ರ. ಸಂ. | ಐಟಂ/ವಿವರಗಳು | ಸಹಾಯಧನಕ್ಕೆ ಪರಿಗಣಿಸಬೇಕಾದ ಕನಿಷ್ಠ ಪ್ರಮಾಣ |
|---|---|---|
| 1 | ಹಿಪ್ಪುನೇರಳೆ ತೋಟ ಸ್ಥಾಪನೆ ಮತ್ತು ನಿರ್ವಹಣೆ(ಶಿಫಾರಸ್ಸು ಮಾಡಿರುವ ಹಿಪ್ಪುನೇರಳೆ ತಳಿಯ ಬಿತ್ತನೆ ಕಡ್ಡಿಗಳು/ನರ್ಸರಿ ಸಸಿಗಳು, ಕೊಟ್ಟಿಗೆ ಗೊಬ್ಬರ, ರಸಾಯನಿಕ ಗೊಬ್ಬರ, ಜೈವಿಕ ಗೊಬ್ಬರ ವೆಚ್ಚ ಸೇರಿದೆ) | 2.00 ಎಕರೆ |
| 2 | ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆ (Micro Irrigation) | 2.00 ಎಕರೆ |
| 3 | ಚಾಕಿ ಸಾಕಾಣಿಕಾ ಕಟ್ಟಡ 5000 ರೋಗ ರಹಿತ ಮೊಟ್ಟೆಗಳ ಚಾಕಿ ಕಟ್ಟುವುದಕ್ಕೆ(42' x 30' x 16' ಎತ್ತರ) | 1 ಕಟ್ಟಡ |
| 4 | ಚಾಕಿ ಸಾಕಾಣಿಕಾ ಸಲಕರಣೆಗಳು | ಪ್ರಮಾಣ |
| 5 | ಪ್ಲಾಸ್ಟಿಕ್ ರೇರಿಂಗ್ ತಟ್ಟೆಗಳು | 400 |
| 6 | ರೇರಿಂಗ್ ಸ್ಟಾಂಡ್ ವಿತ್ ಜಿಐ ಪೈಪ್ಸ್/ಐರನ್ ಆಂಗಲ್ | 4 |
| 7 | ಇನ್‌ಕ್ಯೂಬೇಷನ್ ಫ್ರೇಮ್ಸ್ | 100 |
| 8 | ಲೀಫ್ ಚಾಪಿಂಗ್ ಮೆಷೀನ್ | 1 |
| 9 | ಹ್ಯುಮಿಡಿಫೈಯರ್(ಹೆವಿ ಡ್ಯೂಟಿ) | 1 |
| 10 | ಹೀಟರ್ | 2 |
| 11 | ಪವರ್ ಸ್ಪ್ರೇಯರ್ | 1 |
| 12 | ಸೋಂಕು ನಿವಾರಕ ಮಾಸ್ಕ್ | 1 |
| 13 | ಮೈಕ್ರೋಸ್ಕೋಪ್ | 1 |
| 14 | ವೆಟ್ ಅಂಡ್ ಡ್ರೈ ಬಲ್ಬ್ ಥರ್ಮಾಮೀಟರ್ | 1 |
| 15 | ಬೆಡ್ ಕ್ಲೀನಿಂಗ್ ನೆಟ್ಸ್ | 1200 |
| 16 | ಪ್ಲಾಸ್ಟಿಕ್ ಟ್ರೇ ವಾಷಿಂಗ್ ಮೆಷಿನ್ | 1 |

| | | |
|---|---|---|
| 17 | ಚಾಕಿ ಡಸ್ಟಿಂಗ್ ಮೆಷಿನ್ | 1 |
| 18 | 1 ಕೆ.ವಿ ಜನರೇಟರ್ | 1 |
| 19 | ಇನ್‌ಕ್ಯೂಬೇಷನ್ ಚೇಂಬರ್ | 1 |

**ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಸಹಾಯಧನ ಮಂಜೂರು ಮಾಡಲಾಗುವುದು**

1. ಮೇಲೆ ತಿಳಿಸಲಾದ ಐಟಂಗಳಿಗೆ ತೆರಿಗೆ ಮತ್ತು ಸಾಗಾಣಿಕಾ ವೆಚ್ಚ ಹೊರತು ಪಡಿಸಿ ಉಳಿದ ಮೊತ್ತಕ್ಕೆ ಸಹಾಯಧನ ನೀಡಲಾಗುವುದು.
2. 2021-22ನೇ ಸಾಲಿನ ಹಾಗೂ ನಂತರದ ಪ್ರಸ್ತಾವನೆಗಳಿಗೆ ಪ್ರಸ್ತುತ ನಿಗದಿ ಪಡಿಸಿರುವ ಘಟಕ ದರ ಅನ್ವಯಿಸುವುದು. 2021-22ನೇ ಸಾಲಿಗೂ ಹಿಂದಿನ ವರ್ಷಗಳಲ್ಲಿ ಸಹಾಯಧನ ಪಡೆದಿರುವ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಈ ಯೋಜನೆಯಲ್ಲಿ ಸಹಾಯಧನ ನೀಡಲು ಅವಕಾಶವಿರುವುದಿಲ್ಲ.
3. ಚಾಕಿ ತೋಟ ಸ್ಥಾಪನೆ/ನಿರ್ವಹಣೆ, ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕಾ ಸಲಕರಣೆ ಖರೀದಿ ಸೇರಿದಂತೆ ಮೇಲೆ ನಮೂದಿಸಿರುವ ಎಲ್ಲಾ ಐಟಂಗಳನ್ನು ಹೊಂದಿರುವ ಮೂರು ಘಟಕಗಳಿಗೆ ಸಹಾಯಧನ ಮಂಜೂರಾತಿಗಾಗಿ ಒಟ್ಟಾಗಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಮಾತ್ರ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು ಹಾಗೂ ಮೂರು ಘಟಕಗಳಿಗೆ ಪ್ರತ್ಯೇಕವಾಗಿ ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲ.
4. ಸಹಾಯಧನ ಪಡೆದ ನಂತರ ನಿಗದಿ ಮಾಡಲಾದ ಪ್ರಮಾಣದಲ್ಲಿಯೇ ಚಾಕಿ ಕಟ್ಟಬೇಕು.

**ರೇಷ್ಮೆ ಇಲಾಖೆಯ ಅಧಿಕಾರಿಗಳು ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಸಹಾಯಧನ ನೀಡಲು ಪಾಲಿಸಬೇಕಾದ ಅಂಶಗಳು:**

**ತಾಂತ್ರಿಕ ಸೇವಾ ಕೇಂದ್ರದ ವಲಯಾಧಿಕಾರಿಗಳು:**

- ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಪಡೆಯುವುದು ಹಾಗೂ ಅರ್ಜಿಯಲ್ಲಿನ ಫಲಾನುಭವಿಗಳ ಮಾಹಿತಿಯ ನೈಜತೆಯನ್ನು ಪರಿಶೀಲಿಸಿ ಆಯ್ಕೆಗೆ ಶಿಫಾರಸ್ಸು ಮಾಡುವ ಜವಾಬ್ದಾರಿಯು ವಲಯಾಧಿಕಾರಿಯದ್ದಾಗಿರುತ್ತದೆ.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ಸದರಿ ಬೆಳೆಗಾರರು ಈ ಹಿಂದೆ ಇಲಾಖೆಯಲ್ಲಿ ಅಥವಾ ಬೇರೆ ಇಲಾಖೆಯ ಯೋಜನೆಗಳಡಿ ಸಹಾಯಧನ ಸೌಲಭ್ಯವನ್ನು ಪಡೆದಿಲ್ಲದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪ್ರಸ್ತಾವನೆಯನ್ನು ತಯಾರಿಸಿ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಸ್ತಾವನೆ ತಯಾರಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ವಲಯಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು:**

- ವಲಯಾಧಿಕಾರಿಗಳು ಸಲ್ಲಿಸಿರುವ ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸುವುದು.
- ಈಗಾಗಲೇ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಿ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಜೇಷ್ಠತೆ ಆಧಾರದಲ್ಲಿ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು.
- ಹೊಸದಾಗಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಫಲಾನುಭವಿಗಳು ಅರ್ಜಿ ನೀಡಿದ್ದಲ್ಲಿ ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೋಂದಾಯಿಸಿಕೊಳ್ಳುವುದು.
- ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ನೀಡಿರುವ ಅರ್ಜಿಯನ್ನು ಪರಿಶೀಲಿಸಿ, ಅರ್ಹವಿದ್ದಲ್ಲಿ ಅರ್ಜಿಯೊಂದಿಗಿನ ಅಡಕಗಳನ್ನು ದೃಢೀಕರಿಸಬೇಕು.
- ನಮೂನೆಯಲ್ಲಿ ಸ್ಥಳದ ಮಹಜರ್ ಜರುಗಿಸಿ, ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

**ಸಂಬಂಧಪಟ್ಟ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು**

- ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ನೀಡಿರುವ ಅರ್ಜಿಯನ್ನು ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿ ಮಾಡಿ ರೇಷ್ಮೆ ಉಪನಿರ್ದೇಶಕರಿಗೆ ಮಂಜೂರಾತಿಗಾಗಿ ಸಲ್ಲಿಸುವುದು.

**ಸಂಬಂಧಪಟ್ಟ ರೇಷ್ಮೆ ಉಪನಿರ್ದೇಶಕರು**

- ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ಸಹಾಯಧನ ಮಂಜೂರಾತಿಗೆ ಸಂಬಂಧಿಸಿದ ಜಂಟಿ ನಿರ್ದೇಶಕರಿಗೆ ಸಲ್ಲಿಸುವುದು.

**ಸಂಬಂಧಪಟ್ಟ ರೇಷ್ಮೆ ಜಂಟಿ ನಿರ್ದೇಶಕರು**

- ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ/ಅಧಿಕಾರಿಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ರೇಷ್ಮೆ ನಿರ್ದೇಶನಾಲಯಕ್ಕೆ ಮೂರು ಘಟಕಗಳ ಮಂಜೂರಾತಿಗಾಗಿ ಒಟ್ಟಾರೆ ಪ್ರಸ್ತಾವನೆಯನ್ನು ಸಲ್ಲಿಸುವುದು.

**ಕಾರ್ಯಕ್ರಮ: 5**

## ದ್ವಿತಳಿ ಮೊಟ್ಟೆಗಳಿಗೆ ಚಾಕಿ ಸಾಕಾಣಿಕೆ ವೆಚ್ಚದ ಸಹಾಯಧನ ನೀಡಿಕೆ.

ಅಂತರಾಷ್ಟ್ರೀಯ ಗುಣಮಟ್ಟದ ದ್ವಿತಳಿ ರೇಷ್ಮೆಗೆ ಹೆಚ್ಚಿನ ಬೇಡಿಕೆ ಇದೆ. ಮಿಶ್ರತಳಿ ರೇಷ್ಮೆಗಿಂತ ದ್ವಿತಳಿ ರೇಷ್ಮೆಯ ಗುಣಮಟ್ಟ ಉತ್ತಮವಾಗಿದೆ. ದ್ವಿತಳಿ ಸಾಕಾಣಿಕೆಗೆ ಚಾಕಿ ಹಂತದಲ್ಲಿ ನಿಗದಿತ ಶೈತ್ಯಾಂಶ ಮತ್ತು ಉಷ್ಣಾಂಶ, ಉತ್ತಮ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪು ನೀಡಿ, ಸೋಂಕು ರಹಿತ ವಾತಾವರಣ ಒದಗಿಸುವುದು ಅತ್ಯಾವಶ್ಯಕವಾಗಿರುತ್ತದೆ. ಇದರಿಂದ ಮುಂದಿನ ಹಂತಗಳಲ್ಲಿ ಯಶಸ್ವಿಯಾಗಿ ಬೆಳೆ ಹಣ್ಣು ಮಾಡಿ, ಉತ್ತಮ ಗುಣಮಟ್ಟದ ಗೂಡು ಉತ್ಪಾದನೆ ಮಾಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಚಾಕಿ ಸಾಕಾಣಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ನೋಂದಾಯಿತ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳು ಚಾಕಿ ಮಾಡಿ ವಿತರಿಸುವ ಪ್ರತಿ 100 ದ್ವಿತಳಿ ಮೊಟ್ಟೆಗಳ ಚಾಕಿಗೆ ಸಹಾಯಧನವಾಗಿ ರೂ.1000/-ಗಳನ್ನು ರೈತರಿಗೆ ನೀಡಲಾಗುವುದು.

**ಕಾರ್ಯಕ್ರಮ ಅನುಷ್ಠಾನದ ಮಾರ್ಗಸೂಚಿಗಳು:**

1. ತಾಂತ್ರಿಕವಾಗಿ ಸುಸಜ್ಜಿತ, ನೋಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳ **ಅನುಬಂಧ – 1** ರಲ್ಲಿ ತಿಳಿಸಿರುವ ವಿವರಗಳನ್ನು ಸಿದ್ಧಪಡಿಸಿ, ಜಿಲ್ಲೆಯ ಎಲ್ಲಾ ಚಾಕಿ ಸಾಕಾಣಿಕಾ ಕೇಂದ್ರಗಳ ವಿವರಗಳನ್ನು ಕ್ರೋಢೀಕರಿಸಿ ದಿನಾಂಕ:30.07.2024ರ ಒಳಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು.
2. ಕೇಂದ್ರ ರೇಷ್ಮೆ ಮಂಡಳಿಯಿಂದ ದ್ವಿತಳಿ(BV) ಚಾಕಿ ಸಾಕಾಣಿಕೆಗೆ, ಚಾಕಿ ಸಾಕಾಣಿಕಾ ಕೇಂದ್ರವು ಕಡ್ಡಾಯವಾಗಿ ನೋಂದಣಿ ಆಗಿರಬೇಕು. ಕೇಂದ್ರ ರೇಷ್ಮೆ ಮಂಡಳಿಯು ಪ್ರತಿ 5 ವರ್ಷಕ್ಕೊಮ್ಮೆ ಆಯೋಜಿಸುವ ಪುನರ್ಮನನ ತರಬೇತಿಗೆ ಚಾಕಿ ಸಾಕಾಣಿಕಾ ಕೇಂದ್ರದ ಮಾಲೀಕರು ಕಡ್ಡಾಯವಾಗಿ ಹಾಜರಾಗಬೇಕು.
3. ಸರ್ಕಾರಿ ಬಿತ್ತನೆ ಕೋಠಿಯಿಂದ ಸರಬರಾಜಾದ ಮೊಟ್ಟೆಗಳ ಮತ್ತು ದ್ವಿತಳಿ ಮೊಟ್ಟೆ ತಯಾರಿಕೆಗೆ ಅನುಮತಿ ಪಡೆದಿರುವ ಖಾಸಗಿ ನೋಂದಾಯಿತ ರೇಷ್ಮೆ ಮೊಟ್ಟೆ ತಯಾರಕರಿಂದ/ಕೇಂದ್ರ ರೇಷ್ಮೆ ಮಂಡಳಿಯಿಂದ ಖರೀದಿಸಿದ ದ್ವಿತಳಿ ಮೊಟ್ಟೆಗಳ ಚಾಕಿಗೆ ಮಾತ್ರ ಸಹಾಯಧನ ನೀಡುವುದು.
4. ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರದಲ್ಲಿ ಪ್ರತಿ ವಾರ/ಪ್ರತಿ ಮಾಹೆಯಲ್ಲಿ ಚಾಕಿ ಮಾಡಿ ವಿತರಿಸುವ ವಿವರಗಳನ್ನು ನಿಗದಿತ ನಮೂನೆಗಳಲ್ಲಿ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸಬೇಕು.
5. ಚಾಕಿ ಸಾಕಾಣಿಕಾ ಕೇಂದ್ರಗಳು, ಬಿತ್ತನೆ ಕೋಠಿಗಳಿಂದ ದ್ವಿತಳಿ ಮೊಟ್ಟೆಗಳನ್ನು ಖರೀದಿಸಿದ ರಶೀದಿಯ ಜೆರಾಕ್ಸ್ ಪ್ರತಿಯನ್ನು ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರಿಂದ ದೃಢೀಕರಿಸುವುದು.
6. ಕಡ್ಡಾಯವಾಗಿ ಸಂಬಂಧಿಸಿದ ಸೀಡ್ ಆಫೀಸರ್‌ಗಳಿಂದ ಚಾಕಿ ಸರ್ಟಿಫಿಕೇಷನ್ ಮಾಡಿಸುವುದು ಮತ್ತು ಸಂಬಂಧಿಸಿದ ರೇಷ್ಮೆ ಉಪನಿರ್ದೇಶಕರು ದೃಢೀಕರಿಸಿ ಎರಡನೇ ಹಂತದ ನಂತರವೇ ಚಾಕಿ ಹುಳುಗಳನ್ನು ರೇಷ್ಮೆ ಬೆಳೆಗಾರರಿಗೆ ವಿತರಿಸತಕ್ಕದ್ದು.
7. ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳ ಕರ್ನಾಟಕ ರಾಜ್ಯದ ರೇಷ್ಮೆ ಬೆಳೆಗಾರರಿಗೆ ವಿತರಿಸಿದ ಚಾಕಿಗೆ ಮಾತ್ರ ಸಹಾಯಧನ ನೀಡುವುದು. 2024-25ನೇ ಸಾಲಿನಲ್ಲಿ ಮಾರ್ಚ್ 2025ರ

ಮಾಹೆಯ ಅಂತ್ಯಕ್ಕೆ ಸಹಾಯಧನ ವಿತರಿಸಿದ ಮಾಹಿತಿಯನ್ನು **ಅನುಬಂಧ - 2** ರ ನಮೂನೆಯಲ್ಲಿ ದಿನಾಂಕ:30.07.2025ರ ಒಳಗೆ ಈ ಕಛೇರಿಗೆ ಸಲ್ಲಿಸುವುದು.

8. ಚಾಕಿ ಸಹಾಯಧನವನ್ನು ನೋಂದಾಯಿತ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಂದ ಚಾಕಿ ಪಡೆದ ರೇಷ್ಮೆ ಬೆಳೆಗಾರರಿಗೆ ಮಾತ್ರ **ಖಜಾನೆ-2/ಡಿಬಿಟಿ** ಮುಖಾಂತರ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸುವುದು. ದ್ವಿತಳಿ ಮೊಟ್ಟೆಗಳಿಗೆ ಚಾಕಿ ಸಾಕಾಣಿಕೆ ವೆಚ್ಚವನ್ನು ನೀಡಲು ರೇಷ್ಮೆ ಬೆಳೆಗಾರರು ನೋಂದಾಯಿತ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಂದ ಚಾಕಿ ಪಡೆದ ಬಗ್ಗೆ ರಶೀದಿ ಮತ್ತು ಉತ್ಪಾದಿಸಿದ ರೇಷ್ಮೆ ಗೂಡುಗಳನ್ನು ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿರುವ ಬಗ್ಗೆ ಬಿಡ್ಡಿಂಗ್ ಸ್ಲಿಪ್‌ಗಳನ್ನು ಕಡ್ಡಾಯವಾಗಿ ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.
9. ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಂದ ಬೆಳೆಗಾರರು ಪಡೆದಂತಹ ಚಾಕಿಯ ಪ್ರಮಾಣ, ಮೊತ್ತ, ರಶೀದಿ ಸಂಖ್ಯೆ ಮತ್ತು ದಿನಾಂಕದ ಪಟ್ಟಿಯನ್ನು ಪ್ರತಿ ಮಾಹೆ ಚಾಕಿ ಸಾಕಾಣಿಕಾ ಕೇಂದ್ರದಲ್ಲಿ ವಿತರಣೆ ವಹಿಯಲ್ಲಿ ಮಾಲೀಕರು ದಾಖಲಿಸಿ ಸಹಿ ಮಾಡುವುದು. ಅದನ್ನು ವಿಭಾಗೀಯ ಸಹಾಯಕ ನಿರ್ದೇಶಕರು ಪರಿಶೀಲಿಸಿ ಚಾಕಿ ವೆಚ್ಚ ಪ್ರೋತ್ಸಾಹಧನ ನೀಡಲು ನಿಯಮಾನುಸಾರ ಕ್ರಮವಹಿಸುವುದು.
10. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕ್ರಿಯಾಯೋಜನೆಯನ್ನು ರೇಷ್ಮೆ ನಿರ್ದೇಶನಾಲಯದಿಂದ ನೀಡಲಾಗುವುದು. ಇದಕ್ಕೆ ಪ್ರತಿ ಜಿಲ್ಲೆಯ ರೇಷ್ಮೆ ಉಪನಿರ್ದೇಶಕರು 2024-25ನೇ ಸಾಲಿಗೆ ಡ್ರಾಯಿಂಗ್ ಅಧಿಕಾರಿವಾರು ಭೌತಿಕ ಹಾಗೂ ಆರ್ಥಿಕ ಎಂಪಿಕ್(MPIC) ಅನ್ನು ಜೂನ್ 2024ರ ಮಾಹೆಯಿಂದ ಫೆಬ್ರುವರಿ 2025ರ ಮಾಹೆಯವರೆಗೆ ಬರುವಂತೆ ತಯಾರಿಸಿ ಸಲ್ಲಿಸಲು ತಿಳಿಸಿದೆ. ಇದನ್ನು ಆಧರಿಸಿ ತ್ರೈಮಾಸಿಕ ಅನುದಾನವನ್ನು ಆಯಾ ಜಿಲ್ಲೆಯ ರೇಷ್ಮೆ ಉಪನಿರ್ದೇಶಕರಿಗೆ ಬಿಡುಗಡೆಗೊಳಿಸಲಾಗುವುದು. ನಂತರ ಸದರಿಯವರಿಂದ ಜಿಲ್ಲಾ ವ್ಯಾಪ್ತಿಯ ಸಂಬಂಧಿಸಿದ ಡ್ರಾಯಿಂಗ್ ಅಧಿಕಾರಿಗಳಿಗೆ ಹಂಚಿಕೆಯಾಗುವುದು.
11. ಜಿಲ್ಲೆಯ ಜಿಲ್ಲಾ ಪಂಚಾಯತ್ ರೇಷ್ಮೆ ಉಪನಿರ್ದೇಶಕರು ನಿಗದಿತ **ಅನುಬಂಧ - 2 ಮತ್ತು ಅನುಬಂಧ - 3ರ ನಮೂನೆಗಳಲ್ಲಿ ಪ್ರತಿ ಮಾಹೆಯ ಆರ್ಥಿಕ ಮತ್ತು ಭೌತಿಕ ಪ್ರಗತಿ ವರದಿಗಳನ್ನು ತಪ್ಪದೆ ಪ್ರತಿ ಮಾಹೆಯ ದಿನಾಂಕ 5ರ** ಒಳಗಾಗಿ ಕೇಂದ್ರ ಕಛೇರಿಯ ತಾಂತ್ರಿಕ ಸೇವೆಗಳು ಮತ್ತು ತರಬೇತಿ ವಿಭಾಗಕ್ಕೆ ಸಲ್ಲಿಸತಕ್ಕದ್ದು.
12. 2024-25ನೇ ಸಾಲಿನ ಅಂತ್ಯಕ್ಕೆ ವೆಚ್ಚವಾದ ಮೊತ್ತಕ್ಕೆ ಉಪಯುಕ್ತತ ದೃಢೀಕರಣ ಪತ್ರವನ್ನು ಅನುಬಂಧ – 4ರ ನಮೂನೆಯಲ್ಲಿ teamsilk.tsti@gmail.com ಗೆ ಕಳುಹಿಸುವುದು.
13. ಪ್ರತಿ ತಿಂಗಳ ಚಾಕಿ ವೆಚ್ಚ ಪಾವತಿ ಪ್ರಸ್ತಾವನೆಯನ್ನು ಕಡ್ಡಾಯವಾಗಿ 30 ದಿನಗಳ ಒಳಗಾಗಿ ಸಲ್ಲಿಸಿ ಮಂಜೂರಾತಿ ಪ್ರಾಧಿಕಾರದಿಂದ ಮಂಜೂರಾತಿ ಪಡೆಯುವುದು, ಆಯಾ ತಾಂತ್ರಿಕ ಸೇವಾ ಕೇಂದ್ರಗಳ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ತಡವಾಗಿ ಸಲ್ಲಿಕೆಯಾಗುವ ಪ್ರಸ್ತಾವನೆಗಳನ್ನು ಮಾನ್ಯ ಮಾಡಬಾರದಾಗಿ ತಿಳಿಸಿದೆ.
14. ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಂದ ಸರಬರಾಜಾದ ಚಾಕಿ ಹುಳುಗಳು ಯಶಸ್ವಿಯಾಗಿ ಬೆಳೆ ಆಗಲು ಸೂಕ್ತ ತಾಂತ್ರಿಕ ತಿಳುವಳಿಕೆ ನೀಡುವುದು ಮತ್ತು ಗೂಡಿನ ಉತ್ಪಾದಕತೆ ಹೆಚ್ಚಾಗುವ ನಿಟ್ಟಿನಲ್ಲಿ ವಿಸ್ತರಣಾ ಕಾರ್ಯಗಳನ್ನು ರೇಷ್ಮೆ ಸಹಾಯಕ ನಿರ್ದೇಶಕರು ಮತ್ತು ರೇಷ್ಮೆ ವಿಸ್ತರಣಾಧಿಕಾರಿಗಳು ಕೈಗೊಳ್ಳುವುದು.
15. ಆಯಾ ಜಿಲ್ಲೆಯ ರೇಷ್ಮೆ ಉಪನಿರ್ದೇಶಕರು ಕಡ್ಡಾಯವಾಗಿ ಆಗಿಂದಾಗ್ಗೆ ಚಾಕಿ ಕೇಂದ್ರಗಳಿಗೆ ಭೇಟಿ ನೀಡಿ ಪೂರ್ಣ ಕಾರ್ಯ ಚಟುವಟಿಕೆಗಳ ಬಗ್ಗೆ ಪರಿವೀಕ್ಷಣೆ ನಡೆಸುವುದು.
16. ಖಾಸಗಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರಗಳ ಮಾಲೀಕರು ವಿತರಿಸಿದ ಚಾಕಿ ಹುಳುಗಳ ವಿವರ, ಆಗಿರುವ ಬೆಳೆಗಳ ಮಾಹಿತಿಯನ್ನು ಚಾಕಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ದಾಖಲಿಸಿ ವಹಿಗಳನ್ನು ನಿರ್ವಹಿಸುವಂತೆ ರೇಷ್ಮೆ ಸಹಾಯಕ ನಿರ್ದೇಶಕರು ಕ್ರಮ ಕೈಗೊಳ್ಳುವುದು.
17. ಸಂಬಂಧಿಸಿದ ರೇಷ್ಮೆ ಉಪನಿರ್ದೇಶಕರು ಹಾಗೂ ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರು ಪ್ರತಿ ಮಾಹೆಯ ಮಾಸಿಕ ಸಭೆಯಲ್ಲಿ ಕಾರ್ಯಕ್ರಮದ ಅನುಷ್ಠಾನದ ಕುರಿತು ಕೂಲಂಕುಷವಾಗಿ ಪರಿಶೀಲನೆ ನಡೆಸುವುದು.
18. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

**ಕಾರ್ಯಕ್ರಮ: 6**

**ಮೈಸೂರು ಶುದ್ಧ ತಳಿ ಚಾಕಿ ಸಾಕಾಣಿಕೆ ವೆಚ್ಚದ ಸಹಾಯಧನ**

ವಾಣಿಜ್ಯ ರೇಷ್ಮೆ ಮೊಟ್ಟೆ ಉತ್ಪಾದನೆಯಲ್ಲಿ ಶುದ್ಧ ಮೈಸೂರು ತಳಿ ಹಾಗೂ ದ್ವಿತಳಿ ರೇಷ್ಮೆ ಗೂಡುಗಳ ಉತ್ಪಾದನೆ ಬಹಳ ಪ್ರಮುಖವಾದ ಅಂಶವಾಗಿರುತ್ತದೆ. ಮಿಶ್ರತಳಿ ಹಾಗೂ ದ್ವಿತಳಿ ಸಂಕರಣ/ಶುದ್ಧ ತಳಿ ಮೊಟ್ಟೆ ಉತ್ಪಾದಿಸಲು ನಿರಂತರವಾಗಿ ಗುಣಮಟ್ಟದ ಶುದ್ಧ ಮೈಸೂರು ತಳಿ ಹಾಗೂ ದ್ವಿತಳಿ ರೇಷ್ಮೆ ಬಿತ್ತನೆ ಗೂಡುಗಳ ಅವಶ್ಯಕತೆಯಿರುತ್ತದೆ. ಈ ಅತ್ಯಾವಶ್ಯಕ ಬೇಡಿಕೆಯನ್ನು ಪೂರೈಸಲು ದ್ವಿತಳಿ ಮತ್ತು ಮೈಸೂರು ಬಿತ್ತನೆ ವಲಯಗಳಲ್ಲಿ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಅನೇಕ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಅನುಷ್ಠಾನದ ಜೊತೆಗೆ ತಾಂತ್ರಿಕ ಮಾಹಿತಿಯನ್ನು ಒದಗಿಸಲಾಗುತ್ತಿದೆ. ಬಿತ್ತನೆ ಗೂಡಿಗೆ ಕೊರತೆಯಾಗದಂತೆ ವೈಜ್ಞಾನಿಕವಾಗಿ ಮೊಟ್ಟೆ ಉತ್ಪಾದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ಬಿತ್ತನ ಪ್ರದೇಶದಲ್ಲಿ ಚಾಕಿ ಸಾಕಾಣಿಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಈಗಾಗಲೇ ದ್ವಿತಳಿ ಮೊಟ್ಟೆಗಳಿಗೆ ನೀಡುತ್ತಿರುವಂತೆ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳಲ್ಲಿ ಪ್ರತಿ 100 ಮೊಟ್ಟೆಗಳಿಗೆ ತಗಲಬಹುದಾದ ಒಟ್ಟು ವೆಚ್ಚ ರೂ.1500/-ಗಳಲ್ಲಿ ಶೇ.50ರಂತೆ ರೂ.750/-ಗಳ ಚಾಕಿ ಸೇವಾ ಶುಲ್ಕವನ್ನು ನೀಡಲಾಗುವುದು.

**ಕಾರ್ಯಕ್ರಮ ಅನುಷ್ಠಾನದ ಮಾರ್ಗಸೂಚಿಗಳು:**

1. ಕೇಂದ್ರ ರೇಷ್ಮೆ ಮಂಡಳಿಯ ಕಾಯ್ದೆಯನ್ವಯ ನಿಯಮಾನುಸಾರ ನೋಂದಣಿಯಾದ ಚಾಕಿ ಕೇಂದ್ರಗಳ ವಿವರಗಳನ್ನು ಸಲ್ಲಿಸುವುದು.
2. ಸರ್ಕಾರಿ ಬಿತ್ತನೆ ಕೋಠಿಗಳಿಂದ ಪಡೆದ ಮೊಟ್ಟೆಗಳ ರಶೀದಿಯ ಜೆರಾಕ್ಸ್ ಪ್ರತಿಯನ್ನು ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.
3. ಚಾಕಿ ಸಾಕಾಣಿಕಾ ಕೇಂದ್ರ ಕಟ್ಟಡವು ಅಧಿಸೂಚಿತ ಬಿತ್ತನೆ ವಲಯದ ಪ್ರದೇಶದೊಳಗೆ ಇರತಕ್ಕದ್ದು ಹಾಗೂ ಕಡ್ಡಾಯವಾಗಿ ಮೈಸೂರು ಶುದ್ಧ ತಳಿಯನ್ನು ಮಾತ್ರ ಚಾಕಿ ಮಾಡುವುದು.
4. ಗಂಟು ರೋಗದ ಪರೀಕ್ಷೆಯನ್ನು ನಿಯಮಾನುಸಾರ ಕಡ್ಡಾಯವಾಗಿ ಕೈಗೊಂಡು ದಾಖಲೆಗಳನ್ನು ನಿರ್ವಹಿಸುವುದು ಹಾಗೂ ಈ ಬಗ್ಗೆ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರುಗಳಿಂದ ಸೂಕ್ತ ದೃಢೀಕರಣ ಪಡೆಯುವುದು.
5. ಸಂಬಂಧಿಸಿದ ಸೀಡ್ ಆಫೀಸರ್‌ಗಳಿಂದ ಚಾಕಿ ಸರ್ಟಿಫಿಕೇಷನ್ ಮಾಡಿಸಿ 2ನೇ ಹಂತದ ನಂತರವೇ ಚಾಕಿ ಹುಳುಗಳನ್ನು ರೇಷ್ಮೆ ಬೆಳೆಗಾರರಿಗೆ ವಿತರಿಸತಕ್ಕದ್ದು.
6. ಚಾಕಿ ಕೇಂದ್ರಗಳು ಅಧಿಸೂಚಿತ ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರಿಗೆ ವಿತರಿಸಿದ ಚಾಕಿಗೆ ಮಾತ್ರ ಸಹಾಯಧನ ನೀಡುವುದು. ನಿಗದಿತ ನಮೂನೆಯಲ್ಲಿ ಸಹಾಯಧನ ವಿತರಿಸಿದ ಮಾಹಿತಿಯನ್ನು ರೇಷ್ಮೆ ಉಪನಿರ್ದೇಶಕರುಗಳು ಕೇಂದ್ರ ಕಚೇರಿಗೆ ಸಲ್ಲಿಸುವುದು.
7. ಚಾಕಿ ಸಹಾಯಧನವನ್ನು ರೇಷ್ಮೆ ಬೆಳೆಗಾರರಿಗೆ ನೇರವಾಗಿ ಖಜಾನೆ-2/ಡಿಬಿಟಿ ಮುಖಾಂತರ ಪಾವತಿಸುವುದು. ರೇಷ್ಮೆ ಬೆಳೆಗಾರರು ನೋಂದಾಯಿತ ಚಾಕಿ ಸಾಕಾಣಿಕಾ ಕೇಂದ್ರಗಳಿಂದ ಚಾಕಿ ಪಡೆದ ಬಗ್ಗೆ ರಶೀದಿ ಮತ್ತು ಉತ್ಪಾದಿಸಿದ ರೇಷ್ಮೆ ಗೂಡುಗಳನ್ನು ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಮಾರಾಟ ಮಾಡಿರುವ ಬಗ್ಗೆ ಬಿಡ್ಡಿಂಗ್ ಸ್ಲಿಪ್‌ಗಳನ್ನು ಕಡ್ಡಾಯವಾಗಿ ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.
8. ಚಾಕಿ ಸಾಕಾಣಿಕಾ ಕೇಂದ್ರದಿಂದ ಬೆಳೆಗಾರರವಾರು ವಿತರಣೆಯಾದ ಚಾಕಿಯ ಪ್ರಮಾಣ, ತಂಡದ ಸಂಖ್ಯೆ ದರ, ಮೊತ್ತ, ರಶೀದಿ ಸಂಖ್ಯೆ ಮತ್ತು ದಿನಾಂಕಗಳ ವಿವರಗಳನ್ನು ವಿತರಣಾ ವಹಿಯಲ್ಲಿ ನಮೂದಿಸಿ ಮಾಲೀಕರು ಸಹಿ ಮಾಡುವುದು. ಅದನ್ನು ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು ಪ್ರತಿ ಮಾಹೆಯಲ್ಲಿ ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.
9. 2024-25ನೇ ಸಾಲಿನ ಮಾಹೆವಾರು ಚಾಕಿ ವೆಚ್ಚಗಳ ಕ್ರಿಯಯೋಜನೆಯನ್ನು ನೀಡುವುದು. ಇದನ್ನು ಆಧರಿಸಿ ತ್ರೈಮಾಸಿಕ ಅನುದಾನವನ್ನು ಸಂಬಂಧಿಸಿದ ರೇಷ್ಮೆ ಉಪನಿರ್ದೇಶಕರಿಗೆ ಬಿಡುಗಡೆಗೊಳಿಸಲಾಗುವುದು. ಆ ನಂತರ ರೇಷ್ಮೆ ಸಹಾಯಕ ನಿರ್ದೇಶಕರುಗಳಿಗೆ ಮರು ಹಂಚಿಕೆ ಮಾಡುವುದು.

10. ರೇಷ್ಮೆ ಉಪನಿರ್ದೇಶಕರು ಪ್ರತಿ ಮಾಹೆಯ ಆರ್ಥಿಕ ಮತ್ತು ಭೌತಿಕ ವರದಿಯನ್ನು ತಪ್ಪದೇ 5ನೇ ತಾರೀಖಿನೊಳಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಉಪಯುಕ್ತತಾ ದೃಢೀಕರಣ ಪತ್ರಗಳನ್ನು ನಿಗದಿತ ನಮೂನೆಯಲ್ಲಿ ವರ್ಷಾಂತ್ಯಕ್ಕೆ ಕೇಂದ್ರ ಕಛೇರಿಗೆ ಸಲ್ಲಿಸುವುದು.
11. ಪ್ರತಿ ತಿಂಗಳ ಚಾಕಿ ಸೇವಾ ಶುಲ್ಕ ಪಾವತಿ ಪ್ರಸ್ತಾವನೆಯನ್ನು ಕಡ್ಡಾಯವಾಗಿ 30 ದಿನಗಳೊಳಗಾಗಿ ಸಲ್ಲಿಸಿ ಮಂಜೂರಾತಿ ಪ್ರಾಧಿಕಾರದಿಂದ ಮಂಜೂರಾತಿ ಪಡೆಯತಕ್ಕದ್ದು. ತಡವಾಗಿ ಸಲ್ಲಿಕೆಯಾಗುವ ಪ್ರಸ್ತಾವನೆಯನ್ನು ಮಾನ್ಯ ಮಾಡಬಾರದು. ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು ನಿಗದಿತ ಸಮಯಕ್ಕೆ ಸರಿಯಾಗಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿ ಮಂಜೂರಾತಿ ಪಡೆಯುವುದು ಅವರ ಜವಾಬ್ದಾರಿಯಾಗಿರುತ್ತದೆ.
12. ಚಾಕಿ ಸಾಕಾಣಿಕಾ ಕೇಂದ್ರದಿಂದ ಸರಬರಾಜಾದ ಚಾಕಿ ಹುಳುಗಳು ಯಶಸ್ವಿಯಾಗಿ ಹಣ್ಣಾಗಲು ಸೂಕ್ತ ತಾಂತ್ರಿಕ ತಿಳುವಳಿಕೆ ನೀಡುವುದು ಮತ್ತು ಗೂಡಿನ ಉತ್ಪಾದಕತೆ ಅಧಿಕಗೊಳಿಸುವ ನಿಟ್ಟಿನಲ್ಲಿ ವಿಸ್ತರಣಾ ಕಾರ್ಯಗಳನ್ನು ರೇಷ್ಮೆ ಸಹಾಯಕ ನಿರ್ದೇಶಕರು ಮತ್ತು ರೇಷ್ಮೆ ವಿಸ್ತರಣಾಧಿಕಾರಿಗಳು ಕೈಗೊಳ್ಳುವುದು.
13. ಸಂಬಂಧಿಸಿದ ರೇಷ್ಮೆ ವಿಸ್ತರಣಾಧಿಕಾರಿಗಳು/ರೇಷ್ಮೆ ಸಹಾಯಕ ನಿರ್ದೇಶಕರು ಹಾಗೂ ರೇಷ್ಮೆ ಉಪನಿರ್ದೇಶಕರು ಆಗಿಂದಾಗ್ಗೆ ಚಾಕಿ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಶುಚಿತ್ವದ ಬಗ್ಗೆ ಹಾಗೂ ಪರಿಣಾಮಕಾರಿ ಸೋಂಕು ನಿವಾರಣೆ ಕೈಗೊಳ್ಳುತ್ತಿರುವ ಬಗ್ಗೆ ಹಾಗೂ ತಾಂತ್ರಿಕತೆಗಳನ್ನು ಪಾಲಿಸಿ ಚಾಕಿ ಸಾಕಾಣಿಕೆ ಕೈಗೊಳ್ಳಲಾಗುತ್ತಿದೆಯೇ ಎನ್ನುವ ಬಗ್ಗೆ ಪರಿಶೀಲನೆ ನಡೆಸುವುದು.
14. ಚಾಕಿ ಸಾಕಾಣಿಕಾ ಕೇಂದ್ರದ ಚಾಕಿ ಹುಳುಗಳ ವಿತರಣಾ ವಿವರಗಳು ಹಾಗೂ ಉತ್ಪಾದಿಸಿದ ಗೂಡುಗಳ ವಿವರಗಳನ್ನೊಳಗೊಂಡ ಮಾಹಿತಿಯನ್ನು ಚಾಕಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ದಾಖಲಿಸಿ ಸಂಬಂಧಿಸಿದ ವಹಿಗಳನ್ನು ನಿರ್ವಹಿಸುವಂತೆ ರೇಷ್ಮೆ ಸಹಾಯಕ ನಿರ್ದೇಶಕರು ಕ್ರಮವಹಿಸುವುದು.
15. ರೇಷ್ಮೆ ಉಪನಿರ್ದೇಶಕರು ಹಾಗೂ ರೇಷ್ಮೆ ಜಂಟಿ ನಿರ್ದೇಶಕರು ಪ್ರತಿ ಮಾಹೆಯ ಮಾಸಿಕ ಸಭೆಗಳಲ್ಲಿ ಕಾರ್ಯಕ್ರಮದ ಅನುಷ್ಠಾನ ಕುರಿತು ಕೂಲಂಕುಷವಾಗಿ ಪರಿಶೀಲನೆ ನಡೆಸುವುದು.
16. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

**ಕಾರ್ಯಕ್ರಮ: 7**

## ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರೇಷ್ಮೆ ಬೆಳೆಗಾರರು ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡನ್ನು ರಾಜ್ಯದ ಯಾವುದೇ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಸಾಗಿಸಲು ಸಾಗಾಣಿಕೆ ವೆಚ್ಚ ನೀಡುವುದು

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಉತ್ಪಾದನೆಯಾಗಿ ರಾಜ್ಯದ ಯಾವುದೇ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ವಹಿವಾಟಾದ ಪ್ರತಿ ಕೆ.ಜಿ ದ್ವಿತಳಿ ರೇಷ್ಮೆ ಗೂಡಿಗೆ ರೂ.10/-ರಂತೆ ಸಾಗಾಣಿಕಾ ವೆಚ್ಚ ನೀಡಲಾಗುವುದು

ಉತ್ತರ ಕರ್ನಾಟಕದ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ವಿಜಯನಗರ, ಗದಗ, ಬೆಳಗಾವಿ, ಹಾವೇರಿ, ಧಾರವಾಡ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ದ್ವಿತಳಿ ರೇಷ್ಮೆ ಬೆಳೆಗಾರರು ಮಾತ್ರವೇ ಈ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

1. ಉತ್ತರ ಕರ್ನಾಟಕದ ಮೇಲಿನ ಜಿಲ್ಲೆಗಳಲ್ಲಿ ಬೆಳೆದ ಎಲ್ಲಾ ದ್ವಿತಳಿ(ಸಂಕರಣ ಮತ್ತು ಬಿತ್ತನೆ) ರೇಷ್ಮೆ ಗೂಡಿಗೆ ಈ ಯೋಜನೆಯು ಅನ್ವಯವಾಗುತ್ತದೆ.
2. ಉತ್ತರ ಕರ್ನಾಟಕದ ಜಿಲ್ಲೆಗಳ ರೇಷ್ಮೆ ಬೆಳೆಗಾರರು ತಾವು ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡನ್ನು ರಾಜ್ಯದ ಯಾವುದೇ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಸಾಗಾಣಿಕೆ ಮಾಡುವ ಪ್ರತಿ ಕೆ.ಜಿ ರೇಷ್ಮೆ ಗೂಡಿಗೆ ರೂ.10/-ರಂತೆ 'ಸಾಗಾಣಿಕಾ ವೆಚ್ಚ'ವನ್ನು ಪಾವತಿಸುವುದು.
3. ಕಾರ್ಯಕ್ರಮದ ಅನುಷ್ಠಾನದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ದ್ವಿತಳಿ ಸಂಕರಣ ತಳಿ ಉತ್ಪಾದನೆಗೆ ಹೆಚ್ಚು ಒತ್ತು ನೀಡುವುದು.

**ಈ ಕಾರ್ಯಕ್ರಮದಡಿ ಇಲಾಖಾ ಅಧಿಕಾರಿಗಳು ಅನುಸರಿಸಬೇಕಾದ ಕ್ರಮಗಳು ಕೆಳಕಂಡಂತಿವೆ.**

**ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು ನಿರ್ವಹಿಸಬೇಕಾದ ಕಾರ್ಯಗಳು:**

- ರೇಷ್ಮೆ ಗೂಡು ಮಾರಾಟ ಮಾಡಿರುವ ಕುರಿತು ಸಂಬಂಧಿಸಿದ ರೇಷ್ಮೆ ಗೂಡಿನ ಮಾರುಕಟ್ಟೆಯ ಹರಾಜು ಚೀಟಿ ಅಥವಾ ಸ್ಥಳೀಯ ಅಧಿಕಾರಿಗಳು ದೃಢೀಕರಿಸಿದ ಹರಾಜು ಚೀಟಿ(ರೇಷ್ಮೆ ಬೆಳೆಗಾರರ ಪ್ರತಿ), ಅಧಿಕಾರಿಗಳು ದೃಢೀಕರಿಸಿದ ಪಾಸ್ ಪುಸ್ತಕದ ವಿವರಗಳನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳು ಪರಿಶೀಲಿಸಿ, ರೇಷ್ಮೆ ಸಹಾಯಕ ನಿರ್ದೇಶಕರಿಗೆ ಮಂಜೂರಾತಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.
- ಸಾಗಾಣಿಕಾ ವೆಚ್ಚ ಪಾವತಿಗಾಗಿ ತಾಂತ್ರಿಕ ಸೇವಾ ಕೇಂದ್ರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಮಂಜೂರಾತಿಗಾಗಿ ಸಲ್ಲಿಸುವುದು.
- ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಸಾಗಾಣಿಕಾ ವೆಚ್ಚದ ವಿವರಗಳ ವಹಿಯನ್ನು ನಿರ್ವಹಿಸುವುದು.

**ವಿಭಾಗೀಯ ಮಟ್ಟದ ರೇಷ್ಮೆ ಸಹಾಯಕ ನಿರ್ದೇಶಕರು ನಿರ್ವಹಿಸಬೇಕಾದ ಕಾರ್ಯಗಳು:**

- ವಿಭಾಗೀಯ ಮಟ್ಟದ ಅಧಿಕಾರಿಗಳು ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ನೀಡುವ ಮಾದರಿಯಲ್ಲಿಯೇ ಈ ಯೋಜನೆಯ ವಿವರವನ್ನು ಪರಿಶೀಲಿಸಿ ಧೃಡೀಕರಿಸುವುದು.
- ರೇಷ್ಮೆ ಬೆಳೆಗಾರರು ಪಡೆದಂತಹ ರೋಗ ರಹಿತ ಮೊಟ್ಟೆ/ಚಾಕಿ ಹುಳುಗಳ ಮೂಲದ ಬಗ್ಗೆ ಖಚಿತಪಡಿಸಿಕೊಂಡು ಧೃಡೀಕರಿಸುವುದು.
- ಸಾಗಾಣಿಕಾ ವೆಚ್ಚ ಪಾವತಿಗಾಗಿ ತಾಂತ್ರಿಕ ಸೇವಾ ಕೇಂದ್ರದಿಂದ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಇಲಾಖೆಯಿಂದ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯಂತೆ ಮಂಜೂರಾತಿ ನೀಡುವುದು.
- ಡಿ.ಸಿ.ಬಿಲ್ ತಯಾರಿಸಿ, ಡಿ.ಸಿ.ಬಿಲ್ ಮೇಲು ಸಹಿ ಮಾಡಿಸಿ **ಖಜಾನೆ-2/ಡಿಬಿಟಿ** ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುವುದು.

**ಜಿಲ್ಲಾ ಮಟ್ಟದ ರೇಷ್ಮೆ ಉಪನಿರ್ದೇಶಕರುಗಳು ನಿರ್ವಹಿಸಬೇಕಾದ ಕಾರ್ಯಗಳು:**

- ಡಿ.ಸಿ.ಬಿಲ್ ಮೇಲು ಸಹಿ ಮಾಡಿ ರೇಷ್ಮೆ ಸಹಾಯಕ ನಿರ್ದೇಶಕರುಗಳಿಗೆ ಹಿಂತಿರುಗಿಸುವುದು.
- ಪಾವತಿಸಿದ ಸಾಗಾಣಿಕಾ ವೆಚ್ಚದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರುಗಳಿಗೆ ಹಾಗೂ ರೇಷ್ಮೆ ನಿರ್ದೇಶನಾಲಯದ ರೇಷ್ಮೆ ಗೂಡಿನ ಮಾರುಕಟ್ಟೆ ವಿಭಾಗಕ್ಕೆ ಸಲ್ಲಿಸುವುದು.
- ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರುವಲ್ಲಿ ಸೂಕ್ತ ಕ್ರಮವಹಿಸುವುದು.

**ರೇಷ್ಮೆ ಜಂಟಿ ನಿರ್ದೇಶಕರು ನಿರ್ವಹಿಸಬೇಕಾದ ಕಾರ್ಯಗಳು:**

- ತಮ್ಮ ವ್ಯಾಪ್ತಿಯ ತಾಂತ್ರಿಕ ಸೇವಾ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾಗಾಣಿಕಾ ವೆಚ್ಚ ಪಾವತಿಯ ಬಗ್ಗೆ ಪರಿಶೀಲಿಸುವುದು. ಯಾವುದೇ ಸಂದರ್ಭದಲ್ಲಿ ಲೋಪವೆಸಗಿರುವುದು ಕಂಡು ಬಂದಲ್ಲಿ ಅಂತಹ ತಪ್ಪಿತಸ್ಥ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ಕೈಗೊಳ್ಳುವುದು.

**ಸಾಮಾನ್ಯ ಸೂಚನೆಗಳು:**

1. ಯೋಜನೆ ಅನುಷ್ಠಾನಕ್ಕಾಗಿ ನೀಡಲಾದ ಮಾರ್ಗಸೂಚಿಗಳನ್ನು ತಪ್ಪದೆ ಪಾಲಿಸತಕ್ಕದ್ದು.
2. ಪ್ರಸ್ತಾವನೆಯನ್ನು ಸ್ವೀಕರಿಸುವ ಅನುಕ್ರಮದಲ್ಲೇ ಸಾಗಾಣಿಕಾ ವೆಚ್ಚವನ್ನು ಸಹಾ ಅದೇ ಅನುಕ್ರಮದಲ್ಲಿ ಪಾವತಿಸುವುದು.
3. ಸರ್ಕಾರದ ಆದೇಶದ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಮಂಜೂರಾತಿ ನೀಡಿ ಸಾಗಾಣಿಕಾ ವೆಚ್ಚವನ್ನು ಪಾವತಿಸುವುದು.
4. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

**ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಅನುಬಂಧ – 2 ರ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ವರದಿಯನ್ನು ಇ-ಮೇಲ್ govtcocoonmarkets@gmail.comಗೆ ಕಳುಹಿಸುವುದು.**

| ಅನುಬಂಧ - 2 |
|---|
| ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರೇಷ್ಮೆ ಬೆಳೆಗಾರರು ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ ಸಾಗಾಣಿಕೆ ವೆಚ್ಚದ ಪ್ರಗತಿ ವಿವರ |

ಜಿಲ್ಲೆ: ಲೆಕ್ಕ ಶೀರ್ಷಿಕೆ:2851-00-107-1-35(106) ಮಾಹೆ:

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ | ಅನುದಾನ ಬಿಡುಗಡೆ | ತಳಿ | ಮಾಸಾಂತ್ಯಕ್ಕೆ ಸಾಧನೆ | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | | | ಪ. ಜಾ | | | ಪ.ಪಂ | | | ಅಲ್ಪ ಸಂಖ್ಯಾತರು | | | ಸಾಮಾನ್ಯ | | | ವಿಕಲ ಚೇತನರು | | | ಒಟ್ಟು | | |
| | | | ದ್ವಿತಳಿ | ಭೌತಿಕ (ಪರಿಮಾಣ) | ಫಲಾನುಭವಿಗಳು | ಆರ್ಥಿಕ | ಭೌತಿಕ (ಪರಿಮಾಣ) | ಫಲಾನುಭವಿಗಳು | ಆರ್ಥಿಕ | ಭೌತಿಕ (ಪರಿಮಾಣ) | ಫಲಾನುಭವಿಗಳು | ಆರ್ಥಿಕ | ಭೌತಿಕ (ಪರಿಮಾಣ) | ಫಲಾನುಭವಿಗಳು | ಆರ್ಥಿಕ | ಭೌತಿಕ (ಪರಿಮಾಣ) | ಫಲಾನುಭವಿಗಳು | ಆರ್ಥಿಕ | ಭೌತಿಕ (ಪರಿಮಾಣ) | ಫಲಾನುಭವಿಗಳು | ಆರ್ಥಿಕ |
| | | | | | | | | | | | | | | | | | | | | | |

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

ಸಂ/ಯೋ/ಪಿಎಸ್3/SCP TSP/ಮಾರ್ಗಸೂಚಿ/37/24-25

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ,
ಬೆಂಗಳೂರು, ದಿನಾಂಕ:31.05.2024.

ಸುತ್ತೋಲೆ

ವಿಷಯ: 2024-25ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ ವರ್ಗಗಳಡಿ ಅನುಷ್ಠಾನಗೊಳಿಸುವ ಫಲಾನುಭವಿಯಾಧಾರಿತ ಕಾರ್ಯಕ್ರಮಗಳ ಅನುಷ್ಠಾನದ ಮಾರ್ಗಸೂಚಿ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ.ರೇಷ್ಮೆ/112/ರೇಕೃವಿ/2024, ಬೆಂಗಳೂರು, ದಿನಾಂಕ:06.04.2024.

*****

2024-25ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಯೋಜನೆಗಳ ಲೆಕ್ಕ ಶೀರ್ಷಿಕೆಗಳಡಿ ಸರ್ಕಾರವು ಅನುದಾನವನ್ನು ಒದಗಿಸಿದ್ದು, ಮುಂದುವರೆದ ಯೋಜನೆಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ರೇಷ್ಮೆ ಅಭಿವೃದ್ಧಿ ಯೋಜನೆ -ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ- ಲೆಕ್ಕ ಶೀರ್ಷಿಕೆ 2851-00-107-1-35(422)(423) ಮತ್ತು ಕಾಯ್ದೆ-2013ರಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಲೆಕ್ಕ ಶೀರ್ಷಿಕೆ:2851-00-107-1-50(422)(423)ಅಡಿ ಅನುಷ್ಠಾನಗೊಳಿಸುವ ಫಲಾನುಭವಿಯಾಧಾರಿತ ಕಾರ್ಯಕ್ರಮಗಳ ಮಾರ್ಗಸೂಚಿಯನ್ನು ತಯಾರಿಸಿದ್ದು, ಪತ್ರದೊಂದಿಗೆ ಅಡಕಗೊಳಿಸಿ ಕಳುಹಿಸುತ್ತಾ, ಸದರಿ ಮಾರ್ಗಸೂಚಿಯನ್ವಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸೂಚಿಸಿದೆ.

ರೇಷ್ಮೆ ನಿರ್ದೇಶನಾಲಯದಿಂದ ವಿವಿಧ ಯೋಜನೆಗಳಡಿ ಅನುಷ್ಠಾನಗೊಳಿಸುವ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಡಿ ಜಿಲ್ಲಾವಾರು ನಿಗಧಿಪಡಿಸುವ ಭೌತಿಕ ಹಾಗೂ ಆರ್ಥಿಕ ಗುರಿಯನ್ನು ಸಾಧಿಸಲು ಕ್ರಮವಹಿಸುವುದು. 2024-25ನೇ ಸಾಲಿನಲ್ಲಿ ಒದಗಿಸುವ ಅನುದಾನಕ್ಕನುಗುಣವಾಗಿ ಮಾಹೆವಾರು ಭರಿಸುವ ವೆಚ್ಚದ ಮಾಹಿತಿಯನ್ನು ಎಸ್‌ಟಿಐಎಸ್‌ಎಸ್‌ನಲ್ಲಿ ತಪ್ಪದೇ ದಾಖಲಿಸುವುದು ಹಾಗೂ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ತಯಾರಿಸಿ ಯೋಜನಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

07/06/24

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ಎಲ್ಲಾ ರೇಷ್ಮೆ ಜಂಟಿ ನಿರ್ದೇಶಕರು
ಎಲ್ಲಾ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಕುಣಿಗಲ್/ಮಾಗಡಿ

ರೇಷ್ಮೆ ಉಪನಿರ್ದೇಶಕರು, ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ವಿಜಯಪುರ/ರಾಮನಗರ/ಕನಕಪುರ/ಕೊಳ್ಳೇಗಾಲ/ಕೋಲಾರ/ಶಿಡ್ಲಘಟ್ಟ
ಎಲ್ಲಾ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು
ಎಲ್ಲಾ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆಗಳು
ಎಲ್ಲಾ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ/ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್)

ಪ್ರತಿಯನ್ನು ರೇಷ್ಮೆ ಜಂಟಿ ನಿರ್ದೇಶಕರು, ಎಸ್‌ಪಿಎಸ್‌ಎಫ್ ವಿಭಾಗ/ಟಿಎಸ್‌ಟಿಐ ವಿಭಾಗ/ರೇಷ್ಮೆ ಗೂಡು ಮಾರುಕಟ್ಟೆ ವಿಭಾಗ ಹಾಗೂ ಗೂಡಿನ ನಂತರದ ಚಟುವಟಿಕೆ ವಿಭಾಗ, ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ಮುಖ್ಯ ಅರ್ಥಶಾಸ್ತ್ರಜ್ಞರು, ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು(ರೇಷ್ಮೆ), ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

# 2024-25ನೇ ಸಾಲಿನ ರೇಷ್ಮೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-35[(ವಿಶೇಷ ಘಟಕ ಉಪಯೋಜನೆ-422)(ಗಿರಿಜನ ಉಪ ಯೋಜನೆ-423)] ಹಾಗೂ 2851-00-107-1-50(422)(423) ಕಾರ್ಯಕ್ರಮಗಳ ಮಾರ್ಗಸೂಚಿ

**ರೇಷ್ಮೆ ಅಭಿವೃದ್ಧಿ ಯೋಜನೆ – ವಿಶೇಷ ಘಟಕ ಉಪ ಯೋಜನೆ/ಗಿರಿಜನ ಉಪ ಯೋಜನೆ ಲೆಕ್ಕ ಶೀರ್ಷಿಕೆ – 2851-00-107-1-35(422)(423)**

**ಗೂಡಿನ ಪೂರ್ವದ ಕಾರ್ಯಕ್ರಮಗಳು**

**ಕಾರ್ಯಕ್ರಮ: 1**

ಈ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ರೇಷ್ಮೆ ಬೆಳೆಗಾರರಿಗೆ ಸೌಲಭ್ಯ ಒದಗಿಸುವ ಹಿತದೃಷ್ಟಿಯಿಂದ ಸಲಕರಣೆ ಖರೀದಿಗೆ ಘಟಕ ದರ ರೂ.75,000/- ನಿಗದಿ ಪಡಿಸಿದ್ದು, ಸಹಾಯಧನ ರೂ.67,500/-(ಶೇಕಡಾ 90). ಸಲಕರಣೆ ಖರೀದಿಗೆ ಹೊಸ ರೈತರಿಗೆ ಮೊದಲ ಆದ್ಯತೆ ನೀಡುವುದು.

- ಮೈಸೂರು ಶುದ್ಧ ತಳಿ/ದ್ವಿತಳಿ/ಸುಧಾರಿತ ಮಿಶ್ರತಳಿ ರೇಷ್ಮೆ ಗೂಡು ಬೆಳೆಯುವ ರೇಷ್ಮೆ ಬೆಳೆಗಾರರನ್ನು ಸಲಕರಣೆ ಖರೀದಿಗೆ ಸಹಾಯಧನ ನೀಡಲು ಆಯ್ಕೆ ಮಾಡಬೇಕು.
- ಇಲಾಖೆಯ ಖರೀದಿ ಸಮಿತಿ ಅನುಮೋದಿಸುವ ಸಲಕರಣೆಗಳ ಘಟಕ ದರ ಮಿತಿಗೆ ಒಳಪಟ್ಟು ಅನುಮೋದಿತ ಸಂಸ್ಥೆಗಳಿಂದ ಮಾತ್ರ ಸಲಕರಣೆಗಳನ್ನು ಖರೀದಿಸಬೇಕು.
- ಇಲಾಖೆಯು ಅನುಮೋದಿಸುವ ಸಲಕರಣೆಗಳನ್ನು ಖರೀದಿಸಬಹುದಾಗಿದೆ. ಈ ಕುರಿತು ರೇಷ್ಮೆ ನಿರ್ದೇಶನಾಲಯದಿಂದ ಪ್ರತ್ಯೇಕ ಸುತ್ತೋಲೆ ನೀಡಲಾಗುವುದು.
- ಹುಳು ಸಾಕಾಣಿಕೆ ಮಾಡುವ ಬಗ್ಗೆ ಚಾಲ್ತಿಯಲ್ಲಿರುವ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.
- ಹುಳು ಸಾಕಾಣಿಕೆಯನ್ನು ಮುಂದಿನ 3 ವರ್ಷಗಳವರೆಗೆ ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.50/-ಗಳ ಛಾಪಾ ಕಾಗದದಲ್ಲಿ ನಿಗದಿತ ನಮೂನೆಯಲ್ಲಿ ಮುಚ್ಚಳಿಕೆ ಪಡೆಯಬೇಕು.
- ರೇಷ್ಮೆ ಬೆಳೆಗಾರರು ಸಲಕರಣೆ ಸರಬರಾಜು ಪಡೆಯಲು ಇಚ್ಛಿಸುವ ಸಲಕರಣೆ ಮತ್ತು ಸಂಸ್ಥೆಗಳ ವಿವರಗಳನ್ನು ರೇಷ್ಮೆ ಬೆಳೆಗಾರರಿಂದ ಪಡೆಯುವ ಕೋರಿಕೆಯ ಅರ್ಜಿಯಲ್ಲಿ ವಿವರಗಳನ್ನು ಪಡೆಯುವುದು.

**ಸಲಕರಣೆಗಳ ಸರಬರಾಜು ಪಡೆದು ಸಹಾಯಧನ ವಿತರಣೆ:**

ಇಲಾಖೆಯು ಅನುಮೋದಿಸಿ empanel ಮಾಡಿರುವ ಸಂಸ್ಥೆಗಳಿಂದ ಮಾತ್ರ ಸಲಕರಣೆಗಳನ್ನು ಸರಬರಾಜು ಪಡೆಯುವುದು ಕಡ್ಡಾಯವಾಗಿದೆ.

- ರೇಷ್ಮೆ ಬೆಳೆಗಾರರು ಸಲಕರಣೆಗಳ ಸಂಪೂರ್ಣ ಮೊತ್ತವನ್ನು ಪಾವತಿಸಿ empanel ಮಾಡಿರುವ ಸಂಸ್ಥೆಗಳಿಂದ ಸರಬರಾಜು ಪಡೆದಿದ್ದಲ್ಲಿ ಸಹಾಯಧನದ ಮೊತ್ತವನ್ನು **ಖಜಾನೆ-2/ಡಿಬಿಟಿ** ಮುಖಾಂತರ ರೇಷ್ಮೆ ಬೆಳೆಗಾರರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ

ಮಾಡುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.

- ಸಂಬಂಧಿಸಿದ ಜಿಲ್ಲೆಯ ಇಲಾಖಾ ಅಧಿಕಾರಿಗಳು ರೇಷ್ಮೆ ಬೆಳೆಗಾರರ ವತಿಯಿಂದ ಫಲಾನುಭವಿ ವಂತಿಕೆಯಾಗಿ ಶೇಕಡಾ 25ರಷ್ಟನ್ನು empanel ಸಂಸ್ಥೆಗೆ ಡಿಮಾಂಡ್ ಡ್ರಾಫ್ಟ್ ಮುಖಾಂತರ ಪಾವತಿಸಿ ಸಲಕರಣೆಗಳನ್ನು ರೇಷ್ಮೆ ಬೆಳೆಗಾರರಿಗೆ ಸರಬರಾಜು ಮಾಡಿರುವುದನ್ನು ಖಾತ್ರಿ ಪಡಿಸಿಕೊಂಡು, ರೇಷ್ಮೆ ಬೆಳೆಗಾರರಿಂದ ಸರಬರಾಜು ಸಂಸ್ಥೆಗೆ ಸಹಾಯಧನ ಮೊತ್ತ ಪಾವತಿಸಲು ಯಾವುದೇ ನಿರಾಪೇಕ್ಷಣೆ ಇರುವುದಿಲ್ಲವೆಂಬ ಬಗ್ಗೆ No Ojection Certificate (NOC). ರೇಷ್ಮೆ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ನಿರಾಕ್ಷೇಪಣಾ ಪತ್ರಕ್ಕೆ ರೇಷ್ಮೆ ಬೆಳೆಗಾರರು ಸಹಿ ಮಾಡಿ ನೀಡಿದ್ದಲ್ಲಿ ಸಹಾಯಧನದ ಮೊತ್ತವನ್ನು ಸಲಕರಣೆ ಸರಬರಾಜು ಮಾಡಿದ ಸಂಸ್ಥೆಗೆ **ಖಜಾನೆ-2/ಡಿಬಿಟಿ** ಮುಖಾಂತರ ಸಂಸ್ಥೆಯ ಬ್ಯಾಂಕ್ ಖಾತೆಗೆ ಪಾವತಿಸಬಹುದಾಗಿದೆ.
- ಸಲಕರಣೆ ಸರಬರಾಜು ಮಾಡಿದ ಸಂಸ್ಥೆಗೆ ಹಣ ಪಾವತಿಸುವಾಗ Tax Invoiceನಲ್ಲಿನ GSTಯ ಶೇ.2ರಷ್ಟು(CGST-1% + SGST-1%ರಂತೆ) ಮತ್ತು Tax Invoiceನಲ್ಲಿನ ಒಟ್ಟಾರೆ ಬಿಲ್ಲಿನ ಮೊತ್ತಕ್ಕೆ(Including GST) ಶೇ.2ರಷ್ಟು ಐಟಿ(IT)ಯನ್ನು ನಿಯಮಾನುಸಾರ ಕಟಾಯಿಸುವುದು ಹಾಗೂ ನಿಗದಿತ ದಿನಾಂಕದೊಳಗೆ ಟಿಡಿಎಸ್ (TDS) ಫೈಲ್ ಮಾಡುವುದು.

- ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ/ಅಧಿಕಾರಿಗಳು ಖರೀದಿಸಿರುವ ಸಲಕರಣೆಗಳ ಜೊತೆಯಲ್ಲಿ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
- ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು/ ದೃಢೀಕರಣಗಳಿರಬೇಕು.
- ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

**(ರೂ.ಲಕ್ಷಗಳಲ್ಲಿ)**

| ವಿವರ | ಘಟಕ ದರ | ಸಹಾಯಧನ(90%) |
|---|---|---|
| ರೇಷ್ಮೆ ಹುಳು ಸಾಕಾಣಿಕೆ ಸಲಕರಣೆ | 0.75 | 0.675 |

**ತಾಂತ್ರಿಕ ಸೇವಾ ಕೇಂದ್ರದ ವಲಯಾಧಿಕಾರಿಗಳು:**

- ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಪಡೆಯುವುದು ಹಾಗೂ ಅರ್ಜಿಯಲ್ಲಿನ ಫಲಾನುಭವಿಗಳ ಮಾಹಿತಿಯ ನೈಜತೆಯನ್ನು ಪರಿಶೀಲಿಸಿ ಆಯ್ಕೆಗೆ ಶಿಫಾರಸ್ಸು ಮಾಡುವ ಜವಾಬ್ದಾರಿಯು ವಲಯಾಧಿಕಾರಿಯದ್ದಾಗಿರುತ್ತದೆ.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ಸದರಿ ಬೆಳೆಗಾರರು ಈ ಹಿಂದಿನ ಸಾಲುಗಳಲ್ಲಿ ಇಲಾಖೆಯಲ್ಲಿ ಸಲಕರಣೆ ಖರೀದಿಗೆ ಸಹಾಯಧನ ಪಡೆದಿರುವ ಬಗ್ಗೆ ಪರಿಶೀಲಿಸಿ ಪುನರಾವರ್ತನೆಯಾಗದಿರುವುದನ್ನು ಖಾತ್ರಿಪಡಿಸಿಕೊಂಡು ಪ್ರಸ್ತಾವನೆಯನ್ನು ತಯಾರಿಸಿ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಸ್ತಾವನೆ ತಯಾರಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ವಲಯಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು:**

- ವಲಯಾಧಿಕಾರಿಗಳು ಸಲ್ಲಿಸಿರುವ ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸುವುದು.
- ಅರ್ಹವಾಗುವುದಾದಲ್ಲಿ, ಬೆಳೆಗಾರರ ಅರ್ಜಿಯ ಅಡಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ದೃಢೀಕರಿಸಬೇಕು ಹಾಗೂ ಜೇಷ್ಠತೆ ಆಧಾರದ ಮೇಲೆ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು.
- ನಮೂನೆಯಲ್ಲಿ ಸ್ಥಳದ ಮಹಜರ್ ಜರುಗಿಸಿ, ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

**ಸಂಬಂಧಪಟ್ಟ ರೇಷ್ಮೆ ಸಹಾಯಕ ನಿರ್ದೇಶಕರು:**

- ಸಲಕರಣೆ ಖರೀದಿಸಿರುವುದನ್ನು ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಗಿ ಸಹಿ ಮಾಡಿ ವಿತ್ತೀಯ ಪ್ರಾಧಿಕಾರ ಆಗಿದ್ದಲ್ಲಿ ಮಂಜೂರಾತಿ ನೀಡುವುದು.

**ಕಾರ್ಯಕ್ರಮ: 2**

**ವಿಶೇಷ ಘಟಕ ಉಪ ಯೋಜನೆ/ಗಿರಿಜನ ಉಪ ಯೋಜನೆಯಡಿ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ:**

ರೇಷ್ಮೆ ಹುಳುಗಳನ್ನು ಆರೋಗ್ಯಕರ ವಾತಾವರಣದಲ್ಲಿ ಸಾಕಾಣಿಕೆ ಮಾಡುವುದರಿಂದ ಉತ್ತಮ ಗುಣಮಟ್ಟದ ರೇಷ್ಮೆ ಗೂಡು, ಅಧಿಕ ಇಳುವರಿ ಹಾಗೂ ಅಧಿಕ ಆದಾಯ ಪಡೆಯಬಹುದಾಗಿದೆ. ಪ್ರತ್ಯೇಕ ರೇಷ್ಮೆ ಹುಳು ಸಾಕಾಣಿಕೆ ಮನೆಯಲ್ಲಿ ಸೋಂಕು ನಿವಾರಣೆಯನ್ನು ಸಮರ್ಪಕವಾಗಿ ಕೈಗೊಳ್ಳಬಹುದಾಗಿದ್ದು, ಉತ್ತಮ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ.

ಕೇಂದ್ರ ರೇಷ್ಮೆ ಮಂಡಳಿಯು ಸಿಲ್ಕ್ ಸಮಗ್ರ-2ರಡಿ ಘಟಕ ದರ/ಸಹಾಯಧನಗಳನ್ನು ನೀಡಿರುತ್ತದೆ. ಇಲಾಖೆಯಲ್ಲಿಯೂ ಸಹ ಸದರಿ ಘಟಕ ದರ/ಸಹಾಯಧನಗಳನ್ನು ಅಳವಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರೇಷ್ಮೆ ಅಭಿವೃದ್ಧಿ ಯೋಜನೆಯಲ್ಲಿ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣದ ಘಟಕ ದರಗಳನ್ನು ಮತ್ತು ಸಹಾಯಧನದ ಮೊತ್ತ ಹಾಗೂ ಇರಬೇಕಾದ ಹಿಪ್ಪುನೇರಳೆ ವಿಸ್ತೀರ್ಣದ ವಿವರಗಳನ್ನು ಮತ್ತು ಪರಿಮಿತಿಗಳನ್ನು ಈ ಕೆಳಗೆ ನೀಡಿದೆ.

**(ರೂ.ಲಕ್ಷಗಳಲ್ಲಿ)**

| ಮನೆಯ ಅಳತೆ (ಚದರಡಿ) | ಘಟಕ ದರ | ವಿವರ | ಕನಿಷ್ಠ ಇರಬೇಕಾದ | | ಸಹಾಯಧನ |
|---|---|---|---|---|---|
| | | | ಹಿಪ್ಪುನೇರಳೆ ಕ್ಷೇತ್ರ (ಎಕರೆಗಳಲ್ಲಿ) | ಸಾಕುವ ಮೊಟ್ಟೆಗಳು (ಪ್ರತಿ ತಂಡದಲ್ಲಿ) | |
| ಕಡಿಮೆ ವೆಚ್ಚದ ಹುಳು ಸಾಕಾಣಿಕೆ ಶೆಡ್ ನಿರ್ಮಾಣ - 225-1000 ಚದರ ಅಡಿಯವರೆಗೆ | 1 ಚದರ ಅಡಿಗೆ ರೂ.120/-ರಂತೆ ಪ್ರೋರೇಟಾ ಆಧರಿಸಿ ಕನಿಷ್ಠ 225 ಚದರ ಅಡಿಯಿಂದ ಗರಿಷ್ಠ 1000 ಚದರ ಅಡಿಯವರೆಗೆ ಸಹಾಯಧನ ನೀಡಲಾಗುತ್ತದೆ. | | ಕನಿಷ್ಠ 0.20<br>ಗರಿಷ್ಠ 1.20 | 50 - 250 | ಕನಿಷ್ಠ ರೂ.0.270<br>ಗರಿಷ್ಠ ರೂ.1.200 |
| 225 | 0.900 | ರೇಷ್ಮೆ ಹುಳು ಸಾಕಾಣಿಕೆ ಮನೆ | 0.20 | 50 | 0.810(90%) |
| 600 | 3.250 | | 1.00 | 100 - 150 | 2.925(90%) |
| 1000 | 4.500 | | 1.20 | 150 - 250 | 4.050(90%) |

1. ಹುಳು ಸಾಕಾಣಿಕೆ ಮನೆಯು, ರೋಗದ ಸೋಂಕು ತಡೆಯಲು, ಪ್ರತ್ಯೇಕವಾಗಿರಬೇಕು ಹಾಗೂ ಇದಕ್ಕೆ ಹೊಂದಿಕೊಂಡಂತೆ ವಾಸದ ಮನೆ ಇರಬಾರದು.

2. ಹುಳು ಸಾಕಾಣಿಕೆ ಮನೆಯ ನೆಲ ಹಾಗೂ ಗೋಡೆಗಳು ಸಿಮೆಂಟ್‌ನಿಂದ ಗಿಲಾವು ಮಾಡಿಸಿದ್ದು, ಹುಳು ಸಾಕಾಣಿಕೆ ಮನೆಗಳಲ್ಲಿ ಉಷ್ಣಾಂಶ ಮತ್ತು ಶೈತ್ಯಾಂಶ ನಿರ್ವಹಿಸಲು ಸಾಧ್ಯವಾಗುವಂತೆ ಹಾಗೂ ಪರಿಣಾಮಕಾರಿ ಸೋಂಕು ನಿವಾರಣೆ ಮಾಡಲು ಸಾಧ್ಯವಾಗುವಂತೆ ಇರಬೇಕು.(ಗಾಳಿಯಾಡದಂತೆ ಮಾಡಲು ಅವಕಾಶವಿರಬೇಕು).
3. ಹುಳು ಸಾಕಾಣಿಕೆ ಮನೆಯು ರೇಷ್ಮೆ ಹುಳು ಸಾಕಾಣಿಕೆ ಮಾಡಲು ಸಾಧ್ಯವಾಗುವಂತೆ ಸಾಕಷ್ಟು ಗಾಳಿಯಾಡಲು ಕಿಟಕಿ/ಗವಾಕ್ಷಿಗಳು ಇರಬೇಕು.
4. ನಿಗದಿತ ನಕ್ಷೆಯಂತೆ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ ಮಾಡಿರಬೇಕು(ನಕ್ಷೆಯನ್ನು ಅಡಕಗೊಳಿಸಿದೆ)(225, 600 ಮತ್ತು 1000 ಚದರಡಿಗಳಿಗೆ ಮಾತ್ರ). ಈ ನಿಯಮ ಕಡಿಮೆ ವೆಚ್ಚದ ಶೆಡ್‌ಗೆ ಅನ್ವಯಿಸುವುದಿಲ್ಲ.
5. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಬ್ಯಾಂಕ್‌ನಿಂದ ಆರ್ಥಿಕ ನೆರವು ಕೂಡ ದೊರಕಿಸಬಹುದಾಗಿದೆ.
6. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕಾಗಿ ರೈತರು ಅರ್ಜಿಯನ್ನು ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ,ರವರಿಗೆ ಸಲ್ಲಿಸಬೇಕು. ರೈತರು ಅರ್ಜಿ ಸಲ್ಲಿಸಿದ್ದಕ್ಕೆ ರೈತರಿಗೆ ಸ್ವೀಕೃತಿ ನೀಡುವುದು ಮತ್ತು ವಹಿಯಲ್ಲಿ ದಾಖಲಿಸುವುದು. ರೇಷ್ಮೆ ವಿಸ್ತರಣಾಧಿಕಾರಿಗಳು ತಾಂತ್ರಿಕ ಸೇವಾ ಕೇಂದ್ರ,ರವರು ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ ಮಾಡುವ ಸ್ಥಳವನ್ನು ಪರಿಶೀಲಿಸಿ, ಶಿಫಾರಸ್ಸು ನೀಡಬೇಕು. ಸಂಬಂಧಿಸಿದ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು ಸಹ ಸ್ಥಳವನ್ನು ಪರಿಶೀಲಿಸಿ ದೃಢೀಕರಿಸಿ ಶಿಫಾರಸ್ಸು ಮಾಡಿ ಅನುಮೋದನೆ ನೀಡಿದ ನಂತರ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ,ರವರು ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕಾಗಿ ಕಾರ್ಯಾದೇಶ ನೀಡುವುದು.
7. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣದ ಸ್ಥಳದ ಜಮೀನಿನ ಮತ್ತು ವಾರಸುದಾರರ ಮಾಹಿತಿಯನ್ನು ದಿಶಾಂಕ್((Dishank app)ಆಪ್‌ನಲ್ಲಿ ಇಂಧೀಕರಿಸುವುದು.
8. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ಪಡೆಯಲು ಕೊನೆಯ ಹಂತದ ಒಂದು ಫೋಟೋವನ್ನು ತೆಗೆಯಬೇಕು, ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ ಸಂಪೂರ್ಣವಾದ ನಂತರ(GPS ಫೋಟೋ ಪ್ರತಿಗಳು - ಫೋಟೋ ಪ್ರತಿಗಳಲ್ಲಿ Lattitude ಮತ್ತು Longitude ನಮೂದಿಸಿರಬೇಕು).

9. **ರೇಷ್ಮೆ ಹುಳು ಸಾಕಾಣಿಕೆ ಮನೆಗಳಿಗೆ ಸಹಾಯಧನ ನೀಡುವ ಮುನ್ನಾ ಸರ್ಕಾರದ ಇತರೆ ಯೋಜನೆಗಳಡಿ ಸದರಿ ಮನೆಗೆ ಆರ್ಥಿಕ ಸೌಲಭ್ಯ ಪಡೆದಿರಬಾರದು ಎಂಬುದನ್ನು ಖಾತರಿ ಪಡಿಸಿಕೊಂಡು ಪ್ರಸ್ತಾವನೆ ತಯಾರಿಕೆ/ಮಂಜೂರಾತಿ ನೀಡುವುದು.**

10. ತದನಂತರ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲು ರೈತರಿಂದ ಅರ್ಜಿ ಪಡೆಯಬೇಕು. ಅರ್ಜಿಗಳನ್ನು ಜೇಷ್ಠತೆಯ ಆಧಾರದ ಮೇಲೆ ವಹಿಗಳಲ್ಲಿ ದಾಖಲಿಸಬೇಕು. ಇದರೊಂದಿಗೆ ಅಗತ್ಯವಿರುವ ದಾಖಲಾತಿಗಳೊಂದಿಗೆ ಸಹಾಯಧನ ಮಂಜೂರಾತಿಗೆ ಪ್ರಸ್ತಾವನೆ ಸಿದ್ಧಪಡಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಬೇಕು.

11. ರೂ.50/- ಛಾಪಾ ಕಾಗದದ ಮೇಲೆ 5 ವರ್ಷಗಳವರೆಗೆ ಹುಳು ಸಾಕಾಣಿಕೆ ಮನೆ ಉದ್ದೇಶಿತ ಹುಳು ಸಾಕಾಣಿಕೆ ಮಾಡಲು ಮಾತ್ರ ಉಪಯೋಗಿಸಲು ಹಾಗೂ ವರ್ಷದಲ್ಲಿ ಕನಿಷ್ಠ ಎರಡು ದ್ವಿತಳಿ ಹುಳು ಸಾಕಾಣಿಕೆ ಮಾಡುವುದಾಗಿ ಮುಚ್ಚಳಿಕೆ ಬರೆದುಕೊಡಬೇಕು.

12. ರೇಷ್ಮೆ ಬೆಳೆಗಾರರು ತಮ್ಮ ಹೆಸರಿನಲ್ಲಿ ಮೇಲೆ ವಿವರಿಸಿರುವ ಕೋಷ್ಟಕ ರೀತ್ಯಾ ಕನಿಷ್ಠ ವಿಸ್ತೀರ್ಣದಷ್ಟು ಹಿಪ್ಪುನೇರಳೆ ತೋಟ ಹೊಂದಿರಬೇಕು ಹಾಗೂ ಅಂತಹ ದಾಖಲಾತಿ ಇರುವ ಪಹಣಿಯನ್ನು ಒದಗಿಸಬೇಕು.

13. ರೇಷ್ಮೆ ಬೆಳೆಗಾರರು ದ್ವಿತಳಿ/ಸುಧಾರಿತ ಮಿಶ್ರತಳಿ ರೇಷ್ಮೆ ಬೆಳೆಗಾರರಾಗಿದ್ದು, ವರ್ಷಕ್ಕೆ ಕನಿಷ್ಠ ಎರಡು ದ್ವಿತಳಿ ಹುಳು ಸಾಕಾಣಿಕೆ ಮಾಡಬೇಕು**(ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರಿಗೆ ದ್ವಿತಳಿ ಬೆಳೆ ಮಾಡಬೇಕೆಂಬ ನಿಯಮ ಇರುವುದಿಲ್ಲ).**

14. ರೇಷ್ಮೆ ಬೆಳೆಗಾರರು ರೇಷ್ಮೆ ಹುಳು ಸಾಕಾಣಿಕಾ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.

15. ರೇಷ್ಮೆ ಹುಳು ಸಾಕಾಣಿಕೆ ಮನೆಯು ನಿಗದಿ ಪಡಿಸಿದ ವಿಸ್ತೀರ್ಣದಲ್ಲಿದ್ದು, ಅದರ ಒಂದು ಭಾಗಕ್ಕೆ ಸೊಪ್ಪು ಶೇಖರಣಾ ಕೊಠಡಿ ಹೊಂದಿಕೊಂಡಿದ್ದಲ್ಲಿ ಅಂತಹ ಮನೆಗಳಿಗೆ ಸಹಾಯಧನ ನೀಡಲು ಪರಿಗಣಿಸಬಹುದಾಗಿದೆ.

16. ರೇಷ್ಮೆ ಹುಳು ಸಾಕಾಣಿಕೆ ಮನೆಯ ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ **ಖಜಾನೆ-2/ಡಿಬಿಟಿ** ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.

17. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ/ಅಧಿಕಾರಿಗಳು ರೇಷ್ಮೆ ಹುಳು ಸಾಕಾಣಿಕೆ ಮನೆಯ ಮುಂದೆ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.

18. ಇಲಾಖೆಯು ನಿಗದಿ ಪಡಿಸಿದ ನಮೂನೆಯಲ್ಲಿ ಅರ್ಜಿ, ಸ್ಥಳ ಪರಿಶೀಲನಾ ವರದಿ(ಕಾರ್ಯಾದೇಶ ನೀಡುವ ಮುನ್ನ), ಕಾರ್ಯಾದೇಶ, ಮಹಜರ್(ಸ್ಥಳ ಪರಿಶೀಲನಾ ವರದಿ ಕಾರ್ಯದ ನಂತರ), ಶಿಫಾರಸ್ಸು/ದೃಢೀಕರಣಗಳಿರಬೇಕು.

19. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲು ರೇಷ್ಮೆ ವಿಸ್ತರಣಾಧಿಕಾರಿಗಳು ಶಿಫಾರಸ್ಸಿನೊಂದಿಗೆ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು. ರೇಷ್ಮೆ ಸಹಾಯಕ ನಿರ್ದೇಶಕರು ಪರಿಶೀಲಿಸಿ ಶಿಫಾರಸ್ಸಿನೊಂದಿಗೆ ಅನುಮೋದಿಸಿ, ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಕಳುಹಿಸುವುದು. ರೇಷ್ಮೆ ವಿಸ್ತರಣಾಧಿಕಾರಿಗಳು ಫಲಾನುಭವಿಗಳಿಗೆ ಕಾರ್ಯಾದೇಶ ನೀಡುವುದು.

20. ರೇಷ್ಮೆ ಹುಳು ಸಾಕಾಣಿಕೆ ಮನೆಗೆ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ, ರೇಷ್ಮೆ ಹುಳು ಸಾಕಾಣಿಕೆ ಮನೆಯ ಮೇಲೆ ವಿವರಗಳನ್ನು ಅಳವಡಿಸುವುದು.+

21. ರೇಷ್ಮೆ ಹುಳು ಸಾಕಾಣಿಕೆ ಮನೆ ಅಥವಾ ವಾಸದ ಮನೆಯು ಒಂದನೇ ಮಹಡಿಯಲ್ಲಿದ್ದು/ ರೇಷ್ಮೆ ಹುಳು ಸಾಕಾಣಿಕೆ ಮನೆ ಅಥವಾ ವಾಸದ ಮನೆಯು ಕೆಳ ಮಹಡಿಯಲ್ಲಿದ್ದು, ಇಂತಹ ಪ್ರಕರಣಗಳಲ್ಲಿ ಹುಳು ಸಾಕಾಣಿಕೆ ಮನೆಗೆ ಪ್ರತ್ಯೇಕ ಪ್ರವೇಶ ದ್ವಾರ ಇದ್ದಲ್ಲಿ ಸಹಾಯಧನದ ಸವಲತ್ತನ್ನು ನೀಡಬಹುದಾಗಿದೆ.

22. ನಿಗಧಿತ ಹಿಪ್ಪುನೇರಳೆ ತೋಟದ ವಿಸ್ತೀರ್ಣದೊಳಗೆ ಹುಳು ಸಾಕಾಣಿಕೆ ಮನೆಯು ನಿರ್ಮಿತವಾಗಿದ್ದಲ್ಲಿ(1 ರಿಂದ 2 ಗುಂಟೆ ಪ್ರದೇಶದಲ್ಲಿ) ಅಂತಹ ಹುಳು ಸಾಕಾಣಿಕೆ ಮನೆಗೆ ಸಹಾಯಧನ ನೀಡುವುದು.

**23.** ಜಂಟಿ ಖಾತೆಗೆ ಸಂಬಂಧಪಟ್ಟಂತೆ, ಖಾತೆಯ ಇತರ ಸದಸ್ಯರ ನಿರಾಪೇಕ್ಷಣಾ ಪತ್ರವನ್ನು ಪಡೆದು ಅಂತಹ ಪ್ರಕರಣಗಳನ್ನು ಸಹಾಯಧನ ನೀಡಲು ಪರಿಗಣಿಸಬಹುದಾಗಿದೆ.

**24.** ಹಿಪ್ಪುನೇರಳೆ ತೋಟ ಮತ್ತು ರೇಷ್ಮೆ ಹುಳು ಸಾಕಾಣಿಕೆ ಮನೆಯ ಸ್ವತ್ತಿನ ದಾಖಲಾತಿ ಒಂದೇ ಕುಟುಂಬದ ಬೇರೆ ಬೇರೆ ಸದಸ್ಯರ ಹೆಸರಿನಲ್ಲಿ ಇದ್ದಲ್ಲಿ, ನಿರಾಪೇಕ್ಷಣಾ ಪತ್ರವನ್ನು ಪಡೆದು ಅಂತಹ ಪ್ರಕರಣಗಳನ್ನು ಸಹ ಸಹಾಯಧನ ನೀಡಲು ಪರಿಗಣಿಸಬಹುದಾಗಿದೆ.

**25.** 600 ಚದರ ಅಡಿ ರೇಷ್ಮೆ ಹುಳು ಸಾಕಾಣಿಕೆ ಮನೆಗೆ ಸಂಬಂಧಪಟ್ಟಂತೆ ಕನಿಷ್ಠ 18 ಅಡಿ ಅಗಲ ಇದ್ದು, ಮನೆಯ ಒಟ್ಟಾರೆ ವಿಸ್ತೀರ್ಣ 600 ಚದರ ಅಡಿ ಇದ್ದಲ್ಲಿ, ಅಂತಹ ರೇಷ್ಮೆ ಹುಳು ಸಾಕಾಣಿಕೆ ಮನೆಗಳಿಗೆ ಸಹಾಯಧನ ಸೌಲಭ್ಯ ನೀಡುವುದು.

**26.** 1000 ಚದರ ಅಡಿ ರೇಷ್ಮೆ ಹುಳು ಸಾಕಾಣಿಕೆ ಮನೆಗೆ ಸಂಬಂಧಪಟ್ಟಂತೆ ಕನಿಷ್ಠ 18 ಅಡಿ ಅಗಲ ಇದ್ದು, ಇದ್ದು, ಮನೆಯ ಒಟ್ಟಾರೆ ವಿಸ್ತೀರ್ಣ 1000 ಚದರ ಅಡಿ ಇದ್ದಲ್ಲಿ, ಅಂತಹ ರೇಷ್ಮೆ ಹುಳು ಸಾಕಾಣಿಕೆ ಮನೆಗಳಿಗೆ ಸಹಾಯಧನ ಸೌಲಭ್ಯ ನೀಡುವುದು.

**27.** 1000 ಚದರ ಅಡಿ ಮನೆಗೆ ಉದ್ದ ಕನಿಷ್ಠ 48 ಅಡಿ ಮತ್ತು 600 ಚದರ ಅಡಿ ಮನೆಗೆ ಉದ್ದ ಕನಿಷ್ಠ 28 ಅಡಿ ಇರಬೇಕು.

**28.** 1000 ಚದರ ಅಡಿ ಮತ್ತು 600 ಚದರ ಅಡಿ ಮನೆಗಳಿಗೆ ಸಹಾಯಧನ ನೀಡುವಾಗ ಎತ್ತರ ಕನಿಷ್ಠ 10 ಅಡಿ ಇರಬೇಕು.

**29.** ಹಿಂದಿನ ಸಾಲುಗಳಲ್ಲಿ ವಿವಿಧ ಯೋಜನೆಗಳಡಿ ಕಡಿಮೆ ವೆಚ್ಚದ ಶೆಡ್ ನಿರ್ಮಾಣ ಮಾಡಿ ಸಹಾಯಧನ ಸೌಲಭ್ಯವನ್ನು ಪಡೆದಿರುವಂತಹ ಫಲಾನುಭವಿಗಳು ಪ್ರಸಕ್ತ ಸಾಲಿನಲ್ಲಿ ಪಕ್ಕಾ(225/600/1000 ಚದರಡಿ) ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ ಮಾಡಿದ್ದಲ್ಲಿ, ಸಹಾಯಧನ ನೀಡಲು ಅವಕಾಶವಿರುತ್ತದೆ. ಈಗಾಗಲೇ ಕಡಿಮೆ ವೆಚ್ಚದ ರೇಷ್ಮೆ ಹುಳು ಸಾಕಾಣಿಕೆ ಶೆಡ್ ನಿರ್ಮಾಣಕ್ಕೆ ಪಡೆದಿರುವ ಸಹಾಯಧನವನ್ನು **"ಸರ್ಕಾರದ ಲೆಕ್ಕ ಶೀರ್ಷಿಕೆ 2851-00-911-0-02ಗೆ ಹಿಂಬರಿಸಿ, ಹಿಂಬರಿಸುವ ಚಲನ್‌ನಲ್ಲಿ ಕಡಿಮೆ ವೆಚ್ಚದ ರೇಷ್ಮ ಹುಳು ಸಾಕಾಣಿಕೆ ಶೆಡ್ ನಿರ್ಮಾಣಕ್ಕಾಗಿ ಪಡೆದ ಸರ್ಕಾರದ ಸಹಾಯಧನವನ್ನು ಹಿಂಬರಿಸುತ್ತಿರುವ ಕುರಿತು"** ಎಂದು ನಮೂದಿಸಿ ಅರ್ಜಿದಾರರು ನಿರ್ಮಾಣ ಮಾಡಿರುವ ಪಕ್ಕಾ ರೇಷ್ಮೆ ಹುಳು ಸಾಕಾಣಿಕೆ ಮನೆಯ ಪ್ರಸಕ್ತ ಪ್ರಸ್ತಾವನೆಯನ್ನು ಇಲಾಖೆಯ ಮಾರ್ಗಸೂಚಿಯನ್ವಯ ಸಹಾಯಧನ ಮಂಜೂರಾತಿ ನೀಡಲು ಪರಿಗಣಿಸುವುದು. ಕಡಿಮೆ ವೆಚ್ಚದ ರೇಷ್ಮೆ ಹುಳು ಸಾಕಾಣಿಕೆ ಶೆಡ್ ನಿರ್ಮಿಸಿ ಸಹಾಯಧನದ ಸೌಲಭ್ಯ ಪಡೆದಿರುವ ಫಲಾನುಭವಿಗಳು ಒಂದು ವೇಳೆ ಈಗಾಗಲೇ ಪಡೆದಿರುವ ಸಹಾಯಧನವನ್ನು ಹಿಂಬರಿಸಲು ಶಕ್ತರಿಲ್ಲದಿದ್ದಲ್ಲಿ ಅಂತಹ ಸಂದರ್ಭಗಳಲ್ಲಿ ಪಕ್ಕಾ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕಾಗಿ ಮಂಜೂರು ಮಾಡುವ ರಾಜ್ಯ ಪಾಲಿನ ಸಹಾಯಧನದಲ್ಲಿ ಕಟಾವುಗೊಳಿಸಿ ಉಳಿಕೆ ಸಹಾಯಧನವನ್ನು ಫಲಾನುಭವಿಗೆ ಪಾವತಿಸುವುದು.

30. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ಸೌಲಭ್ಯ ಒದಗಿಸುವಲ್ಲಿ ವ್ಯತ್ಯಾಸಗಳೇನಾದರೂ ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

31. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ ಮಂಜೂರಾತಿ ನೀಡಲು ಮಂಜೂರಾತಿ ಪ್ರಾಧಿಕಾರದವರೆಗೆ ಎಲ್ಲಾ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗಳು ಖುದ್ದಾಗಿ ರೇಷ್ಮೆ ಹುಳು ಸಾಕಾಣಿಕೆ ಮನೆಯನ್ನು ಪರಿವೀಕ್ಷಿಸಿ ಮಂಜೂರಾತಿ ನೀಡಲು ಶಿಫಾರಸ್ಸು ಮಾಡುವುದು ಕಡ್ಡಾಯವಾಗಿರುತ್ತದೆ.

**ತಾಂತ್ರಿಕ ಸೇವಾ ಕೇಂದ್ರದ ವಲಯಾಧಿಕಾರಿಗಳು:**

- ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಪಡೆಯುವುದು ಹಾಗೂ ಅರ್ಜಿಯಲ್ಲಿನ ಫಲಾನುಭವಿಗಳ ಮಾಹಿತಿಯ ನೈಜತೆಯನ್ನು ಪರಿಶೀಲಿಸಿ ಆಯ್ಕೆಗೆ ಶಿಫಾರಸ್ಸು ಮಾಡುವ ಜವಾಬ್ದಾರಿಯು ವಲಯಾಧಿಕಾರಿಯದ್ದಾಗಿರುತ್ತದೆ.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ಸದರಿ ಬೆಳೆಗಾರರು ಈ ಹಿಂದೆ ಇಲಾಖೆಯಲ್ಲಿ ಅಥವಾ ಬೇರೆ ಇಲಾಖೆಯ ಯೋಜನೆಗಳಡಿ ಸಹಾಯಧನ ಸೌಲಭ್ಯವನ್ನು ಪಡೆದಿಲ್ಲದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪ್ರಸ್ತಾವನೆಯನ್ನು ತಯಾರಿಸಿ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಸ್ತಾವನೆ ತಯಾರಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ವಲಯಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು:**

- ವಲಯಾಧಿಕಾರಿಗಳು ಸಲ್ಲಿಸಿರುವ ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸುವುದು. ಜೇಷ್ಠತೆ ಆಧಾರದಲ್ಲಿ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು. ರೈತರಿಂದ ಅರ್ಜಿ ಪಡೆದಿದ್ದಕ್ಕೆ ರೈತರಿಗೆ ಸ್ವೀಕೃತಿ ನೀಡುವುದು ಹಾಗೂ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಕಾರ್ಯಾದೇಶವನ್ನು ಸಂಬಂಧಿಸಿದ ರೇಷ್ಮೆ ಬೆಳೆಗಾರರಿಗೆ ನೀಡುವುದು.
- ಅರ್ಹವಾಗುವುದಾದಲ್ಲಿ, ಬೆಳೆಗಾರರ ಅರ್ಜಿಯ ಅಡಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ದೃಢೀಕರಿಸಬೇಕು.
- ನಮೂನೆಯಲ್ಲಿ ಸ್ಥಳ ಪರಿಶೀಲನಾ ವರದಿಯಂತೆ ಖುದ್ದಾಗಿ ಪರಿಶೀಲಿಸಿ ಮಹಜರ್ ಜರುಗಿಸಿ, ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.
- ಪ್ರಸ್ತಾವನೆ ತಯಾರಿಕೆ ಹಾಗೂ ಪರಿಶೀಲನೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ರೇಷ್ಮೆ ವಿಸ್ತರಣಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ಸಂಬಂಧಪಟ್ಟ ರೇಷ್ಮೆ ಸಹಾಯಕ ನಿರ್ದೇಶಕರು:**

- ಸ್ಥಳ ಪರಿಶೀಲಿಸಿ, ದೃಢೀಕರಿಸಿ ಕಾರ್ಯಾದೇಶ ನೀಡಲು ಶಿಫಾರಸ್ಸು ಮಾಡಿ ಅನುಮೋದನೆ ನೀಡುವುದು.
- ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿ ಮಾಡಿ ವಿತ್ತೀಯ ಪ್ರಾಧಿಕಾರ ಆಗಿದ್ದಲ್ಲಿ ಮಂಜೂರಾತಿ ನೀಡುವುದು. ಇಲ್ಲವಾದಲ್ಲಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ರೇಷ್ಮೆ ಉಪನಿರ್ದೇಶಕರಿಗೆ ಸಲ್ಲಿಸಬೇಕು.
- ಪ್ರಸ್ತಾವನೆ ಪರಿಶೀಲನೆ ಹಾಗೂ ಸಹಾಯಧನ ನೀಡಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಸಂಬಂಧಿಸಿದ ರೇಷ್ಮೆ ಸಹಾಯಕ ರೇಷ್ಮೆ ನಿರ್ದೇಶಕರೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ಸಂಬಂಧಪಟ್ಟ ರೇಷ್ಮೆ ಉಪನಿರ್ದೇಶಕರು:**

- ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿ ಮಾಡಿ ವಿತ್ತೀಯ ಪ್ರಾಧಿಕಾರ ಆಗಿದ್ದಲ್ಲಿ ಮಂಜೂರಾತಿ ನೀಡುವುದು. ಇಲ್ಲವಾದಲ್ಲಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ರೇಷ್ಮೆ ಜಂಟಿ ನಿರ್ದೇಶಕರಿಗೆ ಸಲ್ಲಿಸಬೇಕು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು. ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಮಂಜೂರು ಮಾಡುವುದಾದರೆ ಸಹಾಯಧನವನ್ನು ವಿತ್ತೀಯ ಪ್ರತ್ಯಾಧಿಕಾರದ ಅನ್ವಯ ಮಂಜೂರಾತಿ ನೀಡುವುದು. ಇಲ್ಲವಾದಲ್ಲಿ ಸಂಬಂಧಿಸಿದ ಜಂಟಿ ನಿರ್ದೇಶಕರಿಗೆ ಮಂಜೂರಾತಿಗಾಗಿ ಸಲ್ಲಿಸುವುದು.
- ಪ್ರಸ್ತಾವನೆ ಪರಿಶೀಲನೆ, ಮಂಜೂರಾತಿ ಹಾಗೂ ಸಹಾಯಧನ ನೀಡಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಸಂಬಂಧಿಸಿದ ರೇಷ್ಮೆ ಉಪನಿರ್ದೇಶಕರೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ಸಂಬಂಧಪಟ್ಟ ರೇಷ್ಮೆ ಜಂಟಿ ನಿರ್ದೇಶಕರು:**

- ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಹುಳು ಸಾಕಾಣಿಕೆ ಮನೆಗೆ ಭೇಟಿ ನೀಡಿ ಪರಿಶೀಲಿಸುವುದು. ಸಹಾಯಧನವನ್ನು ವಿತ್ತೀಯ ಪ್ರತ್ಯಾಧಿಕಾರದ ಅನ್ವಯ ಮಂಜೂರಾತಿ ನೀಡುವುದು. ಇಲ್ಲವಾದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ರವರ ಕಛೇರಿಗೆ ಮಂಜೂರಾತಿಗಾಗಿ ಸಲ್ಲಿಸುವುದು.
- ಪ್ರಸ್ತಾವನೆ ಪರಿಶೀಲನೆ, ಮಂಜೂರಾತಿ ಹಾಗೂ ಸಹಾಯಧನ ನೀಡಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ಕಾರ್ಯಕ್ರಮ 3**

**ವಿಶೇಷ ಘಟಕ ಉಪ ಯೋಜನೆ/ಗಿರಿಜನ ಉಪ ಯೋಜನೆಯಡಿ ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್) ನಿರ್ಮಾಣಕ್ಕೆ ಸಹಾಯಧನ:**

ಹಣ್ಣಾಗಿರುವ ಹುಳುಗಳನ್ನು ವಾತಾವರಣದಲ್ಲಿ ಆಗುವ ಉಷ್ಣಾಂಶ ಮತ್ತು ಶೈತ್ಯಾಂಶಗಳ ವೈಪರೀತ್ಯಗಳಿಂದ ಕಾಪಾಡಿ ಉತ್ತಮ ಗುಣಮಟ್ಟದ ಗೂಡುಗಳನ್ನು ಕಟ್ಟುವ ಪರಿಸರ ಒದಗಿಸುವುದು ಮೌಂಟಿಂಗ್ ಹಾಲ್ ನಿರ್ಮಾಣದ ಉದ್ದೇಶ.

ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್) ನಿರ್ಮಾಣ ಮಾಡಲು ಸಹಾಯಧನದ ವಿವರಗಳು ಕೆಳಕಂಡಂತಿದೆ.

**ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್) ಪರಿಗಣಿಸಲು ಪರಿಮಿತಿಗಳು(ಪ್ಯಾರಾ ಮೀಟರ್ಸ್)**

**(ರೂ.ಲಕ್ಷಗಳಲ್ಲಿ)**

| ಹಣ್ಣು ಹುಳುವಿನ ಮನೆಯ ಉದ್ದ, ಅಗಲ, ವಿಸ್ತೀರ್ಣ (ಚದರ ಅಡಿಗಳಲ್ಲಿ) | ಮನೆಯ ಛಾವಣಿ ಮಾದರಿ | ಸಹಾಯಧನ | ಹಿಪ್ಪುನೇರಳೆ ಕ್ಷೇತ್ರ |
|---|---|---|---|
| 20 X 30 = 600 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.24 | 1 ಎಕರೆ |
| 20 X 50 = 1000 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.340 | 1.5 ಎಕರೆ |
| 25 X 50 = 1250 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.50 | 2 ಎಕರೆ |
| 30 X 50 = 1500 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.60 | 2.5 ಎಕರೆ |
| 30 X 60 = 1800 | ಮಂಗಳೂರು ಹೆಂಚು/ಎ.ಸಿ ಶೀಟ್/ ಆರ್‌ಸಿಸಿ | 0.75ಕ್ಕೆ ಮಿತಿಗೊಳಿಸಿದೆ | 3 ಎಕರೆ |

ಎತ್ತರ ಕನಿಷ್ಠ 10 ಅಡಿ(12 ಅಡಿಗಿಂತ ಹೆಚ್ಚಿರುವುದು ಸೂಕ್ಷ್ಮ ವಾತಾವರಣ ನಿರ್ವಹಣೆಗೆ ಸಹಕಾರಿಯಲ್ಲ)

1. ಉದ್ದ – ಪೂರ್ವ – ಪಶ್ಚಿಮವಾಗಿಯೂ, ಅಗಲ – ಉತ್ತರ – ದಕ್ಷಿಣವಾಗಿಯೂ ಇರುವುದು ಅವಶ್ಯಕ.

2. ಮೂರು ಅಡಿ ಎತ್ತರದ ಗೋಡೆ ಕಟ್ಟಿ, ಅದರ ನಂತರದ ಎತ್ತರಕ್ಕೆ ಗಟ್ಟಿ ಚಿಕನ್ ಮೆಷ್ ತಡಿಕೆ ಇರಬೇಕು.
3. ಒಂದೇ ಬದಿಗೆ ಇಳಿಜಾರು ಮೇಲ್ಛಾವಣಿ(ಎ.ಸಿ ಶೀಟ್ ಅಥವಾ ಹೆಂಚು), ಆದರೆ, ಉತ್ತರದಲ್ಲಿ ಅತಿ ಹೆಚ್ಚು ಎತ್ತರವಿದ್ದು, ದಕ್ಷಿಣದಲ್ಲಿ ಅತಿ ಕಡಿಮೆ ಎತ್ತರ ಇರುವಂತೆ ಇಳಿಜಾರು ಆಗಿರಬೇಕು.
4. ಮಳೆಯ ನೀರು ಒಳಗೆ ಬರದಂತೆ ಕಾಪಾಡಲು(ವಾಟರ್ ಪ್ರೂಫ್) ನೀರಿನ ಹರಿಯುವಿಕೆ ತಡೆಯುವ ಲ್ಯಾಮಿನೇಟೆಡ್ ಹೆಚ್.ಡಿ.ಪಿ.ಇ ಶೀಟ್‌ನಿಂದ ವೈರ್ ಮೆಷ್ ಅಳವಡಿಕೆಯನ್ನು ಮುಚ್ಚಲು ಅವಕಾಶ ಕಲ್ಪಿಸುವುದು.
5. ಗಟ್ಟಿ ನೆಲಹಾಸು - ಸಿಮೆಂಟ್ ಅಥವಾ ಕಲ್ಲಿನ ಹಾಸು ಉಪಯೋಗಿಸಿ ಯಾವುದೇ ಬಿರುಕುಗಳು ಇಲ್ಲದಂತೆ ನೆಲಹಾಸನ್ನು ನಿರ್ಮಿಸುವುದು.
6. ನೈರುತ್ಯ ದಿಕ್ಕಿನಲ್ಲಿ ಉಷ್ಣಾಂಶ ಹೆಚ್ಚಿದ್ದು, ಇದಕ್ಕೆ ಹೋಲಿಸಿದಲ್ಲಿ ಈಶಾನ್ಯ ದಿಕ್ಕಿನಲ್ಲಿ ಉಷ್ಣಾಂಶವು ಕಡಿಮೆ ಇರುತ್ತದೆ. ಆದುದರಿಂದ ದಕ್ಷಿಣ ಹಾಗೂ ಪಶ್ಚಿಮ ದಿಕ್ಕುಗಳಲ್ಲಿ ನೆರಳನ್ನು ನೀಡುವ ಮರಗಳನ್ನು ಬೆಳೆಸುವುದು ಸೂಕ್ತವಾಗಿರುತ್ತದೆ.
7. ವೈರ್ ಮೆಷ್ ಬದಲಿಗೆ ಪೂರ್ಣವಾಗಿ ಇಟ್ಟಿಗೆಯ ಗೋಡೆಯಿಂದ ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್) ನಿರ್ಮಾಣ ಮಾಡಿದಲ್ಲಿ ಗೂಡು ಕಟ್ಟುವಿಕೆಗೆ ಬೇಕಾದ ಹವಾಮಾನ ಕಲ್ಪಿಸಲು, ಗೋಡೆಗಳ ಮೂಲಕ ಶೇ.65ರಷ್ಟು ಗಾಳಿ ಸಂಚಾರಕ್ಕಾಗಿ ಕಿಟಕಿಗಳನ್ನು ಅಳವಡಿಸುವುದು. ಕಟ್ಟಿದ ಭಾಗ ಶೇಕಡಾ 35ಕ್ಕಿಂತ ಹೆಚ್ಚಿಲ್ಲದೇ, ಕಿಟಕಿ - ವಾತಾಯನ ವ್ಯವಸ್ಥೆಗೆ ಶೇಕಡಾ 65ರಷ್ಟು ತೆರೆದ ಭಾಗಗಳಿರಬೇಕು.
8. ರೇಷ್ಮೆ ಬೆಳೆಗಾರರು ತಮ್ಮ ಹೆಸರಿನಲ್ಲಿ ಮೇಲೆ ವಿವರಿಸಿರು ರೀತ್ಯಾ ಕನಿಷ್ಠ ವಿಸ್ತೀರ್ಣದಷ್ಟು ಹಿಪ್ಪುನೇರಳೆ ತೋಟ ಹೊಂದಿರಬೇಕು. ಆ ಸರ್ವೆ ನಂಬರು(ಗಳ) ಪಹಣಿಯನ್ನು ಒದಿಗಿಸಬೇಕು.
9. ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್) ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ಪತ್ರದ ಮೂಲ ಪ್ರತಿ ಒದಗಿಸಬೇಕು.
10. ದಾಖಲಾತಿಗಳನ್ನು ಬ್ಯಾಂಕಿಗೆ ಸಲ್ಲಿಸಿದ್ದಲ್ಲಿ ಮೂಲ ದಾಖಲಾತಿಗಳು ಬ್ಯಾಂಕಿನಲ್ಲಿ ಇರುವ ಬಗ್ಗೆ ಬ್ಯಾಂಕಿನವರಿಂದ ಪತ್ರ ಸಲ್ಲಿಸುವುದು.
11. ರೇಷ್ಮೆ ಬೆಳೆಗಾರರು ರೇಷ್ಮೆ ಹುಳು ಸಾಕಾಣಿಕೆ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.
12. ರೇಷ್ಮೆ ಹಣ್ಣು ಹುಳುವಿನ ಮನೆಯನ್ನು(ಮೌಂಟಿಂಗ್ ಹಾಲ್) ಸಾಧ್ಯವಾದಷ್ಟು ಮಟ್ಟಿಗೆ ಹುಳು ಸಾಕುವ ಮನೆಯ ಹತ್ತಿರದಲ್ಲೇ ನಿರ್ಮಿಸಲು ಉತ್ತೇಜನ ಮತ್ತು ಮಾರ್ಗದರ್ಶನ ನೀಡುವುದು.
13. ಮೌಂಟಿಂಗ್ ಹಾಲ್ ನಿರ್ಮಿಸಿಕೊಂಡ ನಂತರ ಸಹಾಯಧನ ಪಡೆಯಲು ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು ಹಾಗೂ ರೂ.50/-ರ ಛಾಪಾ ಕಾಗದದ ಮೇಲೆ 3 ವರ್ಷಗಳವರೆಗೆ ಮೌಂಟಿಂಗ್ ಹಾಲ್ ಅನ್ನು ಅದೇ ಉದ್ದೇಶಕ್ಕಾಗಿ ಬಳಕೆ ಮಾಡುವುದಾಗಿ ಮುಚ್ಚಳಿಕೆ ಬರೆದುಕೊಡಬೇಕು.
14. ಮೌಂಟಿಂಗ್ ಹಾಲ್ ನಿರ್ಮಾಣದ ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ **ಖಜಾನೆ-2/ಡಿಬಿಟಿ** ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
15. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ/ ಅಧಿಕಾರಿಗಳು ಮೌಂಟಿಂಗ್ ಹಾಲ್ ಮುಂದೆ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
16. ಇಲಾಖೆಯು ನಿಗದಿ ಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು/ ದೃಢೀಕರಣಗಳಿರಬೇಕು.
17. ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ ಮೌಂಟಿಂಗ್ ಹಾಲ್ ಕಟ್ಟಡದ ಮೇಲೆ ವಿವರಗಳನ್ನು ಅಳವಡಿಸುವುದು.
18. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

**ತಾಂತ್ರಿಕ ಸೇವಾ ಕೇಂದ್ರದ ವಲಯಾಧಿಕಾರಿಗಳು:**

- ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಪಡೆಯುವುದು ಹಾಗೂ ಅರ್ಜಿಯಲ್ಲಿನ ಫಲಾನುಭವಿಗಳ ಮಾಹಿತಿಯ ನೈಜತೆಯನ್ನು ಪರಿಶೀಲಿಸಿ ಆಯ್ಕೆಗೆ ಶಿಫಾರಸ್ಸು ಮಾಡುವ ಜವಾಬ್ದಾರಿಯು ವಲಯಾಧಿಕಾರಿಯದ್ದಾಗಿರುತ್ತದೆ.

- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ಸದರಿ ಬೆಳೆಗಾರರು ಈ ಹಿಂದೆ ಇಲಾಖೆಯಲ್ಲಿ ಅಥವಾ ಬೇರೆ ಇಲಾಖೆಯ ಯೋಜನೆಗಳಡಿ ಸಹಾಯಧನ ಸೌಲಭ್ಯವನ್ನು ಪಡೆದಿಲ್ಲದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪ್ರಸ್ತಾವನೆಯನ್ನು ತಯಾರಿಸಿ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಸ್ತಾವನೆ ತಯಾರಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ವಲಯಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು**

- ವಲಯಾಧಿಕಾರಿಗಳು ಸಲ್ಲಿಸಿರುವ ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸುವುದು.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೋಂದಾಯಿಸಿಕೊಳ್ಳಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸುವುದು. ಜೇಷ್ಠತೆ ಆಧಾರದಲ್ಲಿ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು.
- ಅರ್ಹವಾಗುದಾದಲ್ಲಿ, ಬೆಳೆಗಾರರ ಅರ್ಜಿಯ ಅಡಕಗಳನ್ನು ಸೂಕ್ಷವಾಗಿ ಪರಿಶೀಲಿಸಿ, ದೃಢೀಕರಿಸಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

**ಸಂಬಂಧಪಟ್ಟ ರೇಷ್ಮೆ ಸಹಾಯಕ ನಿರ್ದೇಶಕರು**

- ಹಣ್ಣು ಹುಳುವಿನ ಮನೆಗೆ(ಮೌಂಟಿಂಗ್ ಹಾಲ್) ಭೇಟಿ ನೀಡಿ ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿ ಮಾಡಿ ವಿತ್ತೀಯ ಪ್ರಾಧಿಕಾರ ಆಗಿದ್ದಲ್ಲಿ ಮಂಜೂರಾತಿ ನೀಡುವುದು. ಇಲ್ಲವಾದಲ್ಲಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ರೇಷ್ಮೆ ಉಪನಿರ್ದೇಶಕರಿಗೆ ಸಲ್ಲಿಸಬೇಕು.

**ಸಂಬಂಧಪಟ್ಟ ರೇಷ್ಮೆ ಉಪನಿರ್ದೇಶಕರು**

- ಹಣ್ಣು ಹುಳುವಿನ ಮನೆ(ಮೌಂಟಿಂಗ್ ಹಾಲ್)ಗೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ, ಹಣ್ಣು ಹುಳುವಿನಮನೆ(ಮೌಂಟಿಂಗ್ ಹಾಲ್) ಸಹಾಯಧನವನ್ನು ವಿತ್ತೀಯ ಪ್ರತ್ಯಾಧಿಕಾರದ ಅನ್ವಯ ಮಂಜೂರಾತಿ ನೀಡುವುದು.

**ಕಾರ್ಯಕ್ರಮ: 4**

**ವಿಶೇಷ ಘಟಕ ಉಪ ಯೋಜನೆ/ಗಿರಿಜನ ಉಪ ಯೋಜನೆಯಡಿ ನೋಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆಗೆ – ಚಾಕಿ ತೋಟ ಸ್ಥಾಪನೆ/ ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕೆ ಸಲಕರಣೆ ಖರೀದಿಗೆ ಸಹಾಯಧನ**

ರೇಷ್ಮೆ ಬೆಳೆ ಯಶಸ್ಸು, ಚಾಕಿ ಹುಳು ಸಾಕಾಣಿಕೆ ನಿರ್ವಹಣೆಯನ್ನು ಆಧರಿಸಿದೆ. ಅಸಮರ್ಪಕ ಚಾಕಿ ನಿರ್ವಹಣೆ ಬೆಳೆ ನಾಶಕ್ಕೆ ದಾರಿಯಾಗುವುದೆಂಬ ಕಾರಣಕ್ಕೆ ರೇಷ್ಮೆ ಬೆಳೆಗಾರರಿಗೆ ವೈಯಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು(NGO)/ಸ್ವಸಹಾಯ ಗುಂಪುಗಳು(SHG) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO)ಗಳಿಗೂ ಸ್ವಂತ ಅಥವಾ ಗುತ್ತಿಗೆ ಆಧಾರದ ಮೇಲೆ(ಕನಿಷ್ಠ 10 ವರ್ಷಗಳವರೆಗೆ) ಜಮೀನಿನಲ್ಲಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಲು ಅವಕಾಶ ಕಲ್ಪಿಸಿದೆ. ಇದರ ಘಟಕ ದರ ರೂ.13.00 ಲಕ್ಷಗಳು. ಸಹಾಯಧನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಘಟಕ ದರ | ಸಹಾಯಧನ(ಶೇ.90) |
|---|---|
| 13.00 | 11.70 |

ಕೇಂದ್ರ ರೇಷ್ಮೆ ಮಂಡಳಿಯು ಸಿಲ್ಕ್ ಸಮಗ್ರ-2ರಡಿ ಘಟಕ ದರ/ಸಹಾಯಧನಗಳನ್ನು ನೀಡಿರುತ್ತದೆ. ಇಲಾಖೆಯಲ್ಲಿಯೂ ಸಹ ಸದರಿ ಘಟಕ ದರ/ಸಹಾಯಧನಗಳನ್ನು ಅಳವಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಕ್ಕೆ ಸಹಾಯಧನ ಪಡೆಯಲು ಇಚ್ಛಿಸುವವರು ಕೇಂದ್ರ ರೇಷ್ಮೆ ಮಂಡಳಿಯ ಕಾಯಿದೆ ಪ್ರಕಾರ ದ್ವಿತಳಿ ಚಾಕಿ ಸಾಕಾಣಿಕೆ ಮಾಡಲು ನೋಂದಾಯಿತರಾಗಿರುವ ಬಗ್ಗೆ ದೃಢೀಕರಣ ನೀಡಬೇಕು. ಚಾಕಿ ಸಾಕಾಣಿಕೆ ಕೇಂದ್ರವು ಪ್ರೌಢ ಹುಳು ಸಾಕಾಣಿಕೆ ಮನೆಗಳಿಂದ ದೂರವಿರಬೇಕು, ಚಾಕಿ ತೋಟದಲ್ಲಿಯೇ ಕಟ್ಟಡವಿರಬೇಕು ಮತ್ತು ಸಿ.ಡಿ.ಪಿ ಮ್ಯಾನುಯಲ್ ಪ್ರಕಾರ ನಿಗದಿತ ಮಾದರಿ ನಕ್ಷೆಯಂತಿರಬೇಕು(ನಕ್ಷೆ ಅಡಕಗೊಳಿಸಿದೆ).
2. ನೋಂದಾಯಿತ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಸಹಾಯಧನ ಕಾರ್ಯಕ್ರಮದಡಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಹೊಂದಿಕೊಂಡಿರುವಂತೆ ರೇಷ್ಮೆ ಮೊಟ್ಟೆ ಪರಿಪಾಕಣೆ ಕೊಠಡಿ ನಿರ್ಮಿಸಿರುವ ಪ್ರಕರಣಗಳು ಮತ್ತು ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಕನಿಷ್ಠ ಎತ್ತರ 10 ಅಡಿ ಇದ್ದಲ್ಲಿ ಸಹಾಯಧನ ನೀಡಲು ಪರಿಗಣಿಸಬಹುದಾಗಿದೆ.
3. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಪ್ರಾರಂಭಿಸುವವರು ವೈಯಕ್ತಿವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು(NGO)/ಸ್ವಸಹಾಯ ಗುಂಪುಗಳು(SHG-ಕನಿಷ್ಠ 10 ಜನ ಸದಸ್ಯರುಳ್ಳ) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO), FPOಗಳು ಸ್ವಂತ ಅಥವಾ ಗುತ್ತಿಗೆ ಆಧಾರದಲ್ಲಿ (ಕನಿಷ್ಠ 10 ವರ್ಷಗಳವರೆಗೆ) ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಲು ಮುಂದಾಗುವವರ ಅರ್ಜಿಗಳನ್ನು ವಲಯಾಧಿಕಾರಿಗಳು ಸಂಗ್ರಹಿಸಿ ಶಿಫಾರಸ್ಸು ಮಾಡಿ ಸಹಾಯಧನಕ್ಕೆ ಪರಿಗಣಿಸಲು ತಾಂತ್ರಿಕ ಸೇವಾ ಕೇಂದ್ರಗಳಿಗೆ ಸಲ್ಲಿಸಬೇಕು.
4. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಪ್ರಾರಂಭಿಸುವವರು ವೈಯಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು(NGO)/ಸ್ವಸಹಾಯ ಗುಂಪುಗಳು(SHG-ಕನಿಷ್ಠ 10 ಜನ ಸದಸ್ಯರುಳ್ಳ) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO), FPOಗಳು ಸ್ವಂತ ಅಥವಾ ಗುತ್ತಿಗೆ ಆಧಾರದಲ್ಲಿ (ಕನಿಷ್ಠ 10 ವರ್ಷಗಳವರೆಗೆ) ಚಾಕಿ ಸಾಕಾಣಿಕೆ ಕೈಗೊಳ್ಳಲು ಮುಂದಾಗುವವರಿಗೆ ರಾಜ್ಯ/ಕೇಂದ್ರ ರೇಷ್ಮೆ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಹೊಂದಿದ ಬಗ್ಗೆ ದೃಢೀಕರಣವಿರಬೇಕು.
5. ಗುರುತಿಸಿದ ಕ್ಲಸ್ಟರ್‌ಗಳಲ್ಲಿ ಸ್ಥಾಪಿಸಿದ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರಗಳಿಗೆ ಸಹಾಯಧನ ನೀಡಲು ಪ್ರಾಶಸ್ತ್ಯತೆ ನೀಡಲಾಗುವುದು.
6. ಫಲಾನುಭವಿಗೆ ಕನಿಷ್ಠ 2 ಎಕರೆ ಸ್ವಂತ ಅಥವಾ ಗುತ್ತಿಗೆ ಆಧಾರದ ಮೇಲೆ ಪಡೆದ ನೀರಾವರಿಯುಳ್ಳ ಹಿಪ್ಪುನೇರಳೆ ಚಾಕಿ ತೋಟವಿದ್ದು, ಚಾಕಿ ತೋಟಕ್ಕೆ ಕಡ್ಡಾಯವಾಗಿ ಹನಿ ನೀರಾವರಿ ಅಳವಡಿಸಿರಬೇಕು. ಚಾಕಿ ತೋಟದ ಜಮೀನು ಸಮತಟ್ಟಾಗಿದ್ದು ಫಲವತ್ತಾಗಿರಬೇಕು. ಸಾವಯವ ಗೊಬ್ಬರಗಳನ್ನು ಹೆಚ್ಚಾಗಿ ಬಳಸಬೇಕು. ಮರಳು ಮಿಶ್ರಿತ ಕೆಂಪು ಮಣ್ಣು ಇರಬೇಕು.
7. ವಾರ್ಷಿಕ 1.50 ರಿಂದ 1.60 ಲಕ್ಷ ದ್ವಿತಳಿ ಮೊಟ್ಟೆ ಚಾಕಿ ಕಟ್ಟುವ ಸಾಮರ್ಥ್ಯತೆಯಿರಬೇಕು. ಪ್ರತಿ ತಂಡಕ್ಕೆ 5 ಸಾವಿರ ಮೊಟ್ಟೆಗಳಂತೆ ವರ್ಷಕ್ಕೆ 32 ತಂಡಗಳಲ್ಲಿ, ಪ್ರತಿ ತಂಡದಿಂದ ತಂಡಕ್ಕೆ 10 ದಿನಗಳ ಅವಧಿಯಂತೆ ಚಾಕಿ ಮಾಡುವ ಬಗ್ಗೆ ಸಾಮರ್ಥ್ಯ ಇರಬೇಕು.
8. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆಗೆ ಆರ್ಥಿಕ ನೆರವನ್ನು ಬ್ಯಾಂಕುಗಳಿಂದ ಪಡೆಯಬಹುದು.
9. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಿದ ನಂತರ ತಾಂತ್ರಿಕತೆ ಉನ್ನತೀಕರಣಕ್ಕಾಗಿ 2 ವರ್ಷಕ್ಕೊಮ್ಮೆಯಾದರೂ ಒಂದು ವಾರದ ಅವಧಿಯ ಪುನಃಶ್ಚೇತನ ತರಬೇತಿ ಪಡೆಯಬೇಕು. ಪುನಃಶ್ಚೇತನ ತರಬೇತಿ ಪಡೆಯದಿದ್ದಲ್ಲಿ, ನೋಂದಣಿಯನ್ನು ನವೀಕರಿಸಲಾಗುವುದಿಲ್ಲ.
10. ರೂ.50/-ರ ಛಾಪಾ ಕಾಗದದ ಮೇಲೆ 10 ವರ್ಷಗಳವರೆಗೆ ಚಾಕಿ ತೋಟ, ಚಾಕಿ ಸಾಕಾಣಿಕೆ ಕಟ್ಟಡ ಹಾಗೂ ಚಾಕಿ ಸಾಕಾಣಿಕಾ ಸಲಕರಣೆಗಳನ್ನು ಉದ್ದೇಶಿತ ದ್ವಿತಳಿ ಚಾಕಿ ಹುಳು ಸಾಕಾಣಿಕೆ ಮಾಡಲು ಮಾತ್ರ ಉಪಯೋಗಿಸುವ ಬಗ್ಗೆ ಮುಚ್ಚಳಿಕೆ ಬರೆದುಕೊಡಬೇಕು.

11. ಚಾಕಿ ಸಾಕಾಣಿಕೆ ಕೇಂದ್ರದಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಕಾಯಿದೆಯನ್ವಯ ಕನಿಷ್ಠ 10 ವರ್ಷಗಳವರೆಗೆ ದಾಖಲೆ, ದಸ್ತಾವೇಜು ನಿರ್ವಹಿಸತಕ್ಕದ್ದು ಹಾಗೂ ಪರಿವೀಕ್ಷಣೆಗೆ ಅವಶ್ಯವಿದ್ದಲ್ಲಿ ಸದರಿ ದಾಖಲೆಗಳನ್ನು ಒದಗಿಸತಕ್ಕದ್ದು.
12. ಚಾಕಿ ಸಾಕಾಣಿಕಾ ಕೇಂದ್ರದಲ್ಲಿ ಪ್ರತಿವಾರ/ಪ್ರತಿ ಮಾಹೆಯಲ್ಲಿ ಚಾಕಿ ಮಾಡಿ ವಿತರಿಸುವ ವಿವರಗಳನ್ನು ನಿಗದಿತ ನಮೂನೆಗಳಲ್ಲಿ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸಬೇಕು.
13. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರದ ಚಾಕಿ ತೋಟದಲ್ಲಿ ಶಿಫಾರಸ್ಸು ಮಾಡಿದ ತಳಿ, ಸ್ಥಳಾವಕಾಶ ಹಾಗೂ ಅಂತರ ಬೇಸಾಯಗಳನ್ನು ನಿರ್ವಹಿಸತಕ್ಕದ್ದು.
14. ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರದಲ್ಲಿ, ಚಾಕಿ ತೋಟ ಸ್ಥಾಪನೆ, ಕಟ್ಟಡ ನಿರ್ಮಾಣ ಪೂರ್ಣಗೊಂಡಿದ್ದು, ನಿಗದಿತ ಪ್ರಮಾಣದಲ್ಲಿ ಸಲಕರಣೆಗಳ ಖರೀದಿ ಮಾಡಿ, ಕನಿಷ್ಠ 3 ತಿಂಗಳ ಅವಧಿಯಲ್ಲಿ ದ್ವಿತಳಿ ಚಾಕಿ ಹುಳು ವಿತರಣೆ ಮಾಡಿದ್ದಲ್ಲಿ ಮಾತ್ರ ಸಹಾಯಧನ ಮಂಜೂರಾತಿಗಾಗಿ ಪರಿಗಣಿಸಲಾಗುವುದು. ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವುದು. ಸಲಕರಣೆಗಳು ನಿಗದಿತ ಪ್ರಮಾಣದಲ್ಲಿ ಖರೀದಿಸಿರಬೇಕು, ಕಡಿಮೆ ಇದ್ದಲ್ಲಿ ಸಹಾಯಧನ ಮಂಜೂರಾತಿಗೆ ಪರಿಗಣಿಸಲಾಗುವುದಿಲ್ಲ.
15. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ/ಅಧಿಕಾರಿಗಳು/ ಚಾಕಿ ತೋಟ/ಚಾಕಿ ಹುಳು ಸಾಕಾಣಿಕೆ ಕಟ್ಟಡ/ಸಲಕರಣೆ ಮುಂದೆ ನಿಂತಿರುವ ಛಾಯಾಚಿತ್ರ ತೆಗೆದು ಸಲ್ಲಿಸಬೇಕು.
16. ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ಸಹಾಯಧನವನ್ನು ಅವರ ಬ್ಯಾಂಕ್ ಖಾತೆಗೆ **ಖಜಾನೆ-2/ಡಿಬಿಟಿ** ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
17. ಇಲಾಖೆಯು ನಿಗದಿ ಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು/ ದೃಢೀಕರಣಗಳಿರಬೇಕು.
18. ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ ಚಾಕಿ ತೋಟಕ್ಕೆ ಫಲಕದಲ್ಲಿ/ಚಾಕಿ ಸಾಕಾಣಿಕೆ ಕೇಂದ್ರದ ಕಟ್ಟಡದ ಮೇಲೆ ವಿವರಗಳನ್ನು ಬರೆಯಿಸಬೇಕು/ಚಾಕಿ ಸಾಕಾಣಿಕೆ ಸಲಕರಣೆಗಳ ಮೇಲೆ engrave ಮಾಡಿಸುವುದು.
19. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಸಂಬಂಧಿಸಿದ ಕ್ಷೇತ್ರಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜವಾಬ್ದಾರರಾಗಿರುತ್ತಾರೆ.

**ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಸಹಾಯಧನ ನೀಡಲು ಐಟಂವಾರು ಪರಿಗಣಿಸಬೇಕಾದ ವಿವರಗಳನ್ನು ಕೆಳಗೆ ನಮೂದಿಸಿದೆ**

| ಕ್ರ. ಸಂ. | ಐಟಂ/ವಿವರಗಳು | ಸಹಾಯಧನಕ್ಕೆ ಪರಿಗಣಿಸಬೇಕಾದ ಕನಿಷ್ಠ ಪ್ರಮಾಣ |
|---|---|---|
| 1 | ಹಿಪ್ಪುನೇರಳೆ ತೋಟ ಸ್ಥಾಪನೆ ಮತ್ತು ನಿರ್ವಹಣೆ(ಶಿಫಾರಸ್ಸು ಮಾಡಿರುವ ಹಿಪ್ಪುನೇರಳೆ ತಳಿಯ ಬಿತ್ತನೆ ಕಡ್ಡಿಗಳು/ನರ್ಸರಿ ಸಸಿಗಳು, ಕೊಟ್ಟಿಗೆ ಗೊಬ್ಬರ, ರಸಾಯನಿಕ ಗೊಬ್ಬರ, ಜೈವಿಕ ಗೊಬ್ಬರ ವೆಚ್ಚ ಸೇರಿದೆ) | 2.00 ಎಕರೆ |
| 2 | ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆ (Micro Irrigation) | 2.00 ಎಕರೆ |
| 3 | ಚಾಕಿ ಸಾಕಾಣಿಕಾ ಕಟ್ಟಡ 5000 ರೋಗ ರಹಿತ ಮೊಟ್ಟೆಗಳ ಚಾಕಿ ಕಟ್ಟುವುದಕ್ಕೆ(42' x 30' x 16' ಎತ್ತರ) | 1 ಕಟ್ಟಡ |
| 4 | ಚಾಕಿ ಸಾಕಾಣಿಕಾ ಸಲಕರಣೆಗಳು | ಪ್ರಮಾಣ |
| 5 | ಪ್ಲಾಸ್ಟಿಕ್ ರೇರಿಂಗ್ ತಟ್ಟೆಗಳು | 400 |
| 6 | ರೇರಿಂಗ್ ಸ್ಟ್ಯಾಂಡ್ ವಿತ್ ಜಿಐ ಪೈಪ್ಸ್/ಐರನ್ ಆಂಗಲ್ | 4 |
| 7 | ಇನ್‌ಕ್ಯೂಬೇಷನ್ ಫ್ರೇಮ್ಸ್ | 100 |

| | | |
|---|---|---|
| 8 | ಲೀಫ್ ಚಾಪಿಂಗ್ ಮೆಷೀನ್ | 1 |
| 9 | ಹ್ಯುಮಿಡಿಫ್ಯೆಯರ್(ಹೆವಿ ಡ್ಯೂಟಿ) | 1 |
| 10 | ಹೀಟರ್ | 2 |
| 11 | ಪವರ್ ಸ್ಪ್ರೇಯರ್ | 1 |
| 12 | ಸೋಂಕು ನಿವಾರಕ ಮಾಸ್ಕ್ | 1 |
| 13 | ಮೈಕ್ರೋಸ್ಕೋಪ್ | 1 |
| 14 | ವೆಟ್ ಅಂಡ್ ಡ್ರೈ ಬಲ್ಬ್ ಥರ್ಮಾಮೀಟರ್ | 1 |
| 15 | ಬೆಡ್ ಕ್ಲೀನಿಂಗ್ ನೆಟ್ಸ್ | 1200 |
| 16 | ಪ್ಲಾಸ್ಟಿಕ್ ಟ್ರೇ ವಾಷಿಂಗ್ ಮೆಷಿನ್ | 1 |
| 17 | ಚಾಕಿ ಡಸ್ಟಿಂಗ್ ಮೆಷಿನ್ | 1 |
| 18 | 1 ಕೆ.ವಿ ಜನರೇಟರ್ | 1 |
| 19 | ಇನ್‌ಕ್ಯೂಬೇಷನ್ ಚೇಂಬರ್ | 1 |

**ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಸಹಾಯಧನ ಮಂಜೂರು ಮಾಡಲಾಗುವುದು**

1. ಮೇಲೆ ತಿಳಿಸಲಾದ ಐಟಂಗಳಿಗೆ ತೆರಿಗೆ ಮತ್ತು ಸಾಗಾಣಿಕಾ ವೆಚ್ಚ ಹೊರತು ಪಡಿಸಿ ಉಳಿದ ಮೊತ್ತಕ್ಕೆ ಸಹಾಯಧನ ನೀಡಲಾಗುವುದು.
2. 2021-22ನೇ ಸಾಲಿನ ಹಾಗೂ ನಂತರದ ಪ್ರಸ್ತಾವನೆಗಳಿಗೆ ಪ್ರಸ್ತುತ ನಿಗದಿ ಪಡಿಸಿರುವ ಘಟಕ ದರ ಅನ್ವಯಿಸುವುದು. 2021-22ನೇ ಸಾಲಿಗೂ ಹಿಂದಿನ ವರ್ಷಗಳಲ್ಲಿ ಸಹಾಯಧನ ಪಡೆದಿರುವ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಈ ಯೋಜನೆಯಲ್ಲಿ ಸಹಾಯಧನ ನೀಡಲು ಅವಕಾಶವಿರುವುದಿಲ್ಲ.
3. ಚಾಕಿ ತೋಟ ಸ್ಥಾಪನೆ/ನಿರ್ವಹಣೆ, ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕಾ ಸಲಕರಣೆ ಖರೀದಿ ಸೇರಿದಂತೆ ಮೇಲೆ ನಮೂದಿಸಿರುವ ಎಲ್ಲಾ ಐಟಂಗಳನ್ನು ಹೊಂದಿರುವ ಮೂರು ಘಟಕಗಳಿಗೆ ಸಹಾಯಧನ ಮಂಜೂರಾತಿಗಾಗಿ ಒಟ್ಟಾಗಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಮಾತ್ರ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು ಹಾಗೂ ಮೂರು ಘಟಕಗಳಿಗೆ ಪ್ರತ್ಯೇಕವಾಗಿ ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲ.
4. ಸಹಾಯಧನ ಪಡೆದ ನಂತರ ನಿಗದಿ ಮಾಡಲಾದ ಪ್ರಮಾಣದಲ್ಲಿಯೇ ಚಾಕಿ ಕಟ್ಟಬೇಕು.

**ರೇಷ್ಮೆ ಇಲಾಖೆಯ ಅಧಿಕಾರಿಗಳು ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಸಹಾಯಧನ ನೀಡಲು ಪಾಲಿಸಬೇಕಾದ ಅಂಶಗಳು:**

**ತಾಂತ್ರಿಕ ಸೇವಾ ಕೇಂದ್ರದ ವಲಯಾಧಿಕಾರಿಗಳು:**

- ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಪಡೆಯುವುದು ಹಾಗೂ ಅರ್ಜಿಯಲ್ಲಿನ ಫಲಾನುಭವಿಗಳ ಮಾಹಿತಿಯ ನೈಜತೆಯನ್ನು ಪರಿಶೀಲಿಸಿ ಆಯ್ಕೆಗೆ ಶಿಫಾರಸ್ಸು ಮಾಡುವ ಜವಾಬ್ದಾರಿಯು ವಲಯಾಧಿಕಾರಿಯದ್ದಾಗಿರುತ್ತದೆ.
- ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಬೇಕು.
- ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ಸದರಿ ಬೆಳೆಗಾರರು ಈ ಹಿಂದೆ ಇಲಾಖೆಯಲ್ಲಿ ಅಥವಾ ಬೇರೆ ಇಲಾಖೆಯ ಯೋಜನೆಗಳಡಿ ಸಹಾಯಧನ ಸೌಲಭ್ಯವನ್ನು ಪಡೆದಿಲ್ಲದಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಪ್ರಸ್ತಾವನೆಯನ್ನು ತಯಾರಿಸಿ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸುವುದು. ಪ್ರಸ್ತಾವನೆ ತಯಾರಿಕೆಯಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಪ್ರಸ್ತಾವನೆ ತಯಾರಿಸಿದ ವಲಯಾಧಿಕಾರಿಗಳೇ ನೇರವಾಗಿ ಜವಾಬ್ದಾರರಾಗಿರುತ್ತಾರೆ.

**ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು:**

- ವಲಯಾಧಿಕಾರಿಗಳು ಸಲ್ಲಿಸಿರುವ ಬೆಳೆಗಾರರ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸುವುದು.
- ಈಗಾಗಲೇ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಿ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಜೇಷ್ಠತೆ ಆಧಾರದಲ್ಲಿ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು.

- ಹೊಸದಾಗಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಫಲಾನುಭವಿಗಳು ಅರ್ಜಿ ನೀಡಿದ್ದಲ್ಲಿ ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೋಂದಾಯಿಸಿಕೊಳ್ಳುವುದು.
- ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ನೀಡಿರುವ ಅರ್ಜಿಯನ್ನು ಪರಿಶೀಲಿಸಿ, ಅರ್ಹವಿದ್ದಲ್ಲಿ, ಅರ್ಜಿಯೊಂದಿಗಿನ ಅಡಕಗಳನ್ನು ದೃಢೀಕರಿಸಬೇಕು.
- ನಮೂನೆಯಲ್ಲಿ ಸ್ಥಳದ ಮಹಜರ್ ಜರುಗಿಸಿ, ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

## ಸಂಬಂಧಪಟ್ಟ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು

- ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ನೀಡಿರುವ ಅರ್ಜಿಯನ್ನು ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿ ಮಾಡಿ ರೇಷ್ಮೆ ಉಪನಿರ್ದೇಶಕರಿಗೆ ಮಂಜೂರಾತಿಗಾಗಿ ಸಲ್ಲಿಸುವುದು.

## ಸಂಬಂಧಪಟ್ಟ ರೇಷ್ಮೆ ಉಪನಿರ್ದೇಶಕರು

- ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ಸಹಾಯಧನ ಮಂಜೂರಾತಿಗೆ ಸಂಬಂಧಿಸಿದ ಜಂಟಿ ನಿರ್ದೇಶಕರಿಗೆ ಸಲ್ಲಿಸುವುದು.

## ಸಂಬಂಧಪಟ್ಟ ರೇಷ್ಮೆ ಜಂಟಿ ನಿರ್ದೇಶಕರು

- ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ/ಅಧಿಕಾರಿಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ, ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ರೇಷ್ಮೆ ನಿರ್ದೇಶನಾಲಯಕ್ಕೆ ಮೂರು ಘಟಕಗಳ ಮಂಜೂರಾತಿಗಾಗಿ ಒಟ್ಟಾರೆ ಪ್ರಸ್ತಾವನೆಯನ್ನು ಸಲ್ಲಿಸುವುದು.

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

ಸಂ/ಯೋ/ಶಿಪಿಎ3/SCP-TSP/ಮಾರ್ಗಸೂಚಿ/37/24-25

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ,
ಬೆಂಗಳೂರು, ದಿನಾಂಕ:31.05.2024.

ಸುತ್ತೋಲೆ

ವಿಷಯ: 2024-25ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ ವರ್ಗಗಳಡಿ ಅನುಷ್ಠಾನಗೊಳಿಸುವ ಫಲಾನುಭವಿಯಾಧಾರಿತ ಕಾರ್ಯಕ್ರಮಗಳ ಅನುಷ್ಠಾನದ ಮಾರ್ಗಸೂಚಿ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ.ರೇಷ್ಮೆ/112/ರೇಕೃವಿ/2024, ಬೆಂಗಳೂರು, ದಿನಾಂಕ:06.04.2024.

*****

2024-25ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಯೋಜನೆಗಳ ಲೆಕ್ಕ ಶೀರ್ಷಿಕೆಗಳಡಿ ಸರ್ಕಾರವು ಅನುದಾನವನ್ನು ಒದಗಿಸಿದ್ದು, ಮುಂದುವರೆದ ಯೋಜನೆಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ರೇಷ್ಮೆ ಅಭಿವೃದ್ಧಿ ಯೋಜನೆ -ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ- ಲೆಕ್ಕ ಶೀರ್ಷಿಕೆ 2851-00-107-1-35(422)(423) ಮತ್ತು ಕಾಯ್ದೆ-2013ರಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಲೆಕ್ಕ ಶೀರ್ಷಿಕೆ:2851-00-107-1-50(422)(423)ಅಡಿ ಅನುಷ್ಠಾನಗೊಳಿಸುವ ಫಲಾನುಭವಿಯಾಧಾರಿತ ಕಾರ್ಯಕ್ರಮಗಳ ಮಾರ್ಗಸೂಚಿಯನ್ನು ತಯಾರಿಸಿದ್ದು, ಪತ್ರದೊಂದಿಗೆ ಅಡಕಗೊಳಿಸಿ ಕಳುಹಿಸುತ್ತಾ, ಸದರಿ ಮಾರ್ಗಸೂಚಿಯನ್ವಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸೂಚಿಸಿದೆ.

ರೇಷ್ಮೆ ನಿರ್ದೇಶನಾಲಯದಿಂದ ವಿವಿಧ ಯೋಜನೆಗಳಡಿ ಅನುಷ್ಠಾನಗೊಳಿಸುವ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಡಿ ಜಿಲ್ಲೆವಾರು ನಿಗಧಿಪಡಿಸುವ ಭೌತಿಕ ಹಾಗೂ ಆರ್ಥಿಕ ಗುರಿಯನ್ನು ಸಾಧಿಸಲು ಕ್ರಮವಹಿಸುವುದು. 2024-25ನೇ ಸಾಲಿನಲ್ಲಿ ಒದಗಿಸುವ ಅನುದಾನಕ್ಕನುಗುಣವಾಗಿ ಮಾಹೆವಾರು ಭರಿಸುವ ವೆಚ್ಚದ ಮಾಹಿತಿಯನ್ನು ಎನ್‌ಡಿಎಸ್‌ಎನ್‌ನಲ್ಲಿ ತಪ್ಪದೇ ದಾಖಲಿಸುವುದು ಹಾಗೂ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ತಯಾರಿಸಿ ಯೋಜನಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

07/06/24

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ಎಲ್ಲಾ ರೇಷ್ಮೆ ಜಂಟಿ ನಿರ್ದೇಶಕರು
ಎಲ್ಲಾ ರೇಷ್ಮೆ ಉಪನಿರ್ದೇಶಕರು ಜಿಲ್ಲಾ ಪಂಚಾಯತ್, [illegible]/ಮಾಗಡಿ

ರೇಷ್ಮೆ ಉಪನಿರ್ದೇಶಕರು, ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ವಿಜಯಪುರ/ರಾಮನಗರ/ಕನಕಪುರ/ಕೊಳ್ಳೇಗಾಲ/ಕೋಲಾರ/ಶಿಡ್ಲಘಟ್ಟ
ಎಲ್ಲಾ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು
ಎಲ್ಲಾ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆಗಳು
ಎಲ್ಲಾ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ/ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್)

ಪ್ರತಿಯನ್ನು ರೇಷ್ಮೆ ಜಂಟಿ ನಿರ್ದೇಶಕರು, ಎಸ್‌ಪಿಎಸ್‌ಎಫ್ ವಿಭಾಗ/ಟಿಎಸ್‌ಟಿಐ ವಿಭಾಗ/ರೇಷ್ಮೆ ಗೂಡು ಮಾರುಕಟ್ಟೆ ವಿಭಾಗ ಹಾಗೂ ಗೂಡಿನ ನಂತರದ ಚಟುವಟಿಕೆ ವಿಭಾಗ, ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ

ಪ್ರತಿಯನ್ನು ಮುಖ್ಯ ಅರ್ಥಶಾಸ್ತ್ರಜ್ಞರು, ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು(ರೇಷ್ಮೆ), ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

# 2024-25ನೇ ಸಾಲಿನ ಜಿಲ್ಲಾವಲಯ (ಜಿಲ್ಲಾ /ತಾಲ್ಲೂಕು ಪಂಚಾಯತ್) ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ



ಸಂ: ಯೋಜನೆ/ಪಿಎಸ್3/ಜಿಪಂ-ತಾಪಂ/ಮಾಸೂ/73/23-24

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಚೇರಿ
ಬೆಂಗಳೂರು.ದಿನಾಂಕ:16.10.2023

**ಸುತ್ತೋಲೆ**

ವಿಷಯ: 2024-25ನೇ ಸಾಲಿನ ಜಿಲ್ಲಾವಲಯ (ಜಿಲ್ಲಾ/ ತಾಲ್ಲೂಕು ಪಂಚಾಯತ್) ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.

2024-25ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಯೋಜನೆಗಳಡಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

## I. ಜಿಲ್ಲಾ ಪಂಚಾಯತ್ ಯೋಜನೆಗಳು:

### ಆ. ರೇಷ್ಮೆ ಬೆಳೆಗಾರರಿಗೆ ಸಹಾಯಧನ ಲೆಕ್ಕಶೀರ್ಷಿಕೆ 2851-00-104-0-30

2024-25ನೇ ಸಾಲಿನ ಆಯವ್ಯಯದಲ್ಲಿ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್ /ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಈ ಕೆಳಕಂಡ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸುವುದು. ಶೇ.33ರಷ್ಟು ಆಯವ್ಯಯವನ್ನು ಮಹಿಳಾ ಫಲಾನುಭವಿಗಳಿಗೆ, ಶೇ.17ರಷ್ಟನ್ನು ಪರಿಶಿಷ್ಟ ಜಾತಿ, ಶೇ.7 ರಷ್ಟು ಪರಿಶಿಷ್ಟ ಪಂಗಡದವರಿಗೆ ಹಾಗೂ ಶೇ.15ರಷ್ಟು ಅಲ್ಪ ಸಂಖ್ಯಾತ ವರ್ಗದವರಿಗೆ ಮೀಸಲಾಗಿರಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಮಾಡುವುದು.

ಜಿಲ್ಲಾ ಪಂಚಾಯತ್ ಯೋಜನೆಯಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನದಲ್ಲಿ ಅವಶ್ಯವಿರುವ ಅನುದಾನವನ್ನು ರೇಷ್ಮೆ ವಸ್ತು ಪ್ರದರ್ಶನ/ಕಾರ್ಯಾಗಾರ/ವಿಚಾರ ಸಂಕಿರಣ. ಅದೇ ರೀತಿ ತಾಲ್ಲೂಕು ಪಂಚಾಯತ್ ಯೋಜನೆಯಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನದಲ್ಲಿ ಅವಶ್ಯವಿರುವ ಅನುದಾನವನ್ನು ತಾಂತ್ರಿಕ ಸಲಹೆಗಳು, ಪ್ರದರ್ಶನಗಳು, ಪ್ರಚಾರ, ಶ್ರವಣ ಮತ್ತು ದೃಶ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹಣ ಒದಗಿಸಿಕೊಂಡು, ಉಳಿಕೆಯಾಗುವ ಅನುದಾನದಲ್ಲಿ MGNREGA ಮಾನದಂಡಗಳ ಅರ್ಹತೆ ಮೀರಿದ ರೇಷ್ಮೆ ಬೆಳೆಗಾರರಿಗೆ ಹಿಪ್ಪುನೇರಳೆ ನಾಟಿ ಮತ್ತು ಹಿಪ್ಪುನೇರಳೆ ನರ್ಸರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಹಾಗೂ ರೋಗ ನಿಯಂತ್ರಣ ಕಾರ್ಯಕ್ರಮಗಳಿಗೆ ಕ್ರಿಯಾಯೋಜನೆ ತಯಾರಿಸುವುದು. ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರವರಿಂದ ತಾಂತ್ರಿಕ ಅನುಮೋದನೆಯನ್ನು ಹಾಗೂ ಜಿಲ್ಲಾ ಪಂಚಾಯತ್‌ವತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.

ಫಲಾನುಭವಿಗಳ ಆಯ್ಕೆ ಮತ್ತು ಕ್ರಿಯಾಯೋಜನೆ ತಯಾರಿಕೆ :

- ಹಿಪ್ಪುನೇರಳೆ ನಾಟಿ / ಹಿಪ್ಪುನೇರಳೆ ನರ್ಸರಿ ಮಾಡುವ ಫಲಾನುಭವಿಗಳ ಆಯ್ಕೆಯನ್ನು ಏಪ್ರಿಲ್ – ಮೇ 2024ರ ಒಳಗೆ ಮಾಡುವುದು.
- ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಿಸಿದ ರೇಷ್ಮೆ ಜಂಟಿ ನಿರ್ದೇಶಕರುಗಳಿಂದ ಅನುಮೋದನೆ ಪಡೆಯುವುದು.
- ಅನುಮೋದಿತ ಪಟ್ಟಿಯ ಒಂದು ಪ್ರತಿಯನ್ನು ಯೋಜನಾ ಶಾಖೆ, ರೇಷ್ಮೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
- ಹಿಪ್ಪುನೇರಳೆ ನಾಟಿ ಕಾರ್ಯಕ್ರಮವನ್ನು ಸೆಪ್ಟೆಂಬರ್ – 2024ರ ಮಾಹೆಯ ಒಳಗಾಗಿ ಪೂರ್ಣಗೊಳಿಸುವುದು.
- ಹಿಪ್ಪುನೇರಳೆ ನರ್ಸರಿ ಬೆಳೆಸುವ ರೈತರು, ಹಿಪ್ಪುನೇರಳೆ ಸಸಿ ವಿತರಿಸುವ ಕುರಿತು ವಿತರಣಾ ಪಟ್ಟಿಯನ್ನು ಸಲ್ಲಿಸುವುದು.
- ಹಿಪ್ಪುನೇರಳೆ ನಾಟಿಯನ್ನು ನೇರವಾಗಿ ಹಿಪ್ಪುನೇರಳೆ ಕಡ್ಡಿ ನಾಟಿ ಮಾಡುವ / ನರ್ಸರಿಯಿಂದ ಸಸಿ ಪಡೆದು ನಾಟಿ ಮಾಡುವ ಕುರಿತು, ಬಿತ್ತನೆ ಕಡ್ಡಿ/ನರ್ಸರಿ ಸಸಿ ಪಡೆದ ಮೂಲದ ವಿವರ ಸಹ ಸಲ್ಲಿಸುವುದು.
- ರೋಗ ನಿಯಂತ್ರಣ ಕಾರ್ಯಕ್ರಮಕ್ಕೆ ಋತುವಿಗೆ ಅನುಗುಣವಾಗಿ ಅವಶ್ಯವಿರುವ ಸಿಂಪರಕಗಳನ್ನು ಮಾತ್ರ ಪಡೆಯುವುದು. ವ್ಯಾಪ್ತಿಯಲ್ಲಿ ಬರುವ ರೇಷ್ಮೆ ಬೆಳೆಗಾರರು ಮತ್ತು ಹಿಪ್ಪುನೇರಳೆ ಕ್ಷೇತ್ರವನ್ನು ಗಮನದಲ್ಲಿ ಇರಿಸಿಕೊಂಡು ಫಲಾನುಭವಿಗಳನ್ನು ಆಯ್ಕೆ ಮಾಡಿ ಸಂಬಂಧಿಸಿದ ಜಂಟಿ ನಿರ್ದೇಶಕರಿಂದ ಅನುಮೋದನೆ ಪಡೆಯುವುದು.

- ರೋಗ ನಿಯಂತ್ರಣಕ್ಕಾಗಿ ಪಡೆದ ಸಿಂಪರಕಗಳನ್ನು ದಾಸ್ತಾನು ವಹಿಯಲ್ಲಿ ದಾಖಲಿಸುವುದು ಮತ್ತು ವಿತರಣೆ ಮಾಡಿದ ನಂತರ ವಿತರಣಾ ವಹಿಯಲ್ಲಿಯೂ ಸಹ ದಾಖಲಿಸುವುದು.
- ಅವಧಿ ಮೀರಿದ ಸೋಂಕು ನಿವಾರಕಗಳು/ಸಿಂಪರಕಗಳನ್ನು ಯಾವುದೇ ಕಾರಣಕ್ಕೂ ಪಡೆಯಬಾರದು ಹಾಗೂ ವಿತರಿಸಬಾರದು.

**1. ಹಿಪ್ಪುನೇರಳೆ ನರ್ಸರಿ:**

ಹಿಪ್ಪುನೇರಳೆ ತೋಟ ಸ್ಥಾಪನೆಗೆ ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳು ಸದೃಢವಾಗಿ ಬೇರುಬಿಟ್ಟಿದ್ದು, ಆರೋಗ್ಯಕರವಾಗಿ 4 ತಿಂಗಳವರೆಗೆ ಬೆಳೆದ ಹಿಪ್ಪುನೇರಳೆ ಸಸಿ ನಾಟಿ ಮಾಡುವುದರಿಂದ ಹಿಪ್ಪುನೇರಳೆ ತೋಟ ಸ್ಥಾಪನೆಯಲ್ಲಿ ತಪ್ಪು ಗುಳಿಗಳಾಗುವುದಿಲ್ಲ. ನರ್ಸರಿ ಬೆಳೆಸುವುದು ಒಂದು ಲಾಭದಾಯಕ ಕಸುಬಾಗಿರುವುದರಿಂದ, ವಾಣಿಜ್ಯ ಪ್ರಮಾಣದಲ್ಲಿ ಸಸಿ ಬೆಳೆಸುವುದನ್ನು ಪ್ರೋತ್ಸಾಹಿಸಲು ಸಹಾಯ ನೀಡಲಾಗುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಘಟಕ ದರ | ಸಹಾಯಧನ | |
|---|---|---|---|---|
| | | | ಸಾಮಾನ್ಯ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ |
| 1 | ಹಿಪ್ಪುನೇರಳೆ ನರ್ಸರಿ (ಎಕರೆ) | 1.50 | 1.125(75%) | 1.35(90%) |

- ತೋಟದಲ್ಲಿ ಒಂದೇ ಮಟ್ಟದ ಸಸಿಗಳು ಸಮ ಪ್ರಮಾಣದಲ್ಲಿ ಬೆಳೆದು ಉತ್ಕೃಷ್ಟ ಸೊಪ್ಪು ನೀಡುತ್ತವೆ.
- ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳ ಬದುಕುವ ಸಾಮರ್ಥ್ಯತೆ ಹೆಚ್ಚಿರುತ್ತದೆ.
- ಸಸಿಯಿಂದ ಸ್ಥಾಪಿತವಾಗುವ ತೋಟಕ್ಕೆ ಅತೀ ಕಡಿಮೆ ಅವಧಿಯಲ್ಲಿ ಬೆಳೆಯಿಟ್ಟು ಗೂಡು ಬೆಳೆಯಬಹುದು.
- ತೋಟದಲ್ಲಿನ ತಪ್ಪುಗುಳಿ ನಿವಾರಿಸಿ ಉತ್ಪಾದಕತೆ ಹೆಚ್ಚಿಸಲು ಸಸಿಗಳನ್ನು ಆಶ್ರಯಿಸಬಹುದು.
- ಸಮೃದ್ಧ ನೀರಾವರಿಯುಳ್ಳ ಒಂದು ಎಕರೆ ಜಮೀನಿನಲ್ಲಿ ಹೆಚ್ಚು ಇಳುವರಿ ಹಿಪ್ಪುನೇರಳೆ ತಳಿಯ ಸಸಿಗಳನ್ನು 4 ತಿಂಗಳವರೆಗೆ ಬೆಳೆಸಿ ಹೊಸದಾಗಿ ನಾಟಿ ಮಾಡುವ ಪ್ರದೇಶಕ್ಕೆ ಒದಗಿಸಬಹುದು.
- ಒಂದು ಎಕರೆಯಲ್ಲಿ ಹಿಪ್ಪುನೇರಳೆ ಸಸಿಗಳನ್ನು 4 ತಿಂಗಳವರೆಗೆ ಬೆಳೆಸಿರಬೇಕು.

1. ಸ್ವಂತ / ಗುತ್ತಿಗೆ ಪಡೆದ ಸಮೃದ್ಧ ನೀರಾವರಿ ಸೌಲಭ್ಯವುಳ್ಳ ಕನಿಷ್ಠ ಒಂದು ಎಕರೆ ಸಮತಟ್ಟಾದ, ಎತ್ತರಕ್ಕಿರುವ, ಫಲವತ್ತಾದ ಜಮೀನು ಉಳ್ಳವರು ಈ ಸಹಾಯ ಪಡೆಯಬಹುದು.
2. ಈ ಜಮೀನನ್ನು ಇಲಾಖೆಯ ಅಧಿಕಾರಿಗಳು ವೀಕ್ಷಿಸಿ ದೃಢೀಕರಿಸಿರಬೇಕು.
3. ಮಣ್ಣು ಪರೀಕ್ಷೆಯನ್ನು ಸರ್ಕಾರಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಮಾಡಿಸಬೇಕು.
4. ಸಸಿಗಳನ್ನು ವರ್ಷ ಪೂರ್ತಿ ಬೆಳಸಬಹುದಾಗಿದ್ದರೂ, ನಾಟಿ ಕಾಲಕ್ಕೆ 4 ತಿಂಗಳು ಮುಂಚಿತವಾಗಿ ಬೆಳೆಸುವುದು ಸೂಕ್ತ. ಅಂದರೆ ಫೆಬ್ರವರಿ-ಏಪ್ರಿಲ್ ತಿಂಗಳುಗಳಲ್ಲಿ ಬೆಳೆಸಲು ಕ್ರಮವಹಿಸುವುದು. ಜೂನ್-ಆಗಸ್ಟ್‌ಗೆ ಸಸಿಗಳನ್ನು ನಾಟಿ ಮಾಡಲು ವಿತರಿಸುವುದು.
5. ಸಸಿಗಳನ್ನು ಏರುಮಡಿಗಳಲ್ಲಿ ಅಥವಾ 23-25.ಸೆಂ.ಮಿ ಎತ್ತರ ಮತ್ತು 10-15 ಸೆಂ.ಮಿ ವ್ಯಾಸವುಳ್ಳ ಪಾಲಿಥೀನ್ ಬ್ಯಾಗ್‌ಗಳಲ್ಲಿ ಮಣ್ಣು, ಸಾವಯವ ಗೊಬ್ಬರ, ಮರಳುಗಳ ಮಿಶ್ರಣದಿಂದ ತುಂಬಿಸಿ ಬೆಳೆಸಬಹುದಾಗಿದೆ.
6. ಸುಧಾರಿತ ಹೆಚ್ಚು ಇಳುವರಿ ನೀಡುವ ಬಿತ್ತನೆ ಕಡ್ಡಿಗಳನ್ನು ಸಸಿ ಬೆಳೆಸಲು ಉಪಯೋಗಿಸಬೇಕು.
7. ಒಬ್ಬ ರೈತ ಗರಿಷ್ಠ 1.00 ಎಕರೆವರೆಗೆ ಸಸಿ ಬೆಳೆಸಿ ಸೌಲಭ್ಯ ಪಡೆಯಬಹುದಾಗಿದೆ.

8. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ / ಅಧಿಕಾರಿಗಳು ಕಿಸಾನ್ ನರ್ಸರಿ ಮುಂದೆ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.
9. ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಕೆ2 ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.
10. ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು / ದೃಢೀಕರಣಗಳಿರಬೇಕು.

## 2. ಹಿಪ್ಪುನೇರಳೆ ನಾಟಿ ಮಾಡುವ ರೇಷ್ಮೆ ಕೃಷಿಕರಿಗೆ ಸಹಾಯಧನ :

ಯಶಸ್ವಿ ಗೂಡು ಉತ್ಪಾದನೆಗೆ ಹಿಪ್ಪುನೇರಳೆ ಗುಣಮಟ್ಟ ಮುಖ್ಯವಾದ ಅಂಶ. ಈ ನಿಟ್ಟಿನಲ್ಲಿ ಹಿಪ್ಪುನೇರಳೆ ತೋಟ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ನೀರಾವರಿ ಸೌಲಭ್ಯವಿರುವ ರೈತರನ್ನು / ಕೃಷಿಕರನ್ನು ಆಯ್ಕೆ ಮಾಡಿ ಹಿಪ್ಪುನೇರಳೆ ನಾಟಿ ಮಾಡುವ ತೋಟ ವಿಸ್ತರಿಸುವ / ಸಾಂಪ್ರದಾಯಿಕ ಹಿಪ್ಪುನೇರಳೆ ತಳಿ ತೆಗೆದು ಹೆಚ್ಚಿನ ಇಳುವರಿ ನೀಡುವ ಹೊಸ ತಳಿಗೆ ಬದಲಾಯಿಸುವ ರೇಷ್ಮೆ ಕೃಷಿಕರಿಗೆ ಸಹಾಯಧನ ಒದಗಿಸಲಾಗುವುದು. ಒಬ್ಬ ಫಲಾನುಭವಿ ಗರಿಷ್ಠ 2.00 ಹೆಕ್ಟೇರ್‌ವರೆಗೆ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ.

1. ಕ್ಷೇತ್ರಮಟ್ಟದ ಅಧಿಕಾರಿ/ಸಿಬ್ಬಂದಿ ಇಂತಹ ರೈತರ ತೋಟ ಹಿಪ್ಪುನೇರಳೆ ನಾಟಿ ಪ್ರಾರಂಭದಿಂದ ಹಿಪ್ಪುನೇರಳೆ ನಾಟಿ ಕಾರ್ಯ ಪೂರೈಸುವವರೆಗೂ ನಿರಂತರವಾಗಿ ಭೇಟಿ ನೀಡಿ ತಾಂತ್ರಿಕ ಮಾಹಿತಿ ನೀಡುತ್ತಿರಬೇಕು ಹಾಗೂ ಈ ಕುರಿತು ತಮ್ಮ ದಿನಚರಿಯಲ್ಲಿ ದಾಖಲಿಸಿರಬೇಕು.
2. ಫಲಾಪೇಕ್ಷಿ ರೈತರು ರೂ.50.00ರ ಮೌಲ್ಯದ ಛಾಪಾ ಕಾಗದದಲ್ಲಿ ಕನಿಷ್ಠ 3 ವರ್ಷಗಳವರೆಗೆ ರೇಷ್ಮೆ ಕೃಷಿ ಮುಂದುವರೆಸಿಕೊಂಡು ಹೋಗುವ ಬಗ್ಗೆ ಹಾಗೂ ವಾರ್ಷಿಕ ಕನಿಷ್ಠ 2 ದ್ವಿತಳಿ ಬೆಳೆ ಮಾಡುವ ಕುರಿತು ಮುಚ್ಚಳಿಕೆಯನ್ನು ಬರೆದು ಕೊಡಬೇಕು.
3. ಸ್ವಂತ ಜಮೀನು, ನೀರಾವರಿ ಸೌಲಭ್ಯ ಹೊಂದಿದ್ದು, ಹೊಸ ಹಿಪ್ಪುನೇರಳೆ ತಳಿ ನಾಟಿ ಮಾಡುವುದು ಅವಶ್ಯ (ಪಹಣಿ ನೀಡುವುದು).
4. ನವೀಕರಿಸಿದ ರೇಷ್ಮೆ ಹುಳು ಸಾಕಾಣಿಕಾ ಪಾಸ್ ಪುಸ್ತಕ/ರೇಷ್ಮೆ ಕಾರ್ಡ್ ಹೊಂದಿರಬೇಕು.
5. ಹಿಪ್ಪುನೇರಳೆ ನಾಟಿ ಮಾಡಿರುವ ಬಗ್ಗೆ ಇಲಾಖಾಧಿಕಾರಿಗಳು ನಿಗಧಿತ ನಮೂನೆಯಲ್ಲಿ ಮಹಜರು ಮಾಡಿ ಸಲ್ಲಿಸುವುದು.
6. ರೇಷ್ಮೆ ಕೃಷಿಕರು ಹಿಪ್ಪುನೇರಳೆ ನಾಟಿ ಮಾಡಿರುವ ಬಗ್ಗೆ ಇಲಾಖಾಧಿಕಾರಿಗಳು ಪರಿಶೀಲಿಸಿ ಸಹಾಯಧನ ನೀಡುವಂತೆ ಶಿಫಾರಸ್ಸು ಮಾಡಬೇಕು. (ನಿಗಧಿತ ನಮೂನೆ ಲಗತ್ತಿಸಿದೆ).
7. ಸಹಾಯಧನದ ಮೊತ್ತವನ್ನು ನೇರವಾಗಿ ಫಲಾನುಭವಿ ಬ್ಯಾಂಕ್ ಖಾತೆಗೆ ಇ.ಸಿ.ಎಸ್. ಮುಖಾಂತರ ಪಾವತಿಸುವುದು ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಸಂಬಂಧಿಸಿದ ಬ್ಯಾಂಕ್‌ಗೆ ಕಳುಹಿಸುವುದು.
8. ರೇಷ್ಮೆ ಕೃಷಿಕರು ನಿಗಧಿತ ನಮೂನೆಯಲ್ಲಿ ತಮ್ಮ ವ್ಯಾಪ್ತಿಗೆ ಬರುವ ತಾಂತ್ರಿಕ ಸೇವಾ ಕೇಂದ್ರದ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಿ ಸಹಾಯಧನ ಪಡೆಯುವುದು.
9. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ / ಅಧಿಕಾರಿಗಳು ಹಿಪ್ಪುನೇರಳೆ ತೋಟದಲ್ಲಿ ನಿಂತಿರುವ ಛಾಯಾಚಿತ್ರ ತೆಗೆಯಿಸಿ ಸಲ್ಲಿಸಬೇಕು.

| | | | | |
|---|---|---|---|---|
| 1 | ಹಿಪ್ಪುನೇರಳೆ ನರ್ಸರಿ (ಎಕರೆ) | 1.50 | 1.125(75%) | 1.35(90%) |

- ತೋಟದಲ್ಲಿ ಒಂದೇ ಮಟ್ಟದ ಸಸಿಗಳು ಸಮ ಪ್ರಮಾಣದಲ್ಲಿ ಬೆಳೆದು ಉತ್ಕೃಷ್ಟ ಸೊಪ್ಪು ನೀಡುತ್ತವೆ.
- ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳ ಬದುಕುವ ಸಾಮರ್ಥ್ಯತೆ ಹೆಚ್ಚಿರುತ್ತದೆ.
- ಸಸಿಯಿಂದ ಸ್ಥಾಪಿತವಾಗುವ ತೋಟಕ್ಕೆ ಅತೀ ಕಡಿಮೆ ಅವಧಿಯಲ್ಲಿ ಬೆಳೆಯಿಟ್ಟು ಗೂಡು ಬೆಳೆಯಬಹುದು.
- ತೋಟದಲ್ಲಿನ ತಪ್ಪುಗುಳಿ ನಿವಾರಿಸಿ ಉತ್ಪಾದಕತೆ ಹೆಚ್ಚಿಸಲು ಸಸಿಗಳನ್ನು ಆಶ್ರಯಿಸಬಹುದು.
3. ರೀಲಿಂಗ್ ಘಟಕದ ಒಡೆತನವನ್ನು ಹೊಂದಿರುವ ಅರ್ಜಿದಾರರು ಮಾತ್ರ ಕಾರ್ಯಕ್ರಮದ ಫಲಾನುಭವಿ ಆಯ್ಕೆಗೆ ಅರ್ಹರಿರುತ್ತಾರೆ. ಬಾಡಿಗೆ/ಲೀಸ್ ಆಧಾರದ ಮೇಲೆ ರೀಲಿಂಗ್ ಘಟಕವನ್ನು ನಡೆಸುತ್ತಿರುವ ಹಾಗೂ ಇದಕ್ಕಾಗಿ ರೀಲಿಂಗ್ ಲೈಸನ್ಸ್ ಹೊಂದಿರುವ ರೀಲರ್‌ಗಳು ಕಾರ್ಯಕ್ರಮದ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
4. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2 ಅನುಪಾತದಲ್ಲಿ ಕಾಯ್ದಿರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು

2. ಕುಟುಂಬದ ಇತರೆ ಸದಸ್ಯರಾರು ಕಾರ್ಯಕ್ರಮದ ಸವಲತ್ತನ್ನು ಪಡೆದಿರಬಾರದು.
3. ಫಲಾನುಭವಿಯು ಸೋಲಾರ್ ಪವರ್ ಜನರೇಟರ್ ನ ಘಟಕ ದರದ ತನ್ನ ಪಾಲಿನ ಹಣವನ್ನು (**ಘಟಕ ದರದ ಶೇ.25**) ಸರಬರಾಜುದಾರರಿಗೆ ಪಾವತಿಸಿರುವ ರಶೀದಿ ಮತ್ತು ಜನರೇಟರ್ ಸರಬರಾಜಿನ ಬಗ್ಗೆ ದಾಖಲಾತಿಗಳನ್ನು(ಟ್ಯಾಕ್ಸ್ ಇನ್‌ವಾಯ್ಸ್) ದೃಢಪಡಿಸಿಕೊಳ್ಳಬೇಕು.

**ಕಾರ್ಯಕ್ರಮ : 8 - ಸೋಲಾರ್ ವಾಟರ್ ಹೀಟರ್ ಅಳವಡಿಕೆಗೆ ಸಹಾಯಧನ**

**ಕಾರ್ಯಕ್ರಮದ ಉದ್ದೇಶ:**

ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಇಂಧನದ ಬಳಕೆಯಿಂದ ಪಡೆಯುತ್ತಿರುವ ಬಿಸಿ ನೀರಿನ ಪೂರೈಕೆಯನ್ನು ಸಾಕಷ್ಟು ಮಟ್ಟಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಕೆಯಿಂದ ಸರಿದೂಗಿಸುವುದು.

ರೇಷ್ಮೆ ನೂಲು ಬಿಚ್ಚಾಣಿಕೆದಾರರು ರೀಲಿಂಗ್ ಘಟಕಗಳಿಗೆ ಅಗತ್ಯವಿರುವ ಬಿಸಿ ನೀರಿನ ಪೂರೈಕೆಯನ್ನು ಇಂಧನದ ಬಳಕೆಯಿಂದ ಪಡೆಯುತ್ತಿರುತ್ತಾರೆ. ಇದರಿಂದ ರೇಷ್ಮೆ ಉತ್ಪಾದನಾ ವೆಚ್ಚವು ಗಣನೀಯವಾಗಿ ಹೆಚ್ಚಿದ್ದು, ಇಂಗಾಲದ ಡೈ-ಆಕ್ಸೈಡ್ ನ ಹೊರಸೂಸುವಿಕೆಯಿಂದ ವಾಯು ಮಾಲಿನ್ಯಕ್ಕೂ ಕಾರಣವಾಗಿದೆ. ಸೋಲಾರ್ ವಾಟರ್ ಹೀಟರ್ ಅಳವಡಿಕೆಯಿಂದ ಇಂಧನದ ಉಳಿತಾಯ ಮತ್ತು ವಾಯು ಮಾಲಿನ್ಯವನ್ನು ಸಾಕಷ್ಟು ಮಟ್ಟಿಗೆ ತಡೆಗಟ್ಟಬಹುದಾಗಿರುತ್ತದೆ.

**ಸೋಲಾರ್ ವಾಟರ್ ಹೀಟರ್ ಅಳವಡಿಕೆಗೆ ಸಹಾಯಧನದ ಪರಿಮಿತಿಗಳು:**

| ಕ್ರ. ಸಂ. | ಘಟಕ | ಸೋಲಾರ್ ವಾಟರ್ ಹೀಟರ್ ಸಾಮರ್ಥ್ಯ (ಲೀಟರ್‌ಗಳಲ್ಲಿ) | ಮಾದರಿ | ಘಟಕ ದರ (ರೂ. ಲಕ್ಷ) | ಫಲಾನುಭವಿ ಪಾಲು ಘಟಕ ದರದ ಶೇ.25 (ರೂ. ಲಕ್ಷಗಳು) | ಸಹಾಯಧನ ಘಟಕ ದರದ ಶೇ.75 (ರೂ. ಲಕ್ಷಗಳು) |
|---|---|---|---|---|---|---|
| 1 | ಮಲ್ಟಿಎಂಡ್ ರೀಲಿಂಗ್ ಬೇಸಿನ್/ 48 ಕೊನೆಗಳ ಸುಧಾರಿತ ಕಾಟೇಜ್ ಬೇಸಿನ್ | 1000 ಲೀ | FPC | 2.950 | 0.738 | 2.212 |
| | | | ETC | 2.250 | 1.563 | 1.687 |
| 2 | 36 ಕೊನೆಗಳ ಸುಧಾರಿತ ಕಾಟೇಜ್ ಬೇಸಿನ್/ 3 ಮತ್ತು 2 ಟೇಬಲ್ ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ | 500 ಲೀ | FPC | 1.410 | 0.353 | 1.057 |
| | | | ETC | 0.960 | 0.240 | 0.720 |
| 3 | 1 ಟೇಬಲ್ ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್/ಚರಕಾ | 200 ಲೀ | FPC | 0.605 | 0.151 | 0.454 |
| | | | ETC | 0.420 | 0.105 | 0.315 |

**ಕಾರ್ಯಕ್ರಮದ ಅರ್ಹತೆ/ ಅನುಸರಿಸಬೇಕಾದ ಮಾನದಂಡಗಳು:**

1. ಮಲ್ಟಿಎಂಡ್ ಬೇಸಿನ್/ಸುಧಾರಿತ ಕಾಟೇಜ್ ಬೇಸಿನ್/ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್/ಚರಕಾ ರೀಲಿಂಗ್ ಘಟಕ ಹೊಂದಿರುವ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
2. ಒಬ್ಬ ರೀಲರ್ ಒಂದು ಘಟಕಕ್ಕೆ ಸೀಮಿತಗೊಂಡಂತೆ ಮಾತ್ರ ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
3. ರೀಲಿಂಗ್ ಘಟಕದ ಒಡೆತನವನ್ನು ಹೊಂದಿರುವ ಅರ್ಜಿದಾರರು ಮಾತ್ರ ಕಾರ್ಯಕ್ರಮದ ಫಲಾನುಭವಿ ಆಯ್ಕೆಗೆ ಅರ್ಹರಿರುತ್ತಾರೆ. ಬಾಡಿಗೆ/ಲೀಸ್ ಆಧಾರದ ಮೇಲೆ ರೀಲಿಂಗ್ ಘಟಕವನ್ನು ನಡೆಸುತ್ತಿರುವ ಹಾಗೂ ಇದಕ್ಕಾಗಿ ರೀಲಿಂಗ್ ಲೈಸನ್ಸ್ ಹೊಂದಿರುವ ರೀಲರ್‌ಗಳು ಕಾರ್ಯಕ್ರಮದ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
4. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2 ಅನುಪಾತದಲ್ಲಿ ಕಾಯ್ದಿರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು ಪರಿಗಣಿಸುವುದು. ಸಂಭವನೀಯ ಫಲಾನುಭವಿಗಳ ಪಟ್ಟಿಯನ್ನು ಮಂಜೂರಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
5. ಫಲಾನುಭವಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ 02 ತಿಂಗಳುಗಳಲ್ಲಿ ಸೋಲಾರ್ ವಾಟರ್ ಹೀಟರ್ ಅಳವಡಿಕೆಗೆ ಕ್ರಮವಹಿಸಬೇಕು. ಇಲ್ಲದಿದ್ದ ಪಕ್ಷದಲ್ಲಿ ಫಲಾನುಭವಿ ಆಯ್ಕೆಯು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.
6. ಆಯ್ಕೆ ಪತ್ರ ಸ್ವೀಕರಿಸಿದ ಫಲಾನುಭವಿಯು ಸೋಲಾರ್ ವಾಟರ್ ಹೀಟರ್ ಅನ್ನು ರಾಜ್ಯ ರೇಷ್ಮೆ ಇಲಾಖೆಯು ಅಧಿಕೃತವಾಗಿ ಗುರುತಿಸಿರುವ ಸೋಲಾರ್ ವಾಟರ್ ಹೀಟರ್ ತಯಾರಕ/ಸರಬರಾಜು ಸಂಸ್ಥೆಗೆ **ಘಟಕ ದರದ ಶೇ.25**) ಹಣವನ್ನು ಪಾವತಿಸಿ ಸರಬರಾಜು ಪಡೆಯತಕ್ಕದ್ದು. ಸೋಲಾರ್ ವಾಟರ್ ಹೀಟರ್ ಸರಬರಾಜು ಖಾತ್ರಿಯಾದ ನಂತರವೇ ಸರ್ಕಾರದ ಸಹಾಯಧನವನ್ನು ತಯಾರಕ/ಸರಬರಾಜು ಸಂಸ್ಥೆಗೆ ಮಂಜೂರು ಮಾಡಲಾಗುವುದು. ಇದಕ್ಕಾಗಿ ಫಲಾನುಭವಿಯು 'ಒಪ್ಪಿಗೆ ಪತ್ರ' ನೀಡಬೇಕು.
7. ಸೋಲಾರ್ ವಾಟರ್ ಹೀಟರ್ ಅಳವಡಿಕೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ಕೈಗೊಳ್ಳಲಾಗುವುದು. ಪರಿವೀಕ್ಷಣೆ ವರದಿಯಲ್ಲಿ ಯಾವುದೇ ನ್ಯೂನತೆಗಳು ಇಲ್ಲದಿರುವುದು ಖಾತ್ರಿಯಾಗಬೇಕು. ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ಸೋಲಾರ್ ವಾಟರ್ ಹೀಟರ್ ಛಾಯಾಚಿತ್ರ (photo) ವನ್ನು ಸಹಾಯಧನದ ಪ್ರಸ್ತಾವನೆಯು ಹೊಂದಿರಬೇಕು.
8. ಕನಿಷ್ಠ ಮುಂದಿನ 05 ವರ್ಷಗಳವರೆಗೆ ಇಲಾಖೆ ನಿಗದಿಪಡಿಸಬಹುದಾದ ನಿಬಂಧನೆಗೆ ಒಳಪಟ್ಟು ನೂಲು ಬಿಚ್ಚಾಣಿಕೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.100/-ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಬೇಕು.
9. ರೀಲಿಂಗ್ ಘಟಕದಲ್ಲಿ ಬಾಲ ಕಾರ್ಮಿಕರನ್ನು (14 ವರ್ಷ ತುಂಬಿರದ ಮಕ್ಕಳು) ನಿಯೋಜನೆ ಮಾಡಿಕೊಳ್ಳುವುದಿಲ್ಲವೆಂದು, ಒಂದು ವೇಳೆ ಇದನ್ನು ಉಲ್ಲಂಘಿಸಿದಲ್ಲಿ ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986 ರಡಿ ದಂಡನೆಗೆ ಬದ್ಧನಾಗಿರುವುದಾಗಿ ಘೋಷಣೆ ನೀಡಬೇಕು.

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್)/ ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಯ ಅರ್ಹತೆಯ ಬಗ್ಗೆ ಪರಿಶೀಲಿಸುವುದು.

2. ಸರಿಯಿದ್ದಲ್ಲಿ ಅರ್ಜಿಯಲ್ಲಿನ ಮಾಹಿತಿಯನ್ನು ಸ್ಥಳ ಪರಿಶೀಲನೆಯೊಂದಿಗೆ ದೃಢಪಡಿಸಿಕೊಳ್ಳುವುದು ಮತ್ತು ಫಲಾನುಭವಿ ಆಯ್ಕೆಗಾಗಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
3. ಮಂಜೂರಾತಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಅರ್ಜಿದಾರರಿಗೆ ಆಯ್ಕೆ ಪತ್ರ ನೀಡುವುದು.
4. ರೇಷ್ಮೆ ಇಲಾಖೆಯಿಂದ ಅಧಿಕೃತವಾಗಿ ಗುರುತಿಸಿರುವ ಸೋಲಾರ್ ವಾಟರ್ ಹೀಟರ್ ಸರಬರಾಜು ಸಂಸ್ಥೆಗೆ ಫಲಾನುಭವಿಯು ತನ್ನ ಪಾಲಿನ ಹಣವನ್ನು ಪಾವತಿಸಿರುವುದರ ದಾಖಲೆ ಪಡೆದು ಸೋಲಾರ್ ವಾಟರ್ ಹೀಟರ್ ಸರಬರಾಜುದಾರರಿಗೆ ಕಾರ್ಯಾದೇಶ ನೀಡುವುದು.
5. ಸೋಲಾರ್ ವಾಟರ್ ಹೀಟರ್ ಅಳವಡಿಕೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ನಡೆಸುವುದು ಮತ್ತು ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ಸೋಲಾರ್ ವಾಟರ್ ಹೀಟರ್‌ನ ಛಾಯಾಚಿತ್ರ(photo) ದೊಂದಿಗೆ ಪರಿವೀಕ್ಷಣಾ ವರದಿಯಿರುವ ಪ್ರಸ್ತಾವನೆಯನ್ನು ಮಹಜರ್‌ನೊಂದಿಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
6. ಮೇಲೆ ತಿಳಿಸಿರುವಂತೆ ಫಲಾನುಭವಿಯು ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿರುವುದರ ಬಗ್ಗೆ ದೃಢಪಡಿಸಿಕೊಂಡು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮತ್ತು ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರು ಮಾಡಲು ವಿತ್ತೀಯ ಪ್ರತ್ಯಾಧಿಕಾರ ನೀಡಿರುವಂತೆ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದು.
7. ಮಂಜೂರಾದ ಸಹಾಯಧನವನ್ನು ಸರಬರಾಜು ಸಂಸ್ಥೆಯ ಬ್ಯಾಂಕ್ ಖಾತೆಗೆ ನೇರವಾಗಿ K-2/DBT ಮುಖಾಂತರ ಜಮೆ ಮಾಡುವುದು.
8. ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಿತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು.

**ಸ್ಥಳ ಪರಿಶೀಲನೆ ಸಮಯದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಮತ್ತು ದೃಢಪಡಿಸಿಕೊಳ್ಳಬೇಕಾದ ಅಂಶಗಳು:**

1. ಫಲಾನುಭವಿಯು ನಿರ್ಧಿಷ್ಟ ಗುಣಮಟ್ಟದ ಸೋಲಾರ್ ವಾಟರ್ ಹೀಟರ್ ಅನ್ನು ರೇಷ್ಮೆ ಇಲಾಖೆಯು ಅಧಿಕೃತವಾಗಿ ಗುರುತಿಸಿರುವ ಸರಬರಾಜು ಸಂಸ್ಥೆಯಿಂದ ಸರಬರಾಜು ಪಡೆದು ಅಳವಡಿಸಿರಬೇಕು.
2. ಕುಟುಂಬದ ಇತರೆ ಸದಸ್ಯರಾರು ಕಾರ್ಯಕ್ರಮದ ಸವಲತ್ತನ್ನು ಪಡೆದಿರಬಾರದು.
3. ಫಲಾನುಭವಿಯು ಸೋಲಾರ್ ವಾಟರ್ ಹೀಟರ್‌ನ ಘಟಕ ದರದ ತನ್ನ ಪಾಲಿನ ಹಣವನ್ನು (**ಘಟಕ ದರದ ಶೇ.25**) ಸರಬರಾಜುದಾರರಿಗೆ ಪಾವತಿಸಿರುವ ರಶೀದಿ ಮತ್ತು ಸೋಲಾರ್ ವಾಟರ್ ಹೀಟರ್ ಸರಬರಾಜಿನ ಬಗ್ಗೆ ದಾಖಲಾತಿಗಳನ್ನು (ಟ್ಯಾಕ್ಸ್ ಇನ್‌ವಾಯ್ಸ್) ದೃಢಪಡಿಸಿಕೊಳ್ಳಬೇಕು.

**ಕಾರ್ಯಕ್ರಮ : 9 - ಹೀಟ್ ರಿಕವರಿ ಯುನಿಟ್ ಅಳವಡಿಕೆಗೆ ಸಹಾಯಧನ**

**ಕಾರ್ಯಕ್ರಮದ ಉದ್ದೇಶ:**

ಇಟಾಲಿಯನ್ ಮಾದರಿ ಕಾಟೇಜ್ ರೀಲಿಂಗ್ ಘಟಕಗಳಲ್ಲಿ ಗೂಡು ಬೇಯಿಸುವ ಒಲೆಗಳಿಂದ ಚಿಮಣಿ ಮುಖಾಂತರ ಹೊರ ಹೋಗುವ ಶಾಖವನ್ನು ಹಿಡಿದಿಟ್ಟುಕೊಳ್ಳುವ ಮೂಲಕ ಒಲೆಯ ಕಾರ್ಯಸಾಮರ್ಥ್ಯವನ್ನು ಹೆಚ್ಚಿಸಲು ಹೀಟ್ ರಿಕವರಿ ಯುನಿಟ್‌ಗಳ ಅಳವಡಿಕೆಯನ್ನು ಪ್ರೋತ್ಸಾಹಿಸುವುದು.

ಇಟಾಲಿಯನ್ ಮಾದರಿ ಕಾಟೇಜ್ ರೀಲಿಂಗ್ ಘಟಕಗಳಲ್ಲಿ ಗೂಡು ಬೇಯಿಸುವ ನೀರಿನ ಉಷ್ಣಾಂಶವನ್ನು 90-92 ಡಿಗ್ರಿ ಸೆಂಟಿಗ್ರೇಡ್ ನಲ್ಲಿ ನಿರ್ವಹಿಸಲು ಒಲೆಗಳಿಗೆ ಇಂಧನದ ಮೂಲವಾಗಿ ಕಟ್ಟಿಗೆಯು ಅಪಾರ ಪ್ರಮಾಣದಲ್ಲಿ ಬಳಕೆಯಾಗುತ್ತಿರುತ್ತದೆ. ಪ್ರತಿ ತಂಡದ

ಗೂಡಿನ ಬೇಯುಸುವಿಕೆ ನಂತರ ನೀರಿನ ಬದಲಾವಣೆಯು ಅತ್ಯಗತ್ಯವಾಗಿದ್ದು, ಈ ಪ್ರಕ್ರಿಯೆಯಲ್ಲಿ ನೀರಿನ ಉಷ್ಣಾಂಶವನ್ನು ಪ್ರತಿಬಾರಿಯೂ 90-92 ಡಿಗ್ರಿ ಸೆಂಟಿಗ್ರೇಡ್ ನಲ್ಲಿ ನಿರ್ವಹಿಸುವುದು ಪ್ರಯಾಸಕರವು ಮತ್ತು ಇದಕ್ಕಾಗಿ ಸಮಯದ ಅಗತ್ಯತೆಯಿಂದ ರೇಷ್ಮೆ ಉತ್ಪಾದಕತೆಯಲ್ಲಿ ಕುಂಠಿತಕ್ಕೆ ಕಾರಣವಾಗುತ್ತಿರುವುದು ರೀಲರ್ಗಳ ಅನುಭವಕ್ಕೆ ಬಂದಿರುತ್ತದೆ. ಒಲೆಯ ಚಿಮಣಿಯಿಂದ ಹೊರಹೋಗುವ ಶಾಖವನ್ನು ತಡೆಹಿಡಿದಿಟ್ಟುಕೊಂಡು, ಮುಂದಿನ ತಂಡದ ಗೂಡು ಬೇಯುಸುವಿಕೆಗೆ ಬೇಕಾದ 90-92 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶದಲ್ಲಿ 75-80 ಡಿಗ್ರಿ ಸೆಂಟಿಗ್ರೇಡ್ ನಷ್ಟು ಉಷ್ಣಾಂಶವನ್ನು ತಕ್ಷಣವೇ ಒದಗಿಸುವ ಸಾಮರ್ಥ್ಯವಿರುವ ಹೀಟ್ ರಿಕವರಿ ಯುನಿಟ್ ಅನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ. ಈ ಮೂಲಕ ಕಟ್ಟಿಗೆ ಬಳಕೆಯಲ್ಲಿ ಶೇ.20ರಷ್ಟು ಉಳಿತಾಯ ಮಾಡುವುದರೊಂದಿಗೆ ರೇಷ್ಮೆ ಉತ್ಪಾದನೆಯಲ್ಲಿನ ವೆಚ್ಚ ತಗ್ಗಿಸುವಲ್ಲಿ ಹಾಗೂ ಸಮಯದ ಉಳಿತಾಯದೊಂದಿಗೆ ರೇಷ್ಮೆ ಉತ್ಪಾದಕತೆಯಲ್ಲಿ ಸುಧಾರಣೆ ತರಲು ಮತ್ತು ಉತ್ತಮ ರೀಲಿಂಗ್ ವಾತಾವರಣವನ್ನು ಕಲ್ಪಿಸಲು ಸಹಕಾರಿಯಾಗುತ್ತದೆ.

**ಹೀಟ್ ರಿಕವರಿ ಯುನಿಟ್ ಯಂತ್ರೋಪಕರಣದ ಸಹಾಯಧನದ ಪರಿಮಿತಿಗಳು:**

| ಕ್ರ. ಸಂ. | ಯಂತ್ರೋಪಕರಣದ ಘಟಕ ದರ (ರೂ. ಲಕ್ಷಗಳು) | ಫಲಾನುಭವಿ ಪಾಲು ಘಟಕ ದರದ ಶೇ.25 (ರೂ. ಲಕ್ಷಗಳು) | ಸಹಾಯಧನ ಘಟಕ ದರದ ಶೇ.75 (ರೂ. ಲಕ್ಷಗಳು) |
|---|---|---|---|
| 1 | 0.250 | 0.063 | 0.187 |

**ಕಾರ್ಯಕ್ರಮದ ಅರ್ಹತೆ/ ಅನುಸರಿಸಬೇಕಾದ ಮಾನದಂಡಗಳು:**

1. ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ರೀಲಿಂಗ್ ಘಟಕ ಹೊಂದಿರುವ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
2. ಒಬ್ಬ ರೀಲರ್ ಒಂದು ಘಟಕಕ್ಕೆ ಸೀಮಿತಗೊಂಡಂತೆ ಮಾತ್ರ ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
3. ರೀಲಿಂಗ್ ಘಟಕದ ಒಡೆತನವನ್ನು ಹೊಂದಿರುವ ಅರ್ಜಿದಾರರು ಮಾತ್ರ ಕಾರ್ಯಕ್ರಮದ ಫಲಾನುಭವಿ ಆಯ್ಕೆಗೆ ಅರ್ಹರಿರುತ್ತಾರೆ. ಬಾಡಿಗೆ/ಲೀಸ್ ಆಧಾರದ ಮೇಲೆ ರೀಲಿಂಗ್ ಘಟಕವನ್ನು ನಡೆಸುತ್ತಿರುವ ಹಾಗೂ ಇದಕ್ಕಾಗಿ ರೀಲಿಂಗ್ ಲೈಸನ್ಸ್ ಹೊಂದಿರುವ ರೀಲರ್ ಗಳು ಕಾರ್ಯಕ್ರಮದ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
4. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2 ಅನುಪಾತದಲ್ಲಿ ಕಾಯ್ದಿರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು ಪರಿಗಣಿಸುವುದು. ಸಂಭವನೀಯ ಫಲಾನುಭವಿಗಳ ಪಟ್ಟಿಯನ್ನು ಮಂಜೂರಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
5. ಫಲಾನುಭವಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ 02 ತಿಂಗಳುಗಳಲ್ಲಿ ಹೀಟ್ ರಿಕವರಿ ಯುನಿಟ್ ಅಳವಡಿಕೆಗೆ ಕ್ರಮವಹಿಸಬೇಕು. ಇಲ್ಲದಿದ್ದ ಪಕ್ಷದಲ್ಲಿ ಫಲಾನುಭವಿ ಆಯ್ಕೆಯು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.
6. ಆಯ್ಕೆ ಪತ್ರ ಸ್ವೀಕರಿಸಿದ ಫಲಾನುಭವಿಯು ಹೀಟ್ ರಿಕವರಿ ಯುನಿಟ್ ಅನ್ನು ರಾಜ್ಯ ರೇಷ್ಮೆ ಇಲಾಖೆಯು ಅಧಿಕೃತವಾಗಿ ಗುರುತಿಸಿರುವ ಹೀಟ್ ರಿಕವರಿ ಯುನಿಟ್ ತಯಾರಕ/ಸರಬರಾಜು ಸಂಸ್ಥೆಗೆ ತನ್ನ ಪಾಲಿನ **ಘಟಕ ದರದ ಶೇ.25ರ** ಹಣವನ್ನು ಪಾವತಿಸಿ ಸರಬರಾಜು ಪಡೆಯತಕ್ಕದ್ದು. ಯಂತ್ರೋಪಕರಣದ ಸರಬರಾಜು ಖಾತ್ರಿಯಾದ ನಂತರವೇ ಸರ್ಕಾರದ ಸಹಾಯಧನವನ್ನು ಯಂತ್ರೋಪಕರಣ ತಯಾರಕ/ಸರಬರಾಜು ಸಂಸ್ಥೆಗೆ ಮಂಜೂರು ಮಾಡಲಾಗುವುದು. ಇದಕ್ಕಾಗಿ ಫಲಾನುಭವಿಯು 'ಒಪ್ಪಿಗೆ ಪತ್ರ' ನೀಡಬೇಕು.
7. ಹೀಟ್ ರಿಕವರಿ ಯುನಿಟ್ ಅಳವಡಿಕೆಯ ಬಗ್ಗೆ ರಾಜ್ಯ ರೇಷ್ಮೆ ಇಲಾಖೆ ಅಧಿಕಾರಿಗಳಿಂದ ಪರಿವೀಕ್ಷಣೆ ಕೈಗೊಳ್ಳಲಾಗುವುದು. ಪರಿವೀಕ್ಷಣೆ ವರದಿಯಲ್ಲಿ ಯಾವುದೇ ನ್ಯೂನತೆಗಳು

1. ಫಲಾನುಭವಿಯು ನಿರ್ಧಿಷ್ಟ ಗುಣಮಟ್ಟದ ಹೀಟ್ ರಿಕವರಿ ಯುನಿಟ್ ಅನ್ನು ರೇಷ್ಮೆ ಇಲಾಖೆಯು ಅಧಿಕೃತವಾಗಿ ಗುರುತಿಸಿರುವ ಸರಬರಾಜು ಸಂಸ್ಥೆಯಿಂದ ಸರಬರಾಜು ಪಡೆದು ಸ್ಥಾಪಿಸಿರಬೇಕು.
2. ಕುಟುಂಬದ ಇತರೆ ಸದಸ್ಯರಾರು ಕಾರ್ಯಕ್ರಮದ ಸವಲತ್ತನ್ನು ಪಡೆದಿರಬಾರದು.
3. ಫಲಾನುಭವಿಯು ಹೀಟ್ ರಿಕವರಿ ಯುನಿಟ್ನ ಘಟಕ ದರದ ತನ್ನ ಪಾಲಿನ ಹಣವನ್ನು (**ಘಟಕ ದರದ ಶೇ.25**) ಸರಬರಾಜುದಾರರಿಗೆ ಪಾವತಿಸಿರುವ ರಶೀದಿ ಮತ್ತು ಹೀಟ್ ರಿಕವರಿ ಯುನಿಟ್ ಸರಬರಾಜಿನ ಬಗ್ಗೆ ದಾಖಲಾತಿಗಳನ್ನು(ಟ್ಯಾಕ್ಸ್ ಇನ್‌ವಾಯ್ಸ್) ದೃಢಪಡಿಸಿಕೊಳ್ಳಬೇಕು.

**ಕಾರ್ಯಕ್ರಮ : 10 - ರಾಜ್ಯದ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಉತ್ಪಾದಿಸಿದ ಗುಣಮಟ್ಟದ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ**

**ರೇಷ್ಮೆ ನೂಲು ಬಿಚ್ಚಾಣಿಕೆದಾರರು ಉತ್ಪಾದಿಸಿದ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನವನ್ನು ನೀಡಲು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ವಾರ್ಷಿಕ 12 ಕೋಟಿ ರೂ. ಒದಗಿಸಲಾಗುವುದು ಎಂದು ಘೋಷಿಸಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನವನ್ನು ಒದಗಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿರುವುದರಿಂದ ಇಲಾಖೆಯ ಅನುದಾನ ರೂ.6.00 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು.**
**ರಾಜ್ಯದಲ್ಲಿ ಉತ್ಪಾದನೆಯಾಗಿ ಸರ್ಕಾರಿ ರೇಷ್ಮೆ ವಿನಿಮಯ ಕೇಂದ್ರಗಳ ಮೂಲಕ ವಹಿವಾಟಾಗುವ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಉತ್ಪಾದಿಸಿದ ಗುಣಮಟ್ಟದ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನವನ್ನು ನೀಡಲು ಹಾಗೂ ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ ಲೆಕ್ಕ ಶೀರ್ಷಿಕೆ 2851-00-107-1-51(106)ರಡಿ ಕಾರ್ಯಕ್ರಮವನ್ನು ರೂ.6.00 ಕೋಟಿಗಳ ಅನುದಾನದಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ.ರೇಷ್ಮೆ/136/ರೇಕೃವಿ/2024, ಬೆಂಗಳೂರು, ದಿನಾಂಕ:04.06.2024ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ. ಸರ್ಕಾರದ ಆದೇಶದ ದಿನಾಂಕ:04.06.2024ರಿಂದ ಸರ್ಕಾರಿ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಮಾರಾಟವಾಗುವ ಗುಣಮಟ್ಟದ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ ನೀಡಲು ಅವಕಾಶವಿರುತ್ತದೆ. ಸರ್ಕಾರದ ಆದೇಶದ ಪ್ರತಿಯನ್ನು ಅಡಕವಿರಿಸಿದೆ.**

**ಕಾರ್ಯಕ್ರಮದ ಉದ್ದೇಶ:**
ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆಯನ್ನು ಪ್ರೋತ್ಸಾಹಿಸುವುದು.

ರಾಜ್ಯದ ಎಲ್ಲಾ ವರ್ಗದ ಹಾಗೂ ಎಲ್ಲಾ ವಿಧದ ರೇಷ್ಮೆ ನೂಲು ಬಿಚ್ಚಾಣಿಕೆ ಘಟಕದಾರರಿಗೆ ಅವರುಗಳು ಉತ್ಪಾದಿಸಿದ ಗುಣಮಟ್ಟದ ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ ನೀಡುವುದು ಈ ಹೊಸ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿ ವಿವಿಧ ರೇಷ್ಮೆ ನೂಲು ಬಿಚ್ಚಾಣಿಕಾ ಯಂತ್ರೋಪಕರಣಗಳಲ್ಲಿ ಉತ್ಪಾದಿಸಬಹುದಾದ ನಿರ್ಧಾರಿತ ಕಚ್ಚಾ ರೇಷ್ಮೆ ಗುಣಮಟ್ಟ (ಗ್ರೇಡ್/ರೆಂಡಿಟ್ಟಾ) ವನ್ನು ಆಧರಿಸಿ ಪ್ರೋತ್ಸಾಹಧನ ಸೌಲಭ್ಯವನ್ನು ನೀಡಲಾಗುವುದು.

**ಪ್ರೋತ್ಸಾಹಧನದ ಪರಿಮಿತಿಗಳು:**

| | ರೇಷ್ಮೆ ನೂಲು ಬಿಚ್ಚಾಣಿಕೆ ಯಂತ್ರೋಪಕರಣ | ಘಟಕದ ಗರಿಷ್ಠ | | ದಿನದ ಉತ್ಪಾದನೆಯ ಗರಿಷ್ಠ | ಪ್ರೋತ್ಸಾಹಧನದ | ಮಾಹೆಯ ಗರಿ |
|---|---|---|---|---|---|---|

ಇಲ್ಲದಿರುವುದು ಖಾತ್ರಿಯಾಗಬೇಕು. ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ಹೀಟ್ ರಿಕವರಿ ಯುನಿಟ್ ಛಾಯಾಚಿತ್ರ(photo) ವನ್ನು ಸಹಾಯಧನದ ಪ್ರಸ್ತಾವನೆಯು ಹೊಂದಿರಬೇಕು.

8. ಕನಿಷ್ಠ ಮುಂದಿನ 05 ವರ್ಷಗಳವರೆಗೆ ಇಲಾಖೆ ನಿಗದಿಪಡಿಸಬಹುದಾದ ನಿಬಂಧನೆಗೆ ಒಳಪಟ್ಟು ನೂಲು ಬಿಚ್ಚಾಣಿಕೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.100/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಬೇಕು.

9. ರೀಲಿಂಗ್ ಘಟಕದಲ್ಲಿ ಬಾಲ ಕಾರ್ಮಿಕರನ್ನು (14 ವರ್ಷ ತುಂಬಿರದ ಮಕ್ಕಳು) ನಿಯೋಜನೆ ಮಾಡಿಕೊಳ್ಳುವುದಿಲ್ಲವೆಂದು, ಒಂದು ವೇಳೆ ಇದನ್ನು ಉಲ್ಲಂಘಿಸಿದಲ್ಲಿ ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986 ರಡಿ ದಂಡನೆಗೆ ಬದ್ಧನಾಗಿರುವುದಾಗಿ ಘೋಷಣೆ ನೀಡಬೇಕು.

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್)/ ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಯ ಅರ್ಹತೆಯ ಬಗ್ಗೆ ಪರಿಶೀಲಿಸುವುದು.
2. ಸರಿಯಿದ್ದಲ್ಲಿ ಅರ್ಜಿಯಲ್ಲಿನ ಮಾಹಿತಿಯನ್ನು ಸ್ಥಳ ಪರಿಶೀಲನೆಯೊಂದಿಗೆ ದೃಢಪಡಿಸಿಕೊಳ್ಳುವುದು ಮತ್ತು ಫಲಾನುಭವಿ ಆಯ್ಕೆಗಾಗಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
3. ಮಂಜೂರಾತಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಅರ್ಜಿದಾರರಿಗೆ ಆಯ್ಕೆ ಪತ್ರ ನೀಡುವುದು.
4. ರೇಷ್ಮೆ ಇಲಾಖೆಯಿಂದ ಅಧಿಕೃತವಾಗಿ ಗುರುತಿಸಿರುವ ಹೀಟ್ ರಿಕವರಿ ಯುನಿಟ್ ಸರಬರಾಜು ಸಂಸ್ಥೆಗೆ ಫಲಾನುಭವಿಯು ತನ್ನ ಪಾಲಿನ ಹಣವನ್ನು ಪಾವತಿಸಿರುವುದರ ದಾಖಲೆ ಪಡೆದು ಹೀಟ್ ರಿಕವರಿ ಯುನಿಟ್ ಸರಬರಾಜುದಾರರಿಗೆ ಕಾರ್ಯಾದೇಶ ನೀಡುವುದು.
5. ಹೀಟ್ ರಿಕವರಿ ಯುನಿಟ್ ಅಳವಡಿಕೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ನಡೆಸುವುದು ಮತ್ತು ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ಹೀಟ್ ರಿಕವರಿ ಯುನಿಟ್ನ ಛಾಯಾಚಿತ್ರ(photo) ದೊಂದಿಗೆ ಪರಿವೀಕ್ಷಣಾ ವರದಿಯಿರುವ ಪ್ರಸ್ತಾವನೆಯನ್ನು ಮಹಜರ್‌ನೊಂದಿಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.

6. ಮೇಲೆ ತಿಳಿಸಿರುವಂತೆ ಫಲಾನುಭವಿಯು ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿರುವುದರ ಬಗ್ಗೆ ದೃಢಪಡಿಸಿಕೊಂಡು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮತ್ತು ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರು ಮಾಡಲು ವಿತ್ತೀಯ ಪ್ರತ್ಯಾಧಿಕಾರ ನೀಡಿರುವಂತೆ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದು.

7. ಮಂಜೂರಾದ ಸಹಾಯಧನವನ್ನು ಸರಬರಾಜು ಸಂಸ್ಥೆಯ ಬ್ಯಾಂಕ್ ಖಾತೆಗೆ ನೇರವಾಗಿ K-2/DBT ಮುಖಾಂತರ ಜಮೆ ಮಾಡುವುದು.

8. ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಿತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು.

**ಸ್ಥಳ ಪರಿಶೀಲನೆ ಸಮಯದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಮತ್ತು ದೃಢಪಡಿಸಿಕೊಳ್ಳಬೇಕಾದ ಅಂಶಗಳು:**

| | | | | | | |
|---|---|---|---|---|---|---|
| | ಬೇಸಿನ್ | 10 ಬೇಸಿ | ≥ 'ಬಿ' ಗ್ರೇಡ್ | 1.0 / ಬೇಸಿ | 100.00 | 250 |
| | ಸ್ವಯಂಚಾಲಿತ ರೇಷ್ಮೆ ನೂಲು ಬಿಚ್ಚಾಣಿಕೆ ಘಟಕ (ಎಆರ್‌ಎಂ) (ಪ್ರಾರಂಭಿಕ ಎರಡು(02) ವರ್ಷಗಳಿಗೆ ಸೀಮಿತಗೊಳಿಸಿದೆ) | 400 ಕೊನೆ | ≥ 2 'ಎ' ಗ್ರೇಡ್ | 56 ಕೆ.ಜಿ. | 150.00 | 1400 |
| | | 200 ಕೊನೆ | ≥ 2 'ಎ' ಗ್ರೇಡ್ | 28 ಕೆ.ಜಿ. | 150.00 | 700 |

**ಕಾರ್ಯಕ್ರಮದ ಅರ್ಹತೆ/ಫಲಾನುಭವಿಯು ಅನುಸರಿಸಬೇಕಾದ ಮಾನದಂಡಗಳು:**

1. ರೇಷ್ಮೆ ಇಲಾಖೆಯಿಂದ ರೀಲಿಂಗ್ ಪರವಾನಗಿ ಪಡೆದ ರಾಜ್ಯದ ರೇಷ್ಮೆ ನೂಲು ಬಿಚ್ಚಾಣಿಕೆದಾರರಾಗಿರಬೇಕು.
2. ಪ್ರತಿ ರೀಲರ್‌ಗೆ ಸ್ಥಾಪಿತ ಘಟಕದ ಗರಿಷ್ಠ ಮಿತಿ (ಮೇಲೆ ತಿಳಿಸಿರುವಂತೆ) ಯಂತೆ ದಿನದ 08 ಗಂಟೆಗಳ ಉತ್ಪಾದನೆಯ ಗರಿಷ್ಠ ಪ್ರಮಾಣಕ್ಕೆ ಮತ್ತು ಮಾಹೆಯಲ್ಲಿ 25 ದಿನಗಳ ಉತ್ಪಾದನಾ ಸಾಮರ್ಥ್ಯಕ್ಕೆ ಮಿತಿಗೊಳಿಸಿ ಪ್ರೋತ್ಸಾಹಧನದ ಸೌಲಭ್ಯವನ್ನು ನೀಡಲಾಗುವುದು.
3. ರಾಜ್ಯದ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡು ಖರೀದಿಸಿರುವ ಬಗ್ಗೆ ಸಂಬಂಧಪಟ್ಟ ಮಾರುಕಟ್ಟೆ ಅಧಿಕಾರಿಗಳಿಂದ ದೃಢೀಕರಣ ಪಡೆದಿರಬೇಕು.
4. ಉತ್ಪಾದಿಸಿದ ಕಚ್ಚಾ ರೇಷ್ಮೆಯನ್ನು ರಾಜ್ಯದ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ವಹಿವಾಟು ಮಾಡಿರುವ ಬಗ್ಗೆ ಸಂಬಂಧಪಟ್ಟ ರೇಷ್ಮೆ ವಿನಿಮಯ ಕೇಂದ್ರದ ಅಧಿಕಾರಿಗಳಿಂದ ನಮೂನೆ 17-ಜಿ ನಲ್ಲಿ ಪಡೆದ ವಹಿವಾಟು ದಾಖಲಾತಿಯನ್ನು ಸಲ್ಲಿಸಬೇಕು.
5. ಚರಕಾ, ಫಿಲೇಚರ್/ ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ಮತ್ತು ಸುಧಾರಿತ ಕಾಟೇಜ್ ಬೇಸಿನ್ ಘಟಕಗಳಲ್ಲಿ ಉತ್ಪಾಸಿದ ರೇಷ್ಮೆಯಾದಲ್ಲಿ ಅದರ ಗುಣಮಟ್ಟವು ರೆಂಡಿಟ್ಟಾ ಆಧರಿಸಿರುತ್ತದೆ. ಆದರೆ, ಮಲ್ಟಿಎಂಡ್ ಬೇಸಿನ್ ಮತ್ತು ಸ್ವಯಂಚಾಲಿತ ರೇಷ್ಮೆ ನೂಲು ಬಿಚ್ಚಾಣಿಕೆ (ಎಆರ್‌ಎಂ) ಘಟಕ ಗಳಲ್ಲಿ ಉತ್ಪಾದಿಸಿದ ಕಚ್ಚಾ ರೇಷ್ಮೆಗೆ ಕೇಂದ್ರ ರೇಷ್ಮೆ ಮಂಡಳಿಯ ರೇಷ್ಮೆ ಪರೀಕ್ಷಾ ಕೇಂದ್ರದ 'ರೇಷ್ಮೆ ಗ್ರೇಡ್ ಪ್ರಮಾಣ ಪತ್ರ' ಪಡೆಯುವುದು ಕಡ್ಡಾಯ.
6. ಒಂದು ಕ್ಯಾಲೆಂಡರ್ ಮಾಹೆಯಲ್ಲಿ ಉತ್ಪಾಸಿದ ಕಚ್ಚಾ ರೇಷ್ಮೆಯನ್ನು ಮುಂದಿನ 02 ತಿಂಗಳೊಳಗಾಗಿ ವಹಿವಾಟು ಮಾಡಿರಬೇಕು ಹಾಗೂ ತದನಂತರದ 01 ಮಾಹೆಯೊಳಗೆ ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್)/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಚೇರಿಗೆ ಪ್ರೋತ್ಸಾಹಧನಕ್ಕಾಗಿ ಸಂಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸಿರಬೇಕು.

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್)/ ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಪ್ರಸ್ತಾವನೆಯನ್ನು ಪ್ರೋತ್ಸಾಹಧನದ ಅರ್ಹತೆಯ ಬಗ್ಗೆ ಪರಿಶೀಲಿಸುವುದು.
2. ಮೇಲೆ ತಿಳಿಸಿರುವಂತೆ ಫಲಾನುಭವಿಯು ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿರುವುದರ ಬಗ್ಗೆ ದೃಢಪಡಿಸಿಕೊಂಡು ಪ್ರಸ್ತಾವನೆಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಪ್ರೋತ್ಸಾಹಧನ ಮಂಜೂರು ಮಾಡಲು ವಿತ್ತೀಯ ಪ್ರತ್ಯಾಧಿಕಾರ ನೀಡಿರುವಂತೆ ಮಂಜೂರಾತಿ ನೀಡುವುದು/ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದು.
3. ಮಂಜೂರಾದ ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ K-2/DBT ಮುಖಾಂತರ ಜಮೆ ಮಾಡುವುದು.

| | | ಮಿತಿ | | ಮಿತಿ (ಕೆ.ಜಿ.) | ದರ (ಪ್ರತಿ ಕೆ.ಜಿ. ರೇಷ್ಮೆಗೆ) | ಷ್ಮ ಮಿತಿ (ಕೆ.ಜಿ.) |
|---|---|---|---|---|---|---|
| | ಚರಕಾ | 04 ಚರಕಾ | | 1.2 / ಚರಕಾ | 50.00 | 120 |
| | ಫಿಲೇಚರ್/ ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ | 3 ಟೇಬಲ್/ 6 ಬೇಸಿನ್ | | 1.0 / ಬೇಸಿನ್ | 75.00 | 150 |
| | ಸುಧಾರಿತ ಕಾಟೇಜ್ ಬೇಸಿನ್ | 36 ಕೊನೆ | | 1.0 / ಬೇಸಿನ್ | 75.00 | 150 |
| | | 48 ಕೊನೆ | | | 75.00 | 180 |
| | ಮಲ್ಟಿಎಂಡ್ | 6 ಬೇಸಿ | ≥ 'ಬಿ' ಗ್ರೇಡ್ | 1.0 / ಬೇಸಿನ್ | 100.00 | 150 |

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

# ಗೂಡಿನ ನಂತರದ ಚಟುವಟಿಕೆ ಮಾರ್ಗಸೂಚಿ

## 2024-25

# ರೇಷ್ಮೆ ಅಭಿವೃದ್ಧಿ ಯೋಜನೆ

## ಲೆಕ್ಕ ಶೀರ್ಷಿಕೆ :

## 2851-00-107-1-35(422)(423)

# ಗೂಡಿನ ನಂತರದ ಚಟುವಟಿಕೆ ಕಾರ್ಯಕ್ರಮಗಳು

## ಕಾರ್ಯಕ್ರಮ : 1 - ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನ

**ಕಾರ್ಯಕ್ರಮದ ಉದ್ದೇಶ:**

ರೀಲಿಂಗ್ ಶೆಡ್ ನಿರ್ಮಾಣಕ್ಕೆ ತಗಲುವ ವೆಚ್ಚದ ಹೊರೆಯನ್ನು ಭರಿಸುವ ಮೂಲಕ ರೇಷ್ಮೆ ನೂಲು ಬಿಚ್ಚಾಣಿಕೆದಾರರ ರೀಲಿಂಗ್ ಪರಿಸ್ಥಿತಿಯಲ್ಲಿ ಸುಧಾರಣೆ ತರುವುದು.

ರೇಷ್ಮೆ ನೂಲು ಬಿಚ್ಚಾಣಿಕೆಯನ್ನು ಸೂಕ್ತ ವಾತಾವರಣದಲ್ಲಿ ಕೈಗೊಳ್ಳಲು ಅನುಕೂಲವಾಗುವಂತೆ ಇಲಾಖೆಯು ರೂಪಿಸಿರುವ 'ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನ' ನೀಡುವ ಕಾರ್ಯಕ್ರಮ ಇದಾಗಿರುತ್ತದೆ. ಇದರಿಂದ ರೀಲರ್‌ಗಳಿಗೆ ರೀಲಿಂಗ್ ಶೆಡ್ ನಿರ್ಮಾಣದಲ್ಲಿ ತಗಲುವ ವೆಚ್ಚವನ್ನು ತಗ್ಗಿಸುವುದಕ್ಕೆ ಸಹಕಾರಿಯಾಗುವುದಲ್ಲದೆ, ರೀಲರ್‌ಗಳಿಗೆ ಮೂಲಭೂತ ಸೌಕರ್ಯಗಳಾದ ನೀರು ಮತ್ತು ವಿದ್ಯುತ್ ಸೌಕರ್ಯ ಕಲ್ಪಿಸಿಕೊಳ್ಳುವ ಮೂಲಕ ರೀಲಿಂಗ್ ಪರಿಸ್ಥಿತಿಯಲ್ಲಿ ಸುಧಾರಣೆ ತರಬಹುದಾಗಿರುತ್ತದೆ. ಅದರಂತೆ, ಕಾಟೇಜ್ ಬೇಸಿನ್ ಮತ್ತು ಮಲ್ಟಿ ಎಂಡ್ ರೀಲಿಂಗ್ ಯಂತ್ರೋಪಕರಣಗಳನ್ನು ಸ್ಥಾಪಿಸಿರುವ ರಾಜ್ಯದ ರೀಲರ್‌ಗ ಘಟಕ ದರದ ಶೇಕಡಾ 90ರ ಸಹಾಯಧನದ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

**ರೀಲಿಂಗ್ ಶೆಡ್ ನಿರ್ಮಾಣದ ಮತ್ತು ಸಹಾಯಧನದ ಪರಿಮಿತಿಗಳು:**

| ಕ್ರ. ಸಂ. | ರೀಲಿಂಗ್ ಘಟಕ | ರೀಲಿಂಗ್ ಶೆಡ್ (ಚ. ಅಡಿಗಳಿಗೆ ಮಿತಿಗೊಳಿಸಿ) | ಘಟಕ ದರ (ರೂ. ಲಕ್ಷಗಳು) | ಸಹಾಯಧನ - ಘಟಕ ದರದ ಶೇ.90 (ರೂ. ಲಕ್ಷಗಳು) |
|---|---|---|---|---|
| 1 | 10 ಬೇಸಿನ್ ಮಲ್ಟಿಎಂಡ್ ರೀಲಿಂಗ್ ಘಟಕ | 1200 ಚ.ಅಡಿ | 7.200 | 6.480 |
| 2 | 06 ಬೇಸಿನ್ ಮಲ್ಟಿಎಂಡ್ ರೀಲಿಂಗ್ ಘಟಕ | 900 ಚ.ಅಡಿ | 5.400 | 4.860 |
| 3 | 48 ಕೊನೆಗಳ ಸುಧಾರಿತ ಕಾಟೇಜ್ ಬೇಸಿನ್ | 900 ಚ.ಅಡಿ | 5.400 | 4.860 |
| 4 | 36 ಕೊನೆಗಳ ಸುಧಾರಿತ ಕಾಟೇಜ್ ಬೇಸಿನ್ | 900 ಚ.ಅಡಿ | 5.400 | 4.860 |
| 5 | ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ – ಕನಿಷ್ಠ 02 ಟೇಬಲ್ ಇರುವ | 600 ಚ.ಅಡಿ | 3.600 | 3.240 |

**ಕಾರ್ಯಕ್ರಮದ ಅರ್ಹತೆ/ ಅನುಸರಿಸಬೇಕಾದ ಮಾನದಂಡಗಳು:**

1. ಇಲಾಖೆಯಿಂದ ರೀಲಿಂಗ್ ಪರವಾನಗಿ ಪಡೆದ ರಾಜ್ಯದ ರೇಷ್ಮೆ ನೂಲು ಬಿಚ್ಚಾಣಿಕೆದಾರರಾಗಿರಬೇಕು.
2. ಒಂದು ಕುಟುಂಬದ ಪಡಿತರ ಚೀಟಿಯಲ್ಲಿರುವ ಒಬ್ಬ ಸದಸ್ಯರು ಮಾತ್ರ ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ. ಈ ಹಿಂದೆ ಕುಟಂಬದ ಸದಸ್ಯರೊಬ್ಬರಿಗೆ ಈ ಸೌಲಭ್ಯವನ್ನು ಒದಗಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಫಲಾನುಭವಿ ಆಯ್ಕೆಗೆ ಪರಿಗಣಿಸುವಂತಿಲ್ಲ.
3. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2 ಅನುಪಾತದಲ್ಲಿ

ಕಾರ್ಯೈರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು ಪರಿಗಣಿಸುವುದು. ಸಂಭವನೀಯ ಫಲಾನುಭವಿಗಳ ಪಟ್ಟಿಯನ್ನು ಮಂಜೂರಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.

4. ರೀಲಿಂಗ್ ಶೆಡ್ ನಿರ್ಮಿಸಲು ಗುರುತಿಸಿರುವ ನಿವೇಶನ/ಆಸ್ತಿಯು ಅರ್ಜಿದಾರರರ ಹೆಸರಿನಲ್ಲಿ ಇರಬೇಕು ಹಾಗೂ ಸಂಬಂಧಪಟ್ಟಂತೆ ಖಾತೆ ಹೊಂದಿರಬೇಕು. ಒಂದು ವೇಳೆ ಗುರುತಿಸಿರುವ ನಿವೇಶನ/ಆಸ್ತಿಯು ಕುಟುಂಬದ ಪಡಿತರ ಚೀಟಿಯಲ್ಲಿರುವ ಇತರೆ ಸದಸ್ಯರ ಹೆಸರಿನಲ್ಲಿದ್ದಲ್ಲಿ, ಕುಟುಂಬದ ಇತರೆ ಸದಸ್ಯರಿಂದ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಿರಬೇಕು.
5. ನಿರ್ಮಿಸುವ ರೀಲಿಂಗ್ ಶೆಡ್ ವಾಸದ ಮನೆಯಿಂದ ಪ್ರತ್ಯೇಕವಾಗಿರಬೇಕು.
6. ರೀಲಿಂಗ್ ಶೆಡ್ ನಿರ್ಮಾಣಕ್ಕಾಗಿ ಫಲಾನುಭವಿಗೆ ನೀಡುವ ಆಯ್ಕೆ ಪತ್ರವು ಪ್ರಸಕ್ತ ಸಾಲಿಗೆ ಮಾತ್ರವೇ ಸಿಂಧುತ್ವದಲ್ಲಿರುತ್ತದೆ. ಅನುಮೋದಿತ ಫಲಾನುಭವಿಯು ಒಂದು ವೇಳೆ ಪ್ರಸಕ್ತ ಸಾಲಿನಲ್ಲಿ ರೀಲಿಂಗ್‌ಶೆಡ್‌ನಿರ್ಮಾಣಕ್ಕಾಗಿ ಕ್ರಮವಹಿಸದಿದ್ದ ಪಕ್ಷದಲ್ಲಿ ಫಲಾನುಭವಿ ಆಯ್ಕೆಯು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.
7. ರೀಲಿಂಗ್ ಶೆಡ್ ನಿರ್ಮಾಣ ಪೂರ್ಣಗೊಂಡ ನಂತರ ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳೊಂದಿಗೆ ರೀಲಿಂಗ್‌ಶೆಡ್‌ಮತ್ತು ಸದರಿ ಶೆಡ್‌ನಲ್ಲಿ ಹಾಲಿ ಹೊಂದಿರುವ ರೀಲಿಂಗ್ ಯಂತ್ರೋಪಕರಣದ ಛಾಯಾಚಿತ್ರ (photo) ಗಳನ್ನು ಸಹಾಯಧನದ ಪ್ರಸ್ತಾವನೆಯಲ್ಲಿ ಅಡಕವಿರಿಸುವುದು ಕಡ್ಡಾಯ.
8. ಕನಿಷ್ಠ ಮುಂದಿನ 05 ವರ್ಷಗಳವರೆಗೆ ಇಲಾಖೆ ನಿಗದಿಪಡಿಸಬಹುದಾದ ನಿಬಂಧನೆಗೆ ಒಳಪಟ್ಟು ನೂಲು ಬಿಚ್ಚಾಣಿಕೆಯನ್ನು ಮುಂದುವರೆಸಿಕೊಂಡು ಹೋಗುವ ಹಾಗೂ ಉದ್ದೇಶಿತ ರೇಷ್ಮೆ ನೂಲು ಬಿಚ್ಚಾಣಿಕೆ ಚಟುವಟಿಕೆಗೆ ಮಾತ್ರವೇ ನಿರ್ಮಿತ ಶೆಡ್‌ಅನ್ನು ಬಳಸುವ ಬಗ್ಗೆ ರೂ.100/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಬೇಕು.
9. ನಿರ್ಮಿಸಿದ ರೀಲಿಂಗ್ ಶೆಡ್‌ಗೆ ಸರ್ಕಾರದ ವಸತಿ/ಇತರೆ ಯೋಜನೆಯಡಿ ಸಹಾಯಧನ ನೀಡಿರದ ಬಗ್ಗೆ ಸಂಬಂಧಪಟ್ಟ ನಗರ ಸಭೆ/ಗ್ರಾಮ ಪಂಚಾಯತಿ ಅಧಿಕಾರಿಗಳಿಂದ ದೃಢೀಕರಣ ಪಡೆದು ಸಲ್ಲಿಸಬೇಕು.
10. ನಿರ್ಮಿಸಿದ ರೀಲಿಂಗ್ ಶೆಡ್ ಗೋಡೆ ಮೇಲೆ ಫಲಾನುಭವಿ ಹೆಸರು, ಯಾವ ಯೋಜನೆಯಡಿ ಮತ್ತು ಸಾಲಿನಲ್ಲಿ ನಿರ್ಮಿಸಿರುವ ಕಟ್ಟಡ ಹಾಗೂ ಸಹಾಯಧನದ ಮೊತ್ತವನ್ನು ಸ್ಪಷ್ಟವಾಗಿ ಬರೆಸಬೇಕು. **ಇದು ಕಡ್ಡಾಯ**.
11. ರೀಲಿಂಗ್ ಘಟಕದಲ್ಲಿ ಬಾಲ ಕಾರ್ಮಿಕರನ್ನು (14 ವರ್ಷ ತುಂಬಿರದ ಮಕ್ಕಳು) ನಿಯೋಜನೆ ಮಾಡಿಕೊಂಡಿರುವುದಿಲ್ಲವೆಂದು, ಒಂದು ವೇಳೆ ಉಲ್ಲಂಘಿಸಿದ ಬಗ್ಗೆ ತಪ್ಪಿತಸ್ಥನೆಂದು ಮತ್ತು ಅಪರಾಧಿಯೆಂದು ನಿರ್ಣೀತನಾದಲ್ಲಿ ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986 ರಡಿ ದಂಡನೆಗೆ ಬದ್ಧನಾಗಿರುವುದಾಗಿ ಘೋಷಣೆ ನೀಡಬೇಕು.

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್)/ ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಯ ಅರ್ಹತೆಯ ಬಗ್ಗೆ ಪರಿಶೀಲಿಸುವುದು.
2. ಸರಿಯಿದ್ದಲ್ಲಿ ಅರ್ಜಿಯಲ್ಲಿನ ಮಾಹಿತಿಯನ್ನು ಸ್ಥಳ ಪರಿಶೀಲನೆಯೊಂದಿಗೆ ದೃಢಪಡಿಸಿಕೊಳ್ಳುವುದು ಮತ್ತು ಫಲಾನುಭವಿ ಆಯ್ಕೆಗಾಗಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
3. ಮಂಜೂರಾತಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಅರ್ಜಿದಾರರಿಗೆ ಕಾರ್ಯಾದೇಶ ನೀಡುವುದು.
4. ಫಲಾನುಭವಿಯು ರೀಲಿಂಗ್‌ಶೆಡ್‌ನಿರ್ಮಾಣದ ಕಾರ್ಯವನ್ನು ಸಂಪೂರ್ಣವಾಗಿ ಪೂರೈಸಿದ ನಂತರದ ಮಹಜರ್‌ನಡೆಸುವುದು ಮತ್ತು ಜಿಪಿಎಸ್ ಅಳವಡಿಕೆಯೊಂದಿಗೆ

ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳೊಂದಿಗೆ ರೀಲಿಂಗ್‌ಶೆಡ್‌ಮತ್ತು ಸದರಿ ಶೆಡ್‌ನಲ್ಲಿ ಹಾಲಿ ಹೊಂದಿರುವ ರೀಲಿಂಗ್ ಯಂತ್ರೋಪಕರಣದ ಛಾಯಾಚಿತ್ರ (photo) ಗಳನ್ನು ತೆಗೆದುಕೊಳ್ಳುವುದು.

5. ಮೇಲೆ ತಿಳಿಸಿರುವಂತೆ ಫಲಾನುಭವಿಯು ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿರುವುದರ ಬಗ್ಗೆ ದೃಢಪಡಿಸಿಕೊಂಡು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮತ್ತು ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರು ಮಾಡಲು ವಿತ್ತೀಯ ಪ್ರತ್ಯಾಧಿಕಾರ ನೀಡಿರುವಂತೆ ಮಂಜೂರಾತಿ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು.

6. ಮಂಜೂರಾದ ಸಹಾಯಧನವನ್ನು ಫಲಾನುಭವಿಯ ಬ್ಯಾಂಕ್‌ಖಾತೆಗೆ ನೇರವಾಗಿ K-2/DBT ಮುಖಾಂತರ ಜಮೆ ಮಾಡುವುದು.

ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಿತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು.

**ಸ್ಥಳ ಪರಿಶೀಲನೆ/ಮಹಜರ್ ಸಮಯದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಮತ್ತು ದೃಢಪಡಿಸಿಕೊಳ್ಳಬೇಕಾದ ಅಂಶಗಳು:**

1. ಕುಟುಂಬದ ಇತರೆ ಸದಸ್ಯರಾರು ಕಾರ್ಯಕ್ರಮದ ಸೌಲಭ್ಯವನ್ನು ಪಡೆದಿರಬಾರದು.
2. ರೀಲಿಂಗ್ ಶೆಡ್ ನಿರ್ಮಿಸಿರುವ ನಿವೇಶನ/ಆಸ್ತಿಯ ವಾರಸುದಾರರ ಬಗ್ಗೆ ದೃಢಪಡಿಸಿಕೊಳ್ಳುವುದು.
3. ನಿರ್ಮಿಸಿರುವ ರೀಲಿಂಗ್ ಶೆಡ್ ವಾಸದ ಮನೆಯಿಂದ ಪ್ರತ್ಯೇಕವಾಗಿರುವ ಹಾಗೂ ನಕ್ಷೆಗೆ ಅನುಗುಣವಾಗಿ ನಿರ್ಮಿತವಾಗಿರುವ ಬಗ್ಗೆ ದೃಢಪಡಿಸಿಕೊಳ್ಳಬೇಕು.
4. ನಿರ್ಮಿಸಿದ ರೀಲಿಂಗ್ ಶೆಡ್‌ಗೆ ಸರ್ಕಾರದ ವಸತಿ/ಇತರೆ ಯೋಜನೆಯಡಿ ಸಹಾಯಧನ ನೀಡಿರದ ಬಗ್ಗೆ ಸಂಬಂಧಪಟ್ಟ ನಗರ ಸಭೆ/ಗ್ರಾಮ ಪಂಚಾಯತಿ ಅಧಿಕಾರಿಗಳಿಂದ ದೃಢೀಕರಣ ಪಡೆದಿರುವುದನ್ನು ಪರಿಶೀಲಿಸುವುದು.
5. ಫಲಾನುಭವಿಯು ನಿರ್ಮಿಸಿರುವ ರೀಲಿಂಗ್ ಶೆಡ್‌ನಲ್ಲಿ ಸ್ಥಾಪಿಸಿರುವ ರೀಲಿಂಗ್ ಯಂತ್ರೋಪಕರಣದ/ ಘಟಕದ ಮಾಲೀಕರಾಗಿರುವ ಹಾಗೂ ಸದರಿ ರೀಲಿಂಗ್ ಯಂತ್ರೋಪಕರಣದ ಮಾದರಿ ಯಾವುದೆಂದು (ಮಲ್ಟಿಎಂಡ್/ಸುಧಾರಿತ ಕಾಟೇಜ್ ಬೇಸಿನ್/ಇಟಾಲಿಯನ್ ಕಾಟೇಜ್ ಬೇಸಿನ್) ದೃಢಪಡಿಸಿಕೊಳ್ಳುವುದು.
6. ಒಂದು ವೇಳೆ ಅರ್ಜಿದಾರರು ಯಂತ್ರೋಪಕರಣದ ಮಾಲೀಕರಲ್ಲದೆ, ಬಾಡಿಗೆ/ಲೀಸ್ ಮೇರೆಗೆ ರೀಲಿಂಗ್ ಯಂತ್ರೋಪಕರಣವನ್ನು ಸ್ಥಳಾಂತರಿಸಿಕೊಂಡು ನಿರ್ಮಿಸಿರುವ ಶೆಡ್‌ನಲ್ಲಿ ರೀಲಿಂಗ್ ನಡೆಸುತ್ತಿರುವುದು ದೃಢಪಟ್ಟಲ್ಲಿ ಅಂತಹ ಪ್ರಕರಣಗಳನ್ನು ಕಾರ್ಯಕ್ರಮದ ಸೌಲಭ್ಯಕ್ಕೆ ಪರಿಗಣಿಸಬಾರದು.
7. ನಿರ್ಮಿಸಿದ ರೀಲಿಂಗ್ ಶೆಡ್ ಗೋಡೆ ಮೇಲೆ ಫಲಾನುಭವಿಯು ತನ್ನ ಹೆಸರು, ಯಾವ ಯೋಜನೆಯಡಿ ಮತ್ತು ಸಾಲಿನಲ್ಲಿ ನಿರ್ಮಿಸಿರುವ ಕಟ್ಟಡ ಹಾಗೂ ಸಹಾಯಧನದ ಮೊತ್ತವನ್ನು ಸ್ಪಷ್ಟವಾಗಿ ಬರೆಸಿರಬೇಕು.

ಮಾದರಿ

| |
|---|
| 2023-24ನೇ ಸಾಲಿನ ________________ ಯೋಜನೆ<br>________________ ಕಾರ್ಯಕ್ರಮದಡಿ ನಿರ್ಮಿಸಿರುವ ರೀಲಿಂಗ್‌ಶೆಡ್<br>ಫಲಾನುಭವಿ ಹೆಸರು : ________________<br>ರೀಲಿಂಗ್‌ಶೆಡ್‌ವಿಸ್ತೀರ್ಣ : __________ ಚದರ ಅಡಿಗಳು<br>ಘಟಕ ದರ : ರೂ. __________ ಲಕ್ಷಗಳು; ಸಹಾಯಧನದ ಮೊತ್ತ ರೂ. __________ ಲಕ್ಷಗಳು |

## ಕಾರ್ಯಕ್ರಮ: 1 - ರೀಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನ

## ಕಾರ್ಯಕ್ರಮ : 2 – 6 ಬೇಸಿನ್ ಮಲ್ಟಿ ಎಂಡ್ ರೀಲಿಂಗ್ ಘಟಕ ಸ್ಥಾಪನೆಗೆ ಸಹಾಯಧನ

**ಕಾರ್ಯಕ್ರಮದ ಉದ್ದೇಶ:**

ದೇಶದಲ್ಲಿ ಉತ್ಪಾದಿಸುವ ಗುಣಮಟ್ಟದ ಮಿಶ್ರತಳಿ ಮತ್ತು ದ್ವಿತಳಿ ರೇಷ್ಮೆ ಗೂಡಿನ ಬಳಕೆಯೊಂದಿಗೆ ಗುಣಮಟ್ಟದ ಕಚ್ಚಾ ರೇಷ್ಮೆಯ ಉತ್ಪಾದನೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮಲ್ಟಿಎಂಡ್ ರೀಲಿಂಗ್ ಘಟಕಗಳ ಸ್ಥಾಪನೆಯನ್ನು ಉತ್ತೇಜಿಸುವುದು.

ಗುಣಮಟ್ಟದ ದೇಶೀಯ ಮಿಶ್ರತಳಿ ಮತ್ತು ದ್ವಿತಳಿ ರೇಷ್ಮೆ ಗೂಡಿನ ಬಳಕೆಯೊಂದಿಗೆ ಅಂತರರಾಷ್ಟ್ರೀಯ ಗುಣಮಟ್ಟದ ದರ್ಜೆ(ಎ ದರ್ಜೆ) ಕಚ್ಚಾ ರೇಷ್ಮೆಯ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಹಾಗೂ ರೀಲಿಂಗ್ ಉದ್ಯಮದಲ್ಲಿ ಸುಧಾರಣೆ ತರಲು ಮಲ್ಟಿ ಎಂಡ್ ರೀಲಿಂಗ್ ಘಟಕ ಸ್ಥಾಪನೆಯನ್ನು ಉತ್ತೇಜಿಸುವ ಕಾರ್ಯಕ್ರಮ ಇದಾಗಿರುತ್ತದೆ. ಇಂತಹ ಘಟಕಗಳ ಸ್ಥಾಪನೆಯನ್ನು ಇಚ್ಛಿಸುವ ರಾಜ್ಯದ ರೇಷ್ಮೆ ನೂಲು ಬಿಚ್ಚಾಣಿಕೆದಾರರು/ಹೊಸದಾಗಿ ರೀಲಿಂಗ್ ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುವವರು ಘಟಕ ದರದ ಶೇಕಡಾ 90ರ ಸರ್ಕಾರದ ಸಹಾಯಧನದ ಸೌಲಭ್ಯದೊಂದಿಗೆ ಯಂತ್ರೋಪಕರಣಗಳನ್ನು ಖರೀದಿಸುವ ಮೂಲಕ ಘಟಕವನ್ನು ಸ್ಥಾಪಿಸಬಹುದಾಗಿರುತ್ತದೆ.

**ಮಲ್ಟಿಎಂಡ್ ರೀಲಿಂಗ್ ಯಂತ್ರೋಪಕರಣದ ಸಹಾಯಧನದ ಪರಿಮಿತಿಗಳು:**

| ಕ್ರ. ಸಂ. | ಮಲ್ಟಿಎಂಡ್ ರೀಲಿಂಗ್ ಘಟಕ – ಬೇಸಿನ್ | ಯಂತ್ರೋಪಕರಣದ ಘಟಕ ದರ (ರೂ. ಲಕ್ಷಗಳು) | ಫಲಾನುಭವಿ ಪಾಲು ಘಟಕ ದರದ ಶೇ.10 (ರೂ. | ಸಹಾಯಧನ ಘಟಕ ದರದ ಶೇ.90 (ರೂ. ಲಕ್ಷಗಳು) |
|---|---|---|---|---|
| 1 | 06 ಬೇಸಿನ್ | 11.885 | 1.189 | 10.6965 |

**ಕಾರ್ಯಕ್ರಮದ ಅರ್ಹತೆ/ ಅನುಸರಿಸಬೇಕಾದ ಮಾನದಂಡಗಳು:**

1. ಅರ್ಜಿದಾರರು (ರೇಷ್ಮೆ ನೂಲು ಬಿಚ್ಚಾಣಿಕೆದಾರರು/ಉದ್ಯಿಮೆದಾರರು) ಘಟಕ ಸ್ಥಾಪನೆಯನ್ನು ತಮ್ಮ ಸ್ವಂತ ನಿವೇಶನ/ಸ್ವತ್ತಿನಲ್ಲಿ ನಿರ್ಮಿಸಿರುವ ಶೆಡ್ ಅಥವಾ ಕನಿಷ್ಠ 10 ವರ್ಷಗಳಿಗೆ ಬಾಡಿಗೆ/ಗುತ್ತಿಗೆ ಒಪ್ಪಂದದ ಮೇರೆಗೆ ಪಡೆದ ನಿವೇಶನ/ಶೆಡ್‌ನಲ್ಲಿ ಘಟಕ ಸ್ಥಾಪನೆಯನ್ನು ಕೈಗೊಳ್ಳಬಹುದಾಗಿದ್ದು, ಸಂಬಂಧಪಟ್ಟ ದಾಖಲಾತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.
2. ಒಂದು ಕುಟುಂಬದ ಪಡಿತರ ಚೀಟಿಯಲ್ಲಿರುವ ಒಬ್ಬ ಸದಸ್ಯರು ಮಾತ್ರ ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ. ಈ ಹಿಂದೆ ಕುಟುಂಬದ ಸದಸ್ಯರೊಬ್ಬರಿಗೆ ಈ ಸೌಲಭ್ಯವನ್ನು ಒದಗಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಫಲಾನುಭವಿ ಆಯ್ಕೆಗೆ ಪರಿಗಣಿಸುವಂತಿಲ್ಲ.
3. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2

ಅನುಪಾತದಲ್ಲಿ ಕಾಯ್ದಿರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು ಪರಿಗಣಿಸುವುದು. ಸಂಭವನೀಯ ಫಲಾನುಭವಿಗಳ ಪಟ್ಟಿಯನ್ನು ಮಂಜೂರಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.

4. ಫಲಾನುಭವಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ 03 ತಿಂಗಳುಗಳಲ್ಲಿ ಘಟಕ ಸ್ಥಾಪನೆಗಾಗಿ ಕ್ರಮವಹಿಸಬೇಕು. ಇಲ್ಲದಿದ್ದ ಪಕ್ಷದಲ್ಲಿ ಫಲಾನುಭವಿ ಆಯ್ಕೆಯು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.

5. ಆಯ್ಕೆ ಪತ್ರ ಸ್ವೀಕರಿಸಿದ ಫಲಾನುಭವಿಯು ಯಂತ್ರೋಪಕರಣಗಳನ್ನು ಕೇಂದ್ರ ರೇಷ್ಮೆ ಮಂಡಳಿಯು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ ಸಂಸ್ಥೆಗೆ ತನ್ನ ಪಾಲಿನ **ಘಟಕ ದರದ ಶೇ.10ರ** ಹಣವನ್ನು ಪಾವತಿಸಿ ಸರಬರಾಜು ಪಡೆಯತಕ್ಕದ್ದು. ಯಂತ್ರೋಪಕರಣ ಸರಬರಾಜು ಖಾತ್ರಿಯಾದ ನಂತರವೇ ಸರ್ಕಾರದ ಸಹಾಯಧನವನ್ನು ಯಂತ್ರೋಪಕರಣ ತಯಾರಕ ಸಂಸ್ಥೆಗೆ ಮಂಜೂರು ಮಾಡಲಾಗುವುದು. ಇದಕ್ಕಾಗಿ ಫಲಾನುಭವಿಯು 'ಒಪ್ಪಿಗೆ ಪತ್ರ' ನೀಡಬೇಕು.

6. ಯಂತ್ರೋಪಕರಣಗಳ ಸಂಪೂರ್ಣ(ಅನುಬಂಧ) ಸ್ಥಾಪನೆಯ ಬಗ್ಗೆ ರಾಜ್ಯ/ಕೇಂದ್ರ ರೇಷ್ಮೆ ಮಂಡಳಿಯ ಅಧಿಕಾರಿಗಳಿಂದ/ವಿಜ್ಞಾನಿಗಳಿಂದ ಪರಿವೀಕ್ಷಣೆ ಕೈಗೊಳ್ಳಲಾಗುವುದು. ಪರಿವೀಕ್ಷಣಾ ವರದಿಯಲ್ಲಿ ಯಂತ್ರೋಪಕರಣಗಳ ಸಂಪೂರ್ಣ ಸ್ಥಾಪನೆಯ ಬಗ್ಗೆ ದೃಢಪಟ್ಟ ನಂತರವೇ ರೀಲಿಂಗ್ ರಹದಾರಿ ನೀಡಲಾಗುವುದು ಮತ್ತು ಫಲಾನುಭವಿಯನ್ನು ಮುಂದಿನ ಇತರೆ ಸೌಲಭ್ಯಗಳಿಗೆ ಪರಿಗಣಿಸಲಾಗುವುದು.

7. ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ರೀಲಿಂಗ್ ಯಂತ್ರೋಪಕರಣದ ಛಾಯಾಚಿತ್ರ(photo)ಗಳನ್ನು ಸಹಾಯಧನದ ಪ್ರಸ್ತಾವನೆಯು ಹೊಂದಿರಬೇಕು.

8. ಕನಿಷ್ಠ ಮುಂದಿನ 05 ವರ್ಷಗಳವರೆಗೆ ಇಲಾಖೆ ನಿಗದಿಪಡಿಸಬಹುದಾದ ನಿಬಂಧನೆಗೆ ಒಳಪಟ್ಟು ನೂಲು ಬಿಚ್ಚಾಣಿಕೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.100/-ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಬೇಕು.

9. ರೀಲಿಂಗ್ ಘಟಕದಲ್ಲಿ ಬಾಲ ಕಾರ್ಮಿಕರನ್ನು(14 ವರ್ಷ ತುಂಬಿರದ ಮಕ್ಕಳು) ನಿಯೋಜನೆ ಮಾಡಿಕೊಳ್ಳುವುದಿಲ್ಲವೆಂದು, ಒಂದು ವೇಳೆ ಇದನ್ನು ಉಲ್ಲಂಘಿಸಿದಲ್ಲಿ ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986ರಡಿ ದಂಡನೆಗೆ ಬದ್ಧನಾಗಿರುವುದಾಗಿ ಘೋಷಣೆ ನೀಡಬೇಕು.

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್)/ ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಯ ಅರ್ಹತೆಯ ಬಗ್ಗೆ ಪರಿಶೀಲಿಸುವುದು.

2. ಸರಿಯಿದ್ದಲ್ಲಿ ಅರ್ಜಿಯಲ್ಲಿನ ಮಾಹಿತಿಯನ್ನು ಸ್ಥಳ ಪರಿಶೀಲನೆಯೊಂದಿಗೆ ದೃಢಪಡಿಸಿಕೊಳ್ಳುವುದು ಮತ್ತು ಫಲಾನುಭವಿ ಆಯ್ಕೆಗಾಗಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.

3. ಮಂಜೂರಾತಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಅರ್ಜಿದಾರರಿಗೆ ಕಾರ್ಯಾದೇಶ ನೀಡುವುದು.

4. ಕೇಂದ್ರ ರೇಷ್ಮೆ ಮಂಡಳಿಯವರು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ ಸಂಸ್ಥೆಗೆ ಫಲಾನುಭವಿಯು ತನ್ನ ಪಾಲಿನ ಹಣವನ್ನು ಪಾವತಿಸಿರುವುದರ ದಾಖಲೆ ಪಡೆದು ಯಂತ್ರೋಪಕರಣ ಸರಬರಾಜುದಾರರಿಗೆ ಕಾರ್ಯಾದೇಶ ನೀಡುವುದು.

5. ಯಂತ್ರೋಪಕರಣಗಳ ಸಂಪೂರ್ಣ ಸ್ಥಾಪನೆಯ ಬಗ್ಗೆ ರಾಜ್ಯ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಅಧಿಕಾರಿಗಳಿಂದ/ವಿಜ್ಞಾನಿಗಳಿಂದ ಪರಿವೀಕ್ಷಣೆ ನಡೆಸುವುದು ಮತ್ತು ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ರೀಲಿಂಗ್ ಯಂತ್ರೋಪಕರಣದ ಛಾಯಾಚಿತ್ರ(photo)ಗಳೊಂದಿಗೆ ಪರಿವೀಕ್ಷಣಾ ವರದಿಯಿರುವ ಪ್ರಸ್ತಾವನೆಯನ್ನು ಮಹಜರ್‌ನೊಂದಿಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.

6. ಮೇಲೆ ತಿಳಿಸಿರುವಂತೆ ಫಲಾನುಭವಿಯು ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿರುವುದರ ಬಗ್ಗೆ ದೃಢಪಡಿಸಿಕೊಂಡು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮತ್ತು ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರು ಮಾಡಲು ವಿತ್ತೀಯ ಪ್ರತ್ಯಾಧಿಕಾರ ನೀಡಿರುವಂತೆ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದು.

7. ಮಂಜೂರಾದ ಸಹಾಯಧನವನ್ನು ಸರಬರಾಜು ಸಂಸ್ಥೆಯ ಬ್ಯಾಂಕ್‌ಖಾತೆಗೆ ನೇರವಾಗಿ K-2/DBT ಮುಖಾಂತರ ಜಮೆ ಮಾಡುವುದು.

8. ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಿತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು

**ಸ್ಥಳ ಪರಿಶೀಲನೆ ಸಮಯದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಮತ್ತು ದೃಢಪಡಿಸಿಕೊಳ್ಳಬೇಕಾದ ಅಂಶಗಳು:**

1. ಫಲಾನುಭವಿಯು ನಿರ್ದಿಷ್ಟ ಗುಣಮಟ್ಟದ ಮಲ್ಟಿಎಂಡ್ ರೀಲಿಂಗ್ ಬೇಸಿನ್ ರೀಲಿಂಗ್ ಯಂತ್ರೋಪಕರಣವನ್ನು ಕೇಂದ್ರ ರೇಷ್ಮೆ ಮಂಡಳಿಯವರು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ/ಸರಬರಾಜು ಸಂಸ್ಥೆಯಿಂದ ಸರಬರಾಜು ಪಡೆದು ಸ್ಥಾಪಿಸಿರಬೇಕು.
2. ಕುಟುಂಬದ ಇತರೆ ಸದಸ್ಯರಾರು ಕಾರ್ಯಕ್ರಮದ ಸವಲತ್ತನ್ನು ಪಡೆದಿರಬಾರದು.
3. ಫಲಾನುಭವಿಯು ಯಂತ್ರೋಪಕರಣದ ಘಟಕ ದರದ ತನ್ನ ಪಾಲಿನ ಹಣವನ್ನು(**ಘಟಕ ದರದ ಶೇ.10**) ಯಂತ್ರೋಪಕರಣ ತಯಾರಕರಿಗೆ/ಸರಬರಾಜುದಾರರಿಗೆ ಪಾವತಿಸಿರುವ ರಶೀದಿ ಮತ್ತು ಯಂತ್ರೋಪಕರಣದ ಸರಬರಾಜಿನ ಬಗ್ಗೆ ದಾಖಲಾತಿಗಳನ್ನು(ಟ್ಯಾಕ್ಸ್ ಇನ್‌ವಾಯ್ಸ್) ದೃಢಪಡಿಸಿಕೊಳ್ಳಬೇಕು.

## ಕಾರ್ಯಕ್ರಮ : 3 - ಸುಧಾರಿತ ಕಾಟೇಜ್ ಬೇಸಿನ್ ರೀಲಿಂಗ್ ಘಟಕ ಸ್ಥಾಪನೆಗೆ ಸಹಾಯಧನ

**ಕಾರ್ಯಕ್ರಮದ ಉದ್ದೇಶ:**

ಗುಣಮಟ್ಟದ ರೇಷ್ಮೆ ಉತ್ಪಾದನೆ ಮತ್ತು ರೀಲಿಂಗ್ ಚಟುವಟಿಕೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸುಧಾರಿತ ಕಾಟೇಜ್ ಬೇಸಿನ್ ರೀಲಿಂಗ್ ಘಟಕ ಸ್ಥಾಪನೆಗಳನ್ನು ಪ್ರೋತ್ಸಾಹಿಸುವುದು. ಸುಧಾರಿತ ತಾಂತ್ರಿಕತೆಗಳನ್ನು ಅಳವಡಿಸಿರುವ ರೀಲಿಂಗ್ ಯಂತ್ರೋಪಕರಣಗಳ ಸ್ಥಾಪನೆಯ ಮೂಲಕ ಗುಣಮಟ್ಟದ ರೇಷ್ಮೆ ಉತ್ಪಾದನೆಯನ್ನು ಮತ್ತು ರೀಲಿಂಗ್ ಚಟುವಟಿಕೆಯಲ್ಲಿ ಸುಧಾರಣೆ ತರಲು 48 ಮತ್ತು 36 ಕೊನೆಗಳ ಸುಧಾರಿತ ಕಾಟೇಜ್ ಬೇಸಿನ್ ರೀಲಿಂಗ್ ಘಟಕ ಸ್ಥಾಪನೆಯನ್ನು ಉತ್ತೇಜಿಸುವ ಕಾರ್ಯಕ್ರಮ ಇದಾಗಿರುತ್ತದೆ. ಇಂತಹ ಘಟಕಗಳ ಸ್ಥಾಪನೆಯನ್ನು ಇಚ್ಛಿಸುವ ರಾಜ್ಯದ ರೇಷ್ಮೆ ನೂಲು ಬಿಚ್ಚಾಣಿಕೆದಾರರು/ಹೊಸದಾಗಿ ರೀಲಿಂಗ್ ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುವವರು ಶೇಕಡಾ 90ರ ಸರ್ಕಾರದ ಸಹಾಯಧನದ ಸೌಲಭ್ಯದೊಂದಿಗೆ ಯಂತ್ರೋಪಕರಣಗಳನ್ನು ಖರೀದಿಸುವ ಮೂಲಕ ಘಟಕವನ್ನು ಸ್ಥಾಪಿಸಬಹುದಾಗಿರುತ್ತದೆ.

**ಸುಧಾರಿತ ಕಾಟೇಜ್ ಬೇಸಿನ್ ರೀಲಿಂಗ್ ಯಂತ್ರೋಪಕರಣದ ಸಹಾಯಧನದ ಪರಿಮಿತಿಗಳು:**

| ಕ್ರ. ಸಂ. | ಸುಧಾರಿತ ಕಾಟೇಜ್ ಬೇಸಿನ್ ರೀಲಿಂಗ್ – ಕೊನೆಗಳು | ಯಂತ್ರೋಪಕರಣದ ಘಟಕ ದರ (ರೂ. ಲಕ್ಷಗಳು) | ಫಲಾನುಭವಿ ಪಾಲು ಘಟಕ ದರದ ಶೇ.10 (ರೂ. ಲಕ್ಷಗಳು) | ಸಹಾಯಧನ ಘಟಕ ದರದ ಶೇ.90 (ರೂ. ಲಕ್ಷಗಳು) |
|---|---|---|---|---|
| 1 | 48 ಕೊನೆಗಳು (6 ಬೇಸಿನ್X 8 ಕೊನೆಗಳು) | 3.921 | 0.392 | 3.5289 |
| 2 | 36 ಕೊನೆಗಳು | 3.535 | 0.354 | 3.1815 |

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್)/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಯ ಅರ್ಹತೆಯ ಬಗ್ಗೆ ಪರಿಶೀಲಿಸುವುದು.
2. ಸರಿಯಿದ್ದಲ್ಲಿ ಅರ್ಜಿಯಲ್ಲಿನ ಮಾಹಿತಿಯನ್ನು ಸ್ಥಳ ಪರಿಶೀಲನೆಯೊಂದಿಗೆ ದೃಢಪಡಿಸಿಕೊಳ್ಳುವುದು ಮತ್ತು ಫಲಾನುಭವಿ ಆಯ್ಕೆಗಾಗಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
3. ಮಂಜೂರಾತಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಅರ್ಜಿದಾರರಿಗೆ ಕಾರ್ಯಾದೇಶ ನೀಡುವುದು.
4. ಕೇಂದ್ರ ರೇಷ್ಮೆ ಮಂಡಳಿಯವರು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ ಸಂಸ್ಥೆಗೆ ಫಲಾನುಭವಿಯು ತನ್ನ ಪಾಲಿನ ಹಣವನ್ನು ಪಾವತಿಸಿರುವುದರ ದಾಖಲೆ ಪಡೆದು ಯಂತ್ರೋಪಕರಣ ಸರಬರಾಜುದಾರರಿಗೆ ಕಾರ್ಯಾದೇಶ ನೀಡುವುದು.
5. ಯಂತ್ರೋಪಕರಣಗಳ ಸಂಪೂರ್ಣ ಸ್ಥಾಪನೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ನಡೆಸುವುದು ಮತ್ತು ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ರೀಲಿಂಗ್ ಯಂತ್ರೋಪಕರಣದ ಛಾಯಾಚಿತ್ರ (photo) ಗಳೊಂದಿಗೆ ಪರಿವೀಕ್ಷಣಾ ವರದಿಯಿರುವ ಪ್ರಸ್ತಾವನೆಯನ್ನು ಮಹಜರ್‌ನೊಂದಿಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
6. ಮೇಲೆ ತಿಳಿಸಿರುವಂತೆ ಫಲಾನುಭವಿಯು ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿರುವುದರ ಬಗ್ಗೆ ದೃಢಪಡಿಸಿಕೊಂಡು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮತ್ತು ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರು ಮಾಡಲು ವಿತ್ತೀಯ ಪ್ರತ್ಯಾಧಿಕಾರ ನೀಡಿರುವಂತೆ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದು.
7. ಮಂಜೂರಾದ ಸಹಾಯಧನವನ್ನು ಸರಬರಾಜು ಸಂಸ್ಥೆಯ ಬ್ಯಾಂಕ್‌ಖಾತೆಗೆ ನೇರವಾಗಿ K-2/DBT ಮುಖಾಂತರ ಜಮೆ ಮಾಡುವುದು.
8. ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಿತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು.

**ಸ್ಥಳ ಪರಿಶೀಲನೆ ಸಮಯದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಮತ್ತು ದೃಢಪಡಿಸಿಕೊಳ್ಳಬೇಕಾದ ಅಂಶಗಳು:**

1. ಫಲಾನುಭವಿಯು ನಿರ್ಧಿಷ್ಟ ಗುಣಮಟ್ಟದ ಸುಧಾರಿತ ಕಾಟೇಜ್ ಬೇಸಿನ್ ರೀಲಿಂಗ್ ಯಂತ್ರೋಪಕರಣವನ್ನು ಕೇಂದ್ರ ರೇಷ್ಮೆ ಮಂಡಳಿಯವರು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ/ಸರಬರಾಜು ಸಂಸ್ಥೆಯಿಂದ ಸರಬರಾಜು ಪಡೆದು ಸ್ಥಾಪಿಸಿರಬೇಕು.
2. ಕುಟುಂಬದ ಇತರೆ ಸದಸ್ಯರಾರು ಕಾರ್ಯಕ್ರಮದ ಸವಲತ್ತನ್ನು ಪಡೆದಿರಬಾರದು.
3. ಫಲಾನುಭವಿಯು ಯಂತ್ರೋಪಕರಣದ ಘಟಕ ದರದ ತನ್ನ ಪಾಲಿನ **ಘಟಕ ದರದ ಶೇ.10** ಹಣವನ್ನು ಯಂತ್ರೋಪಕರಣ ತಯಾರಕರಿಗೆ/ಸರಬರಾಜುದಾರರಿಗೆ ಪಾವತಿಸಿರುವ ರಶೀದಿ ಮತ್ತು ಯಂತ್ರೋಪಕರಣದ ಸರಬರಾಜಿನ ಬಗ್ಗೆ ದಾಖಲಾತಿಗಳನ್ನು(ಟ್ಯಾಕ್ಸ್ ಇನ್‌ವಾಯ್ಸ್) ದೃಢಪಡಿಸಿಕೊಳ್ಳಬೇಕು.

| | | | | |
|---|---|---|---|---|
| | (6 ಬೇಸಿನ್X 6 ಕೊನೆಗಳು) | | | |

**ಕಾರ್ಯಕ್ರಮದ ಅರ್ಹತೆ/ ಅನುಸರಿಸಬೇಕಾದ ಮಾನದಂಡಗಳು:**

1. ಅರ್ಜಿದಾರರು (ರೇಷ್ಮೆ ನೂಲು ಬಿಚ್ಚಾಣಿಕೆದಾರರು/ಉದ್ದಿಮೆದಾರರು) ಘಟಕ ಸ್ಥಾಪನೆಯನ್ನು ತಮ್ಮ ಸ್ವಂತ ನಿವೇಶನ/ ಸ್ವತ್ತಿನಲ್ಲಿ ನಿರ್ಮಿಸಿರುವ ಶೆಡ್ ಅಥವಾ ಕನಿಷ್ಠ 10 ವರ್ಷಗಳಿಗೆ ಬಾಡಿಗೆ/ಗುತ್ತಿಗೆ ಒಪ್ಪಂದದ ಮೇರೆಗೆ ಪಡೆದ ನಿವೇಶನ/ಶೆಡ್‌ನಲ್ಲಿ ಘಟಕ ಸ್ಥಾಪನೆಯನ್ನು ಕೈಗೊಳ್ಳಬಹುದಾಗಿದ್ದು, ಸಂಬಂಧಪಟ್ಟ ದಾಖಲಾತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.
2. ಒಂದು ಕುಟುಂಬದ ಪಡಿತರ ಚೀಟಿಯಲ್ಲಿರುವ ಒಬ್ಬ ಸದಸ್ಯರು ಮಾತ್ರ ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ. ಈ ಹಿಂದೆ ಕುಟಂಬದ ಸದಸ್ಯರೊಬ್ಬರಿಗೆ ಈ ಸೌಲಭ್ಯವನ್ನು ಒದಗಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಫಲಾನುಭವಿ ಆಯ್ಕೆಗೆ ಪರಿಗಣಿಸುವಂತಿಲ್ಲ.
3. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2 ಅನುಪಾತದಲ್ಲಿ ಕಾಯ್ದಿರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು ಪರಿಗಣಿಸುವುದು. ಸಂಭವನೀಯ ಫಲಾನುಭವಿಗಳ ಪಟ್ಟಿಯನ್ನು ಮಂಜೂರಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
4. ಫಲಾನುಭವಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ 03 ತಿಂಗಳುಗಳಲ್ಲಿ ಘಟಕ ಸ್ಥಾಪನೆಗಾಗಿ ಕ್ರಮವಹಿಸಬೇಕು. ಇಲ್ಲದಿದ್ದ ಪಕ್ಷದಲ್ಲಿ ಫಲಾನುಭವಿ ಆಯ್ಕೆಯು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.
5. ಆಯ್ಕೆ ಪತ್ರ ಸ್ವೀಕರಿಸಿದ ಫಲಾನುಭವಿಯು ಯಂತ್ರೋಪಕರಣಗಳನ್ನು ಕೇಂದ್ರ ರೇಷ್ಮೆ ಮಂಡಳಿಯು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ ಸಂಸ್ಥೆಗೆ ತನ್ನ ಪಾಲಿನ **ಘಟಕ ದರದ ಶೇ.10 ರ** ಹಣವನ್ನು ಪಾವತಿಸಿ ಸರಬರಾಜು ಪಡೆಯತಕ್ಕದ್ದು. ಯಂತ್ರೋಪಕರಣ ಸರಬರಾಜು ಖಾತ್ರಿಯಾದ ನಂತರವೇ ಸರ್ಕಾರದ ಸಹಾಯಧನವನ್ನು ಯಂತ್ರೋಪಕರಣ ತಯಾರಕ ಸಂಸ್ಥೆಗೆ ಮಂಜೂರು ಮಾಡಲಾಗುವುದು. ಇದಕ್ಕಾಗಿ ಫಲಾನುಭವಿಯು 'ಒಪ್ಪಿಗೆ ಪತ್ರ' ನೀಡಬೇಕು.
6. ಯಂತ್ರೋಪಕರಣಗಳ ಸಂಪೂರ್ಣ(ಅನುಬಂಧ-1 ಮತ್ತು 2) ಸ್ಥಾಪನೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ಕೈಗೊಳ್ಳಲಾಗುವುದು. ಪರಿವೀಕ್ಷಣಾ ವರದಿಯಲ್ಲಿ ಯಂತ್ರೋಪಕರಣಗಳ ಸಂಪೂರ್ಣ ಸ್ಥಾಪನೆಯ ಬಗ್ಗೆ ದೃಢಪಟ್ಟ ನಂತರವೇ ರೀಲಿಂಗ್ ರಹದಾರಿ ನೀಡಲಾಗುವುದು ಮತ್ತು ಫಲಾನುಭವಿಯನ್ನು ಮುಂದಿನ ಇತರೆ ಸೌಲಭ್ಯಗಳಿಗೆ ಪರಿಗಣಿಸಲಾಗುವುದು.
7. ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ರೀಲಿಂಗ್ ಯಂತ್ರೋಪಕರಣದ ಛಾಯಾಚಿತ್ರ(photo)ಗಳನ್ನು ಸಹಾಯಧನದ ಪ್ರಸ್ತಾವನೆಯು ಹೊಂದಿರಬೇಕು.
8. ಕನಿಷ್ಠ ಮುಂದಿನ 05 ವರ್ಷಗಳವರೆಗೆ ಇಲಾಖೆ ನಿಗದಿಪಡಿಸಬಹುದಾದ ನಿಬಂಧನೆಗೆ ಒಳಪಟ್ಟು ನೂಲು ಬಿಚ್ಚಾಣಿಕೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.100/-ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಬೇಕು.
9. ರೀಲಿಂಗ್ ಘಟಕದಲ್ಲಿ ಬಾಲ ಕಾರ್ಮಿಕರನ್ನು(14 ವರ್ಷ ತುಂಬಿರದ ಮಕ್ಕಳು) ನಿಯೋಜನೆ ಮಾಡಿಕೊಳ್ಳುವುದಿಲ್ಲವೆಂದು, ಒಂದು ವೇಳೆ ಇದನ್ನು ಉಲ್ಲಂಘಿಸಿದಲ್ಲಿ ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986ರಡಿ ದಂಡನೆಗೆ ಬದ್ಧನಾಗಿರುವುದಾಗಿ ಘೋಷಣೆ ನೀಡಬೇಕು.

## ಕಾರ್ಯಕ್ರಮ : 4 - ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ರೀಲಿಂಗ್ ಘಟಕ ಸ್ಥಾಪನೆಗೆ ಸಹಾಯಧನ

**ಕಾರ್ಯಕ್ರಮದ ಉದ್ದೇಶ:**

ಸಾಂಪ್ರದಾಯಕ ರೀಲರ್‌ಗಳು ಚರಕಾದಲ್ಲಿ ಉತ್ಪಾದಿಸುವ ರೇಷ್ಮೆಯ ಗುಣಮಟ್ಟಕ್ಕಿಂತಲೂ ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆಗಾಗಿ ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ರೀಲಿಂಗ್ ಘಟಕ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು.

ಸಾಧಾರಣ ಗುಣಮಟ್ಟದ ಮಿಶ್ರ ತಳಿ ಗೂಡುಗಳ ಬಳಕೆಯೊಂದಿಗೆ ಹೆಚ್ಚಿನ ಉಷ್ಣಾಂಶದಲ್ಲಿ ಮತ್ತು ಹೆಚ್ಚಿನ ವೇಗದಲ್ಲಿ ನೇರ ನೂಲು ಬಿಚ್ಚುವ ಸುಧಾರಿತ ತಾಂತ್ರಿಕತೆಗಳನ್ನು ಅಳವಡಿಸಿರುವ ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ರೀಲಿಂಗ್ ಘಟಕ ಸ್ಥಾಪನೆಯನ್ನು ಉತ್ತೇಜಿಸುವ ಕಾರ್ಯಕ್ರಮ ಇದಾಗಿರುತ್ತದೆ. ಇಂತಹ ಘಟಕಗಳ ಸ್ಥಾಪನೆಯನ್ನು ಇಚ್ಛಿಸುವ ರಾಜ್ಯದ ರೇಷ್ಮೆ ನೂಲು ಬಿಚ್ಚಾಣಿಕೆದಾರರು/ಹೊಸದಾಗಿ ರೀಲಿಂಗ್ ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುವವರು ಶೇಕಡಾ 90ರ ಸರ್ಕಾರದ ಸಹಾಯಧನದ ಸೌಲಭ್ಯದೊಂದಿಗೆ ಯಂತ್ರೋಪಕರಣಗಳನ್ನು ಖರೀದಿಸುವ ಮೂಲಕ ಘಟಕವನ್ನು ಸ್ಥಾಪಿಸಬಹುದಾಗಿರುತ್ತದೆ.

**ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ರೀಲಿಂಗ್ ಯಂತ್ರೋಪಕರಣದ ಸಹಾಯಧನದ ಪರಿಮಿತಿಗಳು:**

| ಕ್ರ. ಸಂ. | ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ – ಟೇಬಲ್‌ಗಳು | ಯಂತ್ರೋಪಕರಣದ ಘಟಕ ದರ (ರೂ. ಲಕ್ಷಗಳು) | ಫಲಾನುಭವಿ ಪಾಲು ಘಟಕ ದರದ ಶೇ.10 (ರೂ. ಲಕ್ಷಗಳು) | ಸಹಾಯಧನ ಘಟಕ ದರದ ಶೇ.90 (ರೂ. ಲಕ್ಷಗಳು) |
|---|---|---|---|---|
| 1 | 3 ಟೇಬಲ್ (6 ಬೇಸಿನ್) | 1.500 | 0.150 | 1.350 |
| 2 | 2 ಟೇಬಲ್ (4 ಬೇಸಿನ್) | 1.000 | 0.100 | 0.900 |
| 3 | 1 ಟೇಬಲ್ (2 ಬೇಸಿನ್) | 0.500 | 0.050 | 0.450 |

**ಕಾರ್ಯಕ್ರಮದ ಅರ್ಹತೆ/ ಅನುಸರಿಸಬೇಕಾದ ಮಾನದಂಡಗಳು:**

1. ಅರ್ಜಿದಾರರು (ರೇಷ್ಮೆ ನೂಲು ಬಿಚ್ಚಾಣಿಕೆದಾರರು/ಉದ್ದಿಮೆದಾರರು) ಘಟಕ ಸ್ಥಾಪನೆಯನ್ನು ತಮ್ಮ ಸ್ವಂತ ನಿವೇಶನ/ಸ್ವತ್ತಿನಲ್ಲಿ ನಿರ್ಮಿಸಿರುವ ಶೆಡ್ ಅಥವಾ ಕನಿಷ್ಠ 10 ವರ್ಷಗಳಿಗೆ ಬಾಡಿಗೆ/ಗುತ್ತಿಗೆ ಒಪ್ಪಂದದ ಮೇರೆಗೆ ಪಡೆದ ನಿವೇಶನ/ಶೆಡ್‌ನಲ್ಲಿ ಘಟಕ ಸ್ಥಾಪನೆಯನ್ನು ಕೈಗೊಳ್ಳಬಹುದಾಗಿದ್ದು, ಸಂಬಂಧಪಟ್ಟ ದಾಖಲಾತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.
2. ಒಂದು ಕುಟುಂಬದ ಪಡಿತರ ಚೀಟಿಯಲ್ಲಿರುವ ಒಬ್ಬ ಸದಸ್ಯರು ಮಾತ್ರ ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ. ಈ ಹಿಂದೆ ಕುಟಂಬದ ಸದಸ್ಯರೊಬ್ಬರಿಗೆ ಈ ಸೌಲಭ್ಯವನ್ನು ಒದಗಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಫಲಾನುಭವಿ ಆಯ್ಕೆಗೆ ಪರಿಗಣಿಸುವಂತಿಲ್ಲ.
3. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2 ಅನುಪಾತದಲ್ಲಿ ಕಾಯ್ದಿರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು ಪರಿಗಣಿಸುವುದು. ಸಂಭವನೀಯ ಫಲಾನುಭವಿಗಳ ಪಟ್ಟಿಯನ್ನು ಮಂಜೂರಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.

4. ಫಲಾನುಭವಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ 03 ತಿಂಗಳುಗಳಲ್ಲಿ ಘಟಕ ಸ್ಥಾಪನೆಗಾಗಿ ಕ್ರಮವಹಿಸಬೇಕು. ಇಲ್ಲದಿದ್ದ ಪಕ್ಷದಲ್ಲಿ ಫಲಾನುಭವಿ ಆಯ್ಕೆಯು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.

5. ಆಯ್ಕೆ ಪತ್ರ ಸ್ವೀಕರಿಸಿದ ಫಲಾನುಭವಿಯು ಯಂತ್ರೋಪಕರಣಗಳನ್ನು ಇಲಾಖೆಯು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ ಸಂಸ್ಥೆಗೆ ತನ್ನ ಪಾಲಿನ **ಘಟಕ ದರದ ಶೇ.10 ರ** ಹಣವನ್ನು ಪಾವತಿಸಿ ಸರಬರಾಜು ಪಡೆಯತಕ್ಕದ್ದು. ಯಂತ್ರೋಪಕರಣ ಸರಬರಾಜು ಖಾತ್ರಿಯಾದ ನಂತರವೇ ಸರ್ಕಾರದ ಸಹಾಯಧನವನ್ನು ಯಂತ್ರೋಪಕರಣ ತಯಾರಕ ಸಂಸ್ಥೆಗೆ ಮಂಜೂರು ಮಾಡಲಾಗುವುದು. ಇದಕ್ಕಾಗಿ ಫಲಾನುಭವಿಯು 'ಒಪ್ಪಿಗೆ ಪತ್ರ' ನೀಡಬೇಕು.

6. ಯಂತ್ರೋಪಕರಣಗಳ ಸಂಪೂರ್ಣ (ಅನುಬಂಧ-1 ಮತ್ತು 2) ಸ್ಥಾಪನೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ಕೈಗೊಳ್ಳಲಾಗುವುದು. ಪರಿವೀಕ್ಷಣಾ ವರದಿಯಲ್ಲಿ ಯಂತ್ರೋಪಕರಣಗಳ ಸಂಪೂರ್ಣ ಸ್ಥಾಪನೆಯ ಬಗ್ಗೆ ದೃಢಪಟ್ಟ ನಂತರವೇ ರೀಲಿಂಗ್ ರಹದಾರಿ ನೀಡಲಾಗುವುದು ಮತ್ತು ಫಲಾನುಭವಿಯನ್ನು ಮುಂದಿನ ಇತರೆ ಸೌಲಭ್ಯಗಳಿಗೆ ಪರಿಗಣಿಸಲಾಗುವುದು.

7. ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ರೀಲಿಂಗ್ ಯಂತ್ರೋಪಕರಣದ ಛಾಯಾಚಿತ್ರ(photo)ಗಳನ್ನು ಸಹಾಯಧನದ ಪ್ರಸ್ತಾವನೆಯು ಹೊಂದಿರಬೇಕು.

8. ಕನಿಷ್ಠ ಮುಂದಿನ 05 ವರ್ಷಗಳವರೆಗೆ ಇಲಾಖೆ ನಿಗದಿಪಡಿಸಬಹುದಾದ ನಿಬಂಧನೆಗೆ ಒಳಪಟ್ಟು ನೂಲು ಬಿಚ್ಚಾಣಿಕೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.100/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಬೇಕು.

9. ರೀಲಿಂಗ್ ಘಟಕದಲ್ಲಿ ಬಾಲ ಕಾರ್ಮಿಕರನ್ನು (14 ವರ್ಷ ತುಂಬಿರದ ಮಕ್ಕಳು) ನಿಯೋಜನೆ ಮಾಡಿಕೊಳ್ಳುವುದಿಲ್ಲವೆಂದು, ಒಂದು ವೇಳೆ ಇದನ್ನು ಉಲ್ಲಂಘಿಸಿದಲ್ಲಿ ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986 ರಡಿ ದಂಡನೆಗೆ ಬದ್ಧನಾಗಿರುವುದಾಗಿ ಘೋಷಣೆ ನೀಡಬೇಕು.

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್)/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಯ ಅರ್ಹತೆಯ ಬಗ್ಗೆ ಪರಿಶೀಲಿಸುವುದು.
2. ಸರಿಯಿದ್ದಲ್ಲಿ ಅರ್ಜಿಯಲ್ಲಿನ ಮಾಹಿತಿಯನ್ನು ಸ್ಥಳ ಪರಿಶೀಲನೆಯೊಂದಿಗೆ ದೃಢಪಡಿಸಿಕೊಳ್ಳುವುದು ಮತ್ತು ಫಲಾನುಭವಿ ಆಯ್ಕೆಗಾಗಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
3. ಮಂಜೂರಾತಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಅರ್ಜಿದಾರರಿಗೆ ಕಾರ್ಯಾದೇಶ ನೀಡುವುದು.
4. ರೇಷ್ಮೆ ಇಲಾಖೆಯು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ ಸಂಸ್ಥೆಗೆ ಫಲಾನುಭವಿಯು ತನ್ನ ಪಾಲಿನ ಹಣವನ್ನು ಪಾವತಿಸಿರುವುದರ ದಾಖಲೆ ಪಡೆದು ಯಂತ್ರೋಪಕರಣ ಸರಬರಾಜುದಾರರಿಗೆ ಕಾರ್ಯಾದೇಶ ನೀಡುವುದು.
5. ಯಂತ್ರೋಪಕರಣಗಳ ಸಂಪೂರ್ಣ ಸ್ಥಾಪನೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ನಡೆಸುವುದು ಮತ್ತು ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ರೀಲಿಂಗ್ ಯಂತ್ರೋಪಕರಣದ ಛಾಯಾಚಿತ್ರ (photo) ಗಳೊಂದಿಗೆ ಪರಿವೀಕ್ಷಣಾ ವರದಿಯಿರುವ ಪ್ರಸ್ತಾವನೆಯನ್ನು ಮಹಜರ್‌ನೊಂದಿಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
6. ಮೇಲೆ ತಿಳಿಸಿರುವಂತೆ ಫಲಾನುಭವಿಯು ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿರುವುದರ ಬಗ್ಗೆ ದೃಢಪಡಿಸಿಕೊಂಡು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮತ್ತು

ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರು ಮಾಡಲು ವಿತ್ತೀಯ ಪ್ರತ್ಯಾಧಿಕಾರ ನೀಡಿರುವಂತೆ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದು.

7. ಮಂಜೂರಾದ ಸಹಾಯಧನವನ್ನು ಸರಬರಾಜು ಸಂಸ್ಥೆಯ ಬ್ಯಾಂಕ್‌ಖಾತೆಗೆ ನೇರವಾಗಿ K-2/DBT ಮುಖಾಂತರ ಜಮೆ ಮಾಡುವುದು.

8. ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಿತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು.

**ಸ್ಥಳ ಪರಿಶೀಲನೆ ಸಮಯದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಮತ್ತು ದೃಢಪಡಿಸಿಕೊಳ್ಳಬೇಕಾದ ಅಂಶಗಳು:**

1. ಫಲಾನುಭವಿಯು ನಿರ್ದಿಷ್ಟ ಗುಣಮಟ್ಟದ ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ರೀಲಿಂಗ್ ಯಂತ್ರೋಪಕರಣವನ್ನು ರೇಷ್ಮೆ ಇಲಾಖೆಯು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ/ಸರಬರಾಜು ಸಂಸ್ಥೆಯಿಂದ ಸರಬರಾಜು ಪಡೆದು ಸ್ಥಾಪಿಸಿರಬೇಕು.
2. ಕುಟುಂಬದ ಇತರೆ ಸದಸ್ಯರಾರು ಕಾರ್ಯಕ್ರಮದ ಸವಲತ್ತನ್ನು ಪಡೆದಿರಬಾರದು.
3. ಫಲಾನುಭವಿಯು ಯಂತ್ರೋಪಕರಣದ ಘಟಕ ದರದ ತನ್ನ ಪಾಲಿನ ಹಣವನ್ನು (**ಘಟಕ ದರದ ಶೇ.10**) ಯಂತ್ರೋಪಕರಣ ತಯಾರಕರಿಗೆ / ಸರಬರಾಜುದಾರರಿಗೆ ಪಾವತಿಸಿರುವ (ರಶೀದಿ) ಮತ್ತು ಯಂತ್ರೋಪಕರಣದ ಸರಬರಾಜಿನ ಬಗ್ಗೆ ದಾಖಲಾತಿಗಳನ್ನು (ಟ್ಯಾಕ್ಸ್ ಇನ್‌ವಾಯ್ಸ್) ದೃಢಪಡಿಸಿಕೊಳ್ಳಬೇಕು.

**ಕಾರ್ಯಕ್ರಮ : 5 – ಬಾಯ್ಲರ್ ಅಳವಡಿಕೆಗೆ ಸಹಾಯಧನ**

**ಕಾರ್ಯಕ್ರಮದ ಉದ್ದೇಶ:**

ರೀಲಿಂಗ್ ಘಟಕಗಳಲ್ಲಿ ಗೂಡನ್ನು ಬೇಯಿಸಲು ಮತ್ತು ರೀಲಿಂಗ್ ಬೇಸಿನ್‌ನಲ್ಲಿನ ಉಷ್ಣಾಂಶವನ್ನು ನಿರ್ವಹಿಸಲು ಅಗತ್ಯವಿರುವ 'ಸ್ಟೀಮ್'(ಉಗಿ) ಉತ್ಪಾದನೆಗಾಗಿ ಬಾಯ್ಲರ್ ಅಳವಡಿಕೆಯನ್ನು ಪ್ರೋತ್ಸಾಹಿಸುವುದು.

ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಬಹುತೇಕ ಎಲ್ಲ ಚಟುವಟಿಕೆಗಳಿಗೆ ಬಿಸಿ ನೀರಿನ ಅಗತ್ಯತೆಯಿದೆ. ಪ್ರಮುಖವಾಗಿ ರೇಷ್ಮೆ ಗೂಡು ಬೇಯಿಸುವುದಕ್ಕಾಗಿ ಹಾಗೂ ರೀಲಿಂಗ್ ಬೇಸಿನ್‌ಗಳಲ್ಲಿನ ನೀರಿನ ಉಷ್ಣಾಂಶದ ನಿರ್ವಹಣೆಗಾಗಿ ಶಾಖದ ಅಗತ್ಯತೆಯಿದ್ದು, ಇದಕ್ಕಾಗಿ ಬಾಯ್ಲರ್ ಆಧಾರಿತ 'ಸ್ಟೀಮ್' (ಉಗಿ) ಉತ್ಪಾದನೆಯು ಪರಿಣಾಮಕಾರಿಯಾಗಿದೆ. ಕಾಟೇಜ್ ಬೇಸಿನ್ ರೀಲಿಂಗ್ ಮತ್ತು ಮಲ್ಟಿ ಎಂಡ್ ರೀಲಿಂಗ್ ಘಟಕ ಹೊಂದಿರುವ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಶೇಕಡಾ 90ರ ಸರ್ಕಾರದ ಸಹಾಯಧನದ ಸೌಲಭ್ಯದೊಂದಿಗೆ ಬಾಯ್ಲರ್ ಅಳವಡಿಸಿಕೊಳ್ಳಬಹುದಾಗಿರುತ್ತದೆ. ಈ ಮೂಲಕ ರೇಷ್ಮೆ ಉತ್ಪಾದನೆ ಹಾಗೂ ಉತ್ಪಾದಕತೆಯಲ್ಲಿ ಸುಧಾರಣೆ ತರುವುದರೊಂದಿಗೆ ಸೌದೆ/ಕಟ್ಟಿಗೆಯ ಮೇಲಿನ ಅವಲಂಬನೆಯನ್ನು ಸಹ ಕಡಿಮೆ ಮಾಡಬಹುದಾಗಿದೆ.

**ಬಾಯ್ಲರ್ ಅಳವಡಿಕೆಗೆ ಸಹಾಯಧನದ ಪರಿಮಿತಿಗಳು:**

| ಕ್ರ. ಸಂ. | ಬಾಯ್ಲರ್‌ಸಾಮರ್ಥ್ಯ (ಕೆ.ಜಿ. / ಗಂಟೆಗೆ) | ಘಟಕ ದರ (ರೂ. ಲಕ್ಷ) | ಫಲಾನುಭವಿ ಪಾಲು ಘಟಕ ದರದ ಶೇ.10 (ರೂ. ಲಕ್ಷಗಳು) | ಸಹಾಯಧನ ಘಟಕ ದರದ ಶೇ.90 (ರೂ. ಲಕ್ಷಗಳು) |
|---|---|---|---|---|
| 1 | ಸ್ಟೀಮ್- ಗಂಟೆಗೆ | 1.580 | 0.158 | 1.422 |

| | | | | |
|---|---|---|---|---|
| | 50 ಕೆ.ಜಿ. | | | |
| 2 | ಸ್ಟೀಮ್– ಗಂಟೆಗೆ 100 ಕೆ.ಜಿ. | 2.700 | 0.270 | 2.430 |

**ಕಾರ್ಯಕ್ರಮದ ಅರ್ಹತೆ/ ಅನುಸರಿಸಬೇಕಾದ ಮಾನದಂಡಗಳು:**

1. ಕಾಟೇಜ್ ಬೇಸಿನ್ ರೀಲಿಂಗ್ ಮತ್ತು ಮಲ್ಟಿ ಎಂಡ್‌ರೀಲಿಂಗ್‌ರೇಷ್ಮೆ ನೂಲು ಬಿಚ್ಚಾಣಿಕೆದಾರರು ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ. ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ಹೊಂದಿರುವ ಘಟಕಗಳನ್ನು ಈ ಸೌಲಭ್ಯದಿಂದ ಹೊರತುಪಡಿಸಿದೆ.
2. ಕಾಟೇಜ್‌ಬೇಸಿನ್‌ರೀಲಿಂಗ್‌ಘಟಕಕ್ಕೆ ಬಾಯ್ಲರ್‌ಸಾಮರ್ಥ್ಯವನ್ನು ಸ್ಟೀಮ್‌ಉತ್ಪಾದನಾ ಸಾಮರ್ಥ್ಯ ಗಂಟೆಗೆ 50 ಕೆ.ಜಿ.ಗೆ ಮತ್ತು ಮಲ್ಟಿ ಎಂಡ್‌ರೀಲಿಂಗ್‌ಘಟಕಕ್ಕೆ ಬಾಯ್ಲರ್‌ಸಾಮರ್ಥ್ಯವನ್ನು ಸ್ಟೀಮ್‌ಉತ್ಪಾದನಾ ಸಾಮರ್ಥ್ಯ ಗಂಟೆಗೆ 100 ಕೆ.ಜಿ.ಗಳಿಗೆ ಸೀಮಿತಗೊಳಿಸಿದೆ.
3. ಒಬ್ಬ ರೀಲರ್ ಒಂದು ಘಟಕಕ್ಕೆ ಸೀಮಿತಗೊಂಡಂತೆ ಮಾತ್ರ ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
4. ರೀಲಿಂಗ್ ಘಟಕದ ಒಡೆತನವನ್ನು ಹೊಂದಿರುವ ಅರ್ಜಿದಾರರು ಮಾತ್ರ ಕಾರ್ಯಕ್ರಮದ ಫಲಾನುಭವಿ ಆಯ್ಕೆಗೆ ಅರ್ಹರಿರುತ್ತಾರೆ. ಬಾಡಿಗೆ/ಲೀಸ್ ಆಧಾರದ ಮೇಲೆ ರೀಲಿಂಗ್ ಘಟಕವನ್ನು ನಡೆಸುತ್ತಿರುವ ಹಾಗೂ ಇದಕ್ಕಾಗಿ ರೀಲಿಂಗ್ ಲೈಸನ್ಸ್ ಹೊಂದಿರುವ ರೀಲರ್‌ಗಳು ಕಾರ್ಯಕ್ರಮದ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
5. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2 ಅನುಪಾತದಲ್ಲಿ ಕಾಯ್ದಿರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು ಪರಿಗಣಿಸುವುದು. ಸಂಭವನೀಯ ಫಲಾನುಭವಿಗಳ ಪಟ್ಟಿಯನ್ನು ಮಂಜೂರಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
6. ಫಲಾನುಭವಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ 02 ತಿಂಗಳುಗಳಲ್ಲಿ ಬಾಯ್ಲರ್‌ಅಳವಡಿಕೆಗೆ ಕ್ರಮವಹಿಸಬೇಕು. ಇಲ್ಲದಿದ್ದ ಪಕ್ಷದಲ್ಲಿ ಫಲಾನುಭವಿ ಆಯ್ಕೆಯು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.
7. ಆಯ್ಕೆ ಪತ್ರ ಸ್ವೀಕರಿಸಿದ ಫಲಾನುಭವಿಯು ಬಾಯ್ಲರ್‌ಅನ್ನು ಕೇಂದ್ರ ರೇಷ್ಮೆ ಮಂಡಳಿಯವರು ಅಧಿಕೃತವಾಗಿ ಗುರುತಿಸಿರುವ ಯಂತ್ರೋಪಕರಣ ತಯಾರಕ/ಸರಬರಾಜು ಸಂಸ್ಥೆಗೆ ತನ್ನ ಪಾಲಿನ **ಘಟಕ ದರದ ಶೇ.10 ರ** ಹಣವನ್ನು ಪಾವತಿಸಿ ಸರಬರಾಜು ಪಡೆಯತಕ್ಕದ್ದು. ಬಾಯ್ಲರ್‌ಸರಬರಾಜು ಖಾತ್ರಿಯಾದ ನಂತರವೇ ಸರ್ಕಾರದ ಸಹಾಯಧನವನ್ನು ತಯಾರಕ/ಸರಬರಾಜು ಸಂಸ್ಥೆಗೆ ಮಂಜೂರು ಮಾಡಲಾಗುವುದು. ಇದಕ್ಕಾಗಿ ಫಲಾನುಭವಿಯು 'ಒಪ್ಪಿಗೆ ಪತ್ರ' ನೀಡಬೇಕು.
8. ಬಾಯ್ಲರ್‌ಸ್ಥಾಪನೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ಕೈಗೊಳ್ಳಲಾಗುವುದು. ಪರಿವೀಕ್ಷಣೆ ವರದಿಯಲ್ಲಿ ಯಾವುದೇ ನ್ಯೂನತೆಗಳು ಇಲ್ಲದಿರುವುದು ಖಾತ್ರಿಯಾಗಬೇಕು. ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ಬಾಯ್ಲರ್‌ನ ಛಾಯಾಚಿತ್ರ (photo) ವನ್ನು ಸಹಾಯಧನದ ಪ್ರಸ್ತಾವನೆಯು ಹೊಂದಿರಬೇಕು.
9. ಕನಿಷ್ಠ ಮುಂದಿನ 05 ವರ್ಷಗಳವರೆಗೆ ಇಲಾಖೆ ನಿಗದಿಪಡಿಸಬಹುದಾದ ನಿಬಂಧನೆಗೆ ಒಳಪಟ್ಟು ನೂಲು ಬಿಚ್ಚಾಣಿಕೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.100/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಬೇಕು.
10. ರೀಲಿಂಗ್ ಘಟಕದಲ್ಲಿ ಬಾಲ ಕಾರ್ಮಿಕರನ್ನು (14 ವರ್ಷ ತುಂಬಿರದ ಮಕ್ಕಳು) ನಿಯೋಜನೆ ಮಾಡಿಕೊಳ್ಳುವುದಿಲ್ಲವೆಂದು, ಒಂದು ವೇಳೆ ಇದನ್ನು ಉಲ್ಲಂಘಿಸಿದಲ್ಲಿ ಮಕ್ಕಳ

ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986 ರಡಿ ದಂಡನೆಗೆ ಬದ್ಧನಾಗಿರುವುದಾಗಿ ಘೋಷಣೆ ನೀಡಬೇಕು.

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್)/ ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಯ ಅರ್ಹತೆಯ ಬಗ್ಗೆ ಪರಿಶೀಲಿಸುವುದು.
2. ಸರಿಯಿದ್ದಲ್ಲಿ ಅರ್ಜಿಯಲ್ಲಿನ ಮಾಹಿತಿಯನ್ನು ಸ್ಥಳ ಪರಿಶೀಲನೆಯೊಂದಿಗೆ ದೃಢಪಡಿಸಿಕೊಳ್ಳುವುದು ಮತ್ತು ಫಲಾನುಭವಿ ಆಯ್ಕೆಗಾಗಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
3. ಮಂಜೂರಾತಿ ಪ್ರಾಧಿಕಾರದ ಅನುಮೋದನೆಯೊಂದಿಗೆ ಅರ್ಜಿದಾರರಿಗೆ ಕಾರ್ಯಾದೇಶ ನೀಡುವುದು.
4. ಕೇಂದ್ರ ರೇಷ್ಮೆ ಮಂಡಳಿಯಿಂದ ಅಧಿಕೃತವಾಗಿ ಗುರುತಿಸಿರುವ ಬಾಯ್ಲರ್‌ಸರಬರಾಜು ಸಂಸ್ಥೆಗೆ ಫಲಾನುಭವಿಯು ತನ್ನ ಪಾಲಿನ ಹಣವನ್ನು ಪಾವತಿಸಿರುವುದರ ದಾಖಲೆ ಪಡೆದು ಬಾಯ್ಲರ್‌ಸರಬರಾಜುದಾರರಿಗೆ ಕಾರ್ಯಾದೇಶ ನೀಡುವುದು.
5. ಬಾಯ್ಲರ್ ಅಳವಡಿಕೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ನಡೆಸುವುದು ಮತ್ತು ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ಬಾತ್ಲರ್‌ನ ಛಾಯಾಚಿತ್ರ (photo) ದೊಂದಿಗೆ ಪರಿವೀಕ್ಷಣಾ ವರದಿಯಿರುವ ಪ್ರಸ್ತಾವನೆಯನ್ನು ಮಹಜರ್‌ನೊಂದಿಗೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು.
6. ಮೇಲೆ ತಿಳಿಸಿರುವಂತೆ ಫಲಾನುಭವಿಯು ನಿಗದಿಪಡಿಸಿದ ಮಾನದಂಡಗಳನ್ನು ಅನುಸರಿಸಿರುವುದರ ಬಗ್ಗೆ ದೃಢಪಡಿಸಿಕೊಂಡು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮತ್ತು ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರು ಮಾಡಲು ವಿತ್ತೀಯ ಪ್ರತ್ಯಾಧಿಕಾರ ನೀಡಿರುವಂತೆ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವುದು.
7. ಮಂಜೂರಾದ ಸಹಾಯಧನವನ್ನು ಸರಬರಾಜು ಸಂಸ್ಥೆಯ ಬ್ಯಾಂಕ್‌ಖಾತೆಗೆ ನೇರವಾಗಿ K-2/DBT ಮುಖಾಂತರ ಜಮೆ ಮಾಡುವುದು.
8. ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಿತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು.

**ಸ್ಥಳ ಪರಿಶೀಲನೆ ಸಮಯದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಮತ್ತು ದೃಢಪಡಿಸಿಕೊಳ್ಳಬೇಕಾದ ಅಂಶಗಳು:**

1. ಫಲಾನುಭವಿಯು ನಿರ್ದಿಷ್ಟ ಗುಣಮಟ್ಟದ ಬಾಯ್ಲರ್‌ಅನ್ನು ಕೇಂದ್ರ ರೇಷ್ಮೆ ಮಂಡಳಿಯವರು ಅಧಿಕೃತವಾಗಿ ಗುರುತಿಸಿರುವ ಬಾಯ್ಲರ್‌ತಯಾರಕ/ಸರಬರಾಜು ಸಂಸ್ಥೆಯಿಂದ ಸರಬರಾಜು ಪಡೆದು ಸ್ಥಾಪಿಸಿರಬೇಕು..
2. ಕುಟುಂಬದ ಇತರೆ ಸದಸ್ಯರಾರು ಕಾರ್ಯಕ್ರಮದ ಸವಲತ್ತನ್ನು ಪಡೆದಿರಬಾರದು.
3. ಫಲಾನುಭವಿಯು ಬಾಯ್ಲರ್‌ನ ಘಟಕ ದರದ ತನ್ನ ಪಾಲಿನ ಹಣವನ್ನು (**ಘಟಕ ದರದ ಶೇ.10**) ಬಾಯ್ಲರ್‌ತಯಾರಕರಿಗೆ/ಸರಬರಾಜುದಾರರಿಗೆ ಪಾವತಿಸಿರುವ ರಶೀದಿ ಮತ್ತು ಬಾಯ್ಲರ್ ಸರಬರಾಜಿನ ಬಗ್ಗೆ ದಾಖಲಾತಿಗಳನ್ನು (ಟ್ಯಾಕ್ಸ್ ಇನ್‌ವಾಯ್ಸ್) ದೃಢಪಡಿಸಿಕೊಳ್ಳಬೇಕು.

**ಕಾರ್ಯಕ್ರಮ : 6 - ಶಬ್ದರಹಿತ ಜನರೇಟರ್ ಅಳವಡಿಕೆಗೆ ಸಹಾಯಧನ**

**ಕಾರ್ಯಕ್ರಮದ ಉದ್ದೇಶ:**

ಕಾಟೇಜ್ ರೀಲಿಂಗ್ ಘಟಕಗಳಲ್ಲಿ ವಿದ್ಯುತ್ ಅಡಚಣೆಯಿಲ್ಲದೆ ರೇಷ್ಮೆಯ ನಿರಂತರ ಉತ್ಪಾದನೆಗಾಗಿ ಶಬ್ದರಹಿತ ಜನರೇಟರ್ ಅಳವಡಿಕೆಯನ್ನು ಪ್ರೋತ್ಸಾಹಿಸುವುದು.

ರಾಜ್ಯದ ಒಟ್ಟು ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಕಾಟೇಜ್ ಬೇಸಿನ್ ರೀಲಿಂಗ್ ಯಂತ್ರೋಪಕರಣದಿಂದ ಉತ್ಪಾದನೆಯಾಗುತ್ತಿರುವ ಕಚ್ಚಾ ರೇಷ್ಮೆಯ ಪರಿಮಾಣ ಶೇ.70 ರಷ್ಟಿದೆ. ಇಂತಹ ಘಟಕಗಳು ವಿದ್ಯುತ್ ಅಡಚಣೆಯಿಲ್ಲದೆ ನಿರಂತರವಾಗಿ ಕಾರ್ಯನಿರ್ವಹಿಸಲು

ಶೇಕಡಾ 90 ರ ಸರ್ಕಾರದ ಸಹಾಯಧನದ ಸೌಲಭ್ಯದೊಂದಿಗೆ ಶಬ್ದರಹಿತ ಜನರೇಟರ್ ಅನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ. ಈ ಮೂಲಕ ರೇಷ್ಮೆ ಉತ್ಪಾದನೆ ಹಾಗೂ ಉತ್ಪಾದಕತೆಯಲ್ಲಿ ಸುಧಾರಣೆ ತರುವುದರೊಂದಿಗೆ, ಶಬ್ದ ಮಾಲಿನ್ಯವನ್ನು ಸಹ ತಡೆಗಟ್ಟಬಹುದಾಗಿರುತ್ತದೆ.

**ಶಬ್ದರಹಿತ ಜನರೇಟರ್ ಅಳವಡಿಕೆಗೆ ಸಹಾಯಧನದ ಪರಿಮಿತಿಗಳು:**

| ಕ್ರ. ಸಂ. | ಘಟಕ | ಶಬ್ದರಹಿತ ಜನರೇಟರ್ (ಕೆವಿಎ ಗಳಲ್ಲಿ) | ಘಟಕ ದರ (ರೂ. ಲಕ್ಷ) | ಫಲಾನುಭವಿ ಪಾಲು ಘಟಕ ದರದ ಶೇ.10 (ರೂ. ಲಕ್ಷಗಳು) | ಸಹಾಯಧನ ಘಟಕ ದರದ ಶೇ.90 (ರೂ. ಲಕ್ಷಗಳು) |
|---|---|---|---|---|---|
| 1 | ಸುಧಾರಿತ ಕಾಟೇಜ್‌ಬೇಸಿನ್ | 5 ಕೆವಿಎ – ತ್ರೀ ಫೇಸ್ | 2.070 | 0.207 | 1.863 |
| 2 | ಸುಧಾರಿತ ಕಾಟೇಜ್‌ಬೇಸಿನ್ | 5 ಕೆವಿಎ – ಸಿಂಗಲ್‌ಫೇಸ್ | 1.930 | 0.193 | 1.737 |
| 3 | ಇಟಾಲಿಯನ್‌ಮಾದರಿ ಕಾಟೇಜ್‌ಬೇಸಿನ್ | 2 ಕೆವಿಎ | 0.900 | 0.090 | 0.810 |

**ಕಾರ್ಯಕ್ರಮದ ಅರ್ಹತೆ/ ಅನುಸರಿಸಬೇಕಾದ ಮಾನದಂಡಗಳು:**

1. ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಸುಧಾರಿತ ಕಾಟೇಜ್ ಬೇಸಿನ್ ಹೊಂದಿರುವ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ 5 ಕೆವಿಎ ಸಾಮರ್ಥ್ಯಕ್ಕೆ ಮತ್ತು ಇಟಾಲಿಯನ್ ಮಾದರಿ ಕಾಟೇಜ್ ಬೇಸಿನ್ ಹೊಂದಿರುವ (ಕನಿಷ್ಠ 2 ಟೇಬಲ್) ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ 2 ಕೆವಿಎ ಸಾಮರ್ಥ್ಯಕ್ಕೆ ಸೀಮಿತಗೊಳಿಸಿದೆ.
2. ಒಬ್ಬ ರೀಲರ್ ಒಂದು ಘಟಕಕ್ಕೆ ಸೀಮಿತಗೊಂಡಂತೆ ಮಾತ್ರ ಕಾರ್ಯಕ್ರಮದ ಸಹಾಯಧನದ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
3. ರೀಲಿಂಗ್ ಘಟಕದ ಒಡೆತನವನ್ನು ಹೊಂದಿರುವ ಅರ್ಜಿದಾರರು ಮಾತ್ರ ಕಾರ್ಯಕ್ರಮದ ಫಲಾನುಭವಿ ಆಯ್ಕೆಗೆ ಅರ್ಹರಿರುತ್ತಾರೆ. ಬಾಡಿಗೆ/ಲೀಸ್ ಆಧಾರದ ಮೇಲೆ ರೀಲಿಂಗ್ ಘಟಕವನ್ನು ನಡೆಸುತ್ತಿರುವ ಹಾಗೂ ಇದಕ್ಕಾಗಿ ರೀಲಿಂಗ್ ಲೈಸನ್ಸ್ ಹೊಂದಿರುವ ರೀಲರ್‌ಗಳು ಕಾರ್ಯಕ್ರಮದ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
4. ಅರ್ಜಿಯನ್ನು ಸಂಬಂಧಪಟ್ಟ ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್) ಅಧಿಕಾರಿಗಳಿಗೆ/ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳ ಕಛೇರಿಯಲ್ಲಿ ಆಯಾ ಕಛೇರಿಯ ಪ್ರಕಟಣೆಯ ದಿನಾಂಕದಿಂದ ಮುಂದಿನ 30 ದಿನದೊಳಗೆ ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರವೇ ವಾರ್ಷಿಕ ಕ್ರಿಯಾ ಯೋಜನೆಗೆ 1:2 ಅನುಪಾತದಲ್ಲಿ ಕಾಯ್ದಿರಿಸುವಿಕೆಯೊಂದಿಗೆ ಪ್ರಸಕ್ತ ಸಾಲಿನ ಸಂಭವನೀಯ ಫಲಾನುಭವಿಗಳೆಂದು ಪರಿಗಣಿಸುವುದು. ಸಂಭವನೀಯ ಫಲಾನುಭವಿಗಳ ಪಟ್ಟಿಯನ್ನು ಮಂಜೂರಾತಿ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು.
5. ಫಲಾನುಭವಿಯಾಗಿ ಆಯ್ಕೆ ಪತ್ರ ಸ್ವೀಕರಿಸಿದ 02 ತಿಂಗಳುಗಳಲ್ಲಿ ಜನರೇಟರ್ ಅಳವಡಿಕೆಗೆ ಕ್ರಮವಹಿಸಬೇಕು. ಇಲ್ಲದಿದ್ದ ಪಕ್ಷದಲ್ಲಿ ಫಲಾನುಭವಿ ಆಯ್ಕೆಯು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.
6. ಆಯ್ಕೆ ಪತ್ರ ಸ್ವೀಕರಿಸಿದ ಫಲಾನುಭವಿಯು ಶಬ್ದರಹಿತ ಜನರೇಟರ್ ಅನ್ನು ರಾಜ್ಯ ರೇಷ್ಮೆ ಇಲಾಖೆಯು ಅಧಿಕೃತವಾಗಿ ಗುರುತಿಸಿರುವ ಜನರೇಟರ್ ತಯಾರಕ/ಸರಬರಾಜು ಸಂಸ್ಥೆಗೆ ತನ್ನ ಪಾಲಿನ **ಘಟಕ ದರದ ಶೇ.10 ರ** ಹಣವನ್ನು ಪಾವತಿಸಿ ಸರಬರಾಜು ಪಡೆಯತಕ್ಕದ್ದು. ಜನರೇಟರ್‌ಸರಬರಾಜು ಖಾತ್ರಿಯಾದ ನಂತರವೇ ಸರ್ಕಾರದ ಸಹಾಯಧನವನ್ನು ತಯಾರಕ/ಸರಬರಾಜು ಸಂಸ್ಥೆಗೆ ಮಂಜೂರು ಮಾಡಲಾಗುವುದು. ಇದಕ್ಕಾಗಿ ಫಲಾನುಭವಿಯು 'ಒಪ್ಪಿಗೆ ಪತ್ರ' ನೀಡಬೇಕು.

7. ಜನರೇಟರ್‌ಸ್ಥಾಪನೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ಪರಿವೀಕ್ಷಣೆ ಕೈಗೊಳ್ಳಲಾಗುವುದು. ಪರಿವೀಕ್ಷಣೆ ವರದಿಯಲ್ಲಿ ಯಾವುದೇ ನ್ಯೂನತೆಗಳು ಇಲ್ಲದಿರುವುದು ಖಾತ್ರಿಯಾಗಬೇಕು. ಜಿಪಿಎಸ್ ಅಳವಡಿಕೆಯೊಂದಿಗೆ ಫಲಾನುಭವಿ ಮತ್ತು ಇಲಾಖೆ ಅಧಿಕಾರಿಗಳಿರುವ ಜನರೇಟರ್‌ನ ಛಾಯಾಚಿತ್ರ (photo) ವನ್ನು ಸಹಾಯಧನದ ಪ್ರಸ್ತಾವನೆಯು ಹೊಂದಿರಬೇಕು.

8. ಕನಿಷ್ಠ ಮುಂದಿನ 05 ವರ್ಷಗಳವರೆಗೆ ಇಲಾಖೆ ನಿಗದಿಪಡಿಸಬಹುದಾದ ನಿಬಂಧನೆಗೆ ಒಳಪಟ್ಟು ನೂಲು ಬಿಚ್ಚಾಣಿಕೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ರೂ.100/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ನೀಡಬೇಕು.

9. ರೀಲಿಂಗ್ ಘಟಕದಲ್ಲಿ ಬಾಲ ಕಾರ್ಮಿಕರನ್ನು (14 ವರ್ಷ ತುಂಬಿರದ ಮಕ್ಕಳು) ನಿಯೋಜನೆ ಮಾಡಿಕೊಳ್ಳುವುದಿಲ್ಲವೆಂದು; ಒಂದು ವೇಳೆ ಇದನ್ನು ಉಲ್ಲಂಘಿಸಿದಲ್ಲಿ ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986 ರಡಿ ದಂಡನೆಗೆ ಬದ್ಧನಾಗಿರುವುದಾಗಿ ಘೋಷಣೆ ನೀಡಬೇಕು.

**ಇಲಾಖೆ ಅಧಿಕಾರಿಗಳು ಸಮುಚಿತ ಮಾರ್ಗದಲ್ಲಿ ಅನುಸರಿಸಬೇಕಾದ ಕ್ರಮಗಳು:**

1. ರೇಷ್ಮೆ ವಿಸ್ತರಣಾಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ (ರೀಲಿಂಗ್)/ ಗೂಡಿನ ನಂತರದ ಚಟುವಟಿಕೆ ಅಧಿಕಾರಿಗಳು ಫಲಾನುಭವಿಯು ದಾಖಲಾತಿಗಳೊಂದಿಗೆ ಸಲ್ಲಿಸಿದ ಅರ್ಜಿಯ ಅರ್ಹತೆಯ ಬಗ್ಗೆ ಪರಿಶೀಲಿಸುವುದು.

